RNI .KAR/KAN/2009/31934 ಬೆಂಗಳೂರು ಸಂಪುಟ: 16 ಸಂಚಿಕೆ: 106 ಪುಟ: 06 ಶನಿವಾರ 22-03-2025

₹ 3 Mail:mussanje2010@gmail.com www.mussanjenews.com

# ಮುಸ್ಸಂಜೆ


ಪ್ರಭಾವಶಾಲಿ ಕನ್ನಡ ಸಂಜೆ ದಿನ ಪತ್ರಿಕೆ

Managing Editor: N.Veerendra Babu (MBA, LLB)

Executive Editor: L P Babu

Honourary Editor: Venkatesh

ಸುದ್ದಿ, ಜಾಹೀರಾತು ಹಾಗೂ ಪತ್ರಿಕೆಗೆ ಚಂದಾದಾರರಾಗಲು ಸಂಪರ್ಕಿಸಿ: 9448074878



ತನ್ನದೇ ಹೆಸರನ್ನು ತಪ್ಪಾಗಿ ಕರೆದುಕೊಂಡ ರಣಬೀರ್

82ನೇ ವಯಸ್ಸಲ್ಲಿ ಕೋಟಿ ದುಡಿಯುವ ಅಮಿತಾಭ್

'ಶಿಕ್ಷೆ ಕೊಡಲು ಸಿನಿಮಾ ತೋರಿಸಿದರು' ಪುಟ 6

## ಎಂಇಎಸ್ ಪುಂಡರ ನಡೆ ವಿರುದ್ಧ ರಾಜ್ಯವ್ಯಾಪಿ ಬಂದ್ ನಡೆಸಿದ ಹೋರಾಟಗಾರರು;

# ಕನ್ನಡಿಗರ ಕಿಚ್ಚು

## ವಾಟಾಳ್ ನಾಗರಾಜ್, ಸಾರಾ ಗೋವಿಂದ್ ಸೇರಿ ಹಲವರ ಬಂಧನ

ಬೆಂಗಳೂರು: ಮಹಾರಾಷ್ಟ್ರ ಏಕೀಕರಣ ಸಮಿತಿ ಸದಸ್ಯರ ಪುಂಡಾಟಿಕೆಯನ್ನು ಖಂಡಿಸಿ ಇಂದು ಕನ್ನಡಪರ ಸಂಘಟನೆಗಳು ಕರ್ನಾಟಕ ಬಂದ್‌ಗೆ ಕರೆ ನೀಡಿದ್ದು, ಈ ಬಂದ್‌ಗೆ ರಾಜ್ಯವ್ಯಾಪಿ ಉತ್ತಮ ಬೆಂಬಲ ವ್ಯಕ್ತವಾಗಿದೆ.

ಮರಾಠಿ ಭಾಷೆಯಲ್ಲಿ ಮಾತನಾಡುವಂತೆ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ನಿರ್ವಾಹಕನ ಮೇಲೆ ಭಾಷಾಂಧರು ನಡೆಸಿದ ಹಲ್ಲೆಯನ್ನು ಖಂಡಿಸಿ ವಾಟಾಳ್ ನಾಗರಾಜ್ ನೇತೃತ್ವದಲ್ಲಿ ಸುಮಾರು 200ಕ್ಕೂ ಹೆಚ್ಚು ಕನ್ನಡಪರ ಸಂಘಟನೆಗಳು ಇಂದು ಬಂದ್‌ಗೆ ಕರೆ ನೀಡಿದ್ದವು.

ರಾಜ್ಯದಲ್ಲಿರುವ ಎಂಇಎಸ್ ಪುಂಡರನ್ನು ಗಡಿಪಾರು ಮಾಡಬೇಕು, ಎಂಇಎಸ್ ಸಂಘಟನೆಯನ್ನು ನಿಷೇಧಿಸಬೇಕು ಹಾಗೂ ಕನ್ನಡಿಗರಿಗೆ ರಕ್ಷಣೆ ನೀಡಬೇಕು ಎಂಬಿತ್ಯಾದಿ ಬೇಡಿಕೆಗಳನ್ನು ಮುಂದಿಟ್ಟು ಬಂದ್‌ಗೆ ಕರೆ ನೀಡಲಾಗಿತ್ತು.

ಬೆಂಗಳೂರು ಸೇರಿದಂತೆ ರಾಜ್ಯದ ಬಹುತೇಕ ಜಿಲ್ಲೆಗಳಲ್ಲಿ ಬಂದ್‌ಗೆ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಯಿತು. ಮಂಡ್ಯ, ಹಾಸನ, ಮೈಸೂರು, ಬೆಳಗಾವಿ, ಕೊಪ್ಪಳ, ಚಾಮರಾಜನಗರ, ಚಿಕ್ಕಮಗಳೂರು ಮುಂತಾದ ಜಿಲ್ಲೆಗಳಲ್ಲಿ ಬಂದ್ ಭಾಗಶಃ ಯಶಸ್ವಿಯಾಗಿದೆ. ಕೆಲವು ಜಿಲ್ಲೆಗಳಲ್ಲಿ ಬಂದ್‌ಗೆ ಮಿಶ್ರ ಪ್ರತಿಕ್ರಿಯೆ ವ್ಯಕ್ತವಾಗಿದೆ.

ರಾಜ್ಯದ ಬಹುತೇಕ ಜಿಲ್ಲೆಗಳಲ್ಲಿ ಜನಸಾಮಾನ್ಯರು ರಸ್ತೆಗಳಿಗೆ ಬರಲಿಲ್ಲ. ಆದರೆ ಅಗತ್ಯ ಸೇವೆಗಳು ಮಾತ್ರ ಎಂದಿನಂತಿದ್ದವು.

ಕೆಎಸ್‌ಆರ್‌ಟಿಸಿ ಬಿಎಂಟಿಸಿ ಬಸ್‌ಗಳು ಎಂದಿನಂತೆ ಸಂಚಾರ ನಡೆಸಿದವು. ಖಾಸಗಿ ಸಾರಿಗೆಯೂ ರಸ್ತೆಯಲ್ಲಿತ್ತಾದರೂ ಜನಸಾಮಾನ್ಯರು ಬಾರದೇ ಇದ್ದುದರಿಂದ ಖಾಲಿ ಹೊಡೆಯುತ್ತಿದ್ದವು. ಅಂಗಡಿ-



ಮುಗ್ಗಟ್ಟುಗಳು ಎಂದಿನಂತೆ ತೆರೆದಿದ್ದವು.

ಹೋರಾಟಗಾರರು ಮಾತ್ರ ಎಲ್ಲಿಯೂ ಎದೆಗುಂದದೇ ತಮ್ಮ ಪ್ರತಿಭಟನೆಯನ್ನು ನಡೆಸಿದರು. ಈ ವೇಳೆ ಮಹಾರಾಷ್ಟ್ರ ಸರ್ಕಾರ ಮತ್ತು ಎಂಇಎಸ್ ಸಂಘಟನೆ ವಿರುದ್ಧ ಘೋಷಣೆ ಕೂಗಿದ್ದಲ್ಲದೇ ರಾಜ್ಯ ಸರ್ಕಾರದ ನಡೆಯನ್ನು ತೀವ್ರವಾಗಿ ಖಂಡಿಸಿದರು. ಅಲ್ಲದೇ ರಾಜ್ಯ ಪೊಲೀಸರ ನಡೆಗೂ ಕೂಡ ಆಕ್ರೋಶ ವ್ಯಕ್ತಪಡಿಸಿದರು.

ಪೂರ್ವ ನಿಗದಿಯಂತೆ ಟೌನ್‌ಹಾಲ್ ಬಳಿ ಪ್ರತಿಭಟನೆ ನಡೆಸಲು ಮುಂದಾದ ಕನ್ನಡ ಪರ ಸಂಘಟನೆಗಳ ನೂರಾರು ಕಾರ್ಯಕರ್ತರನ್ನು ಬಂಧಿಸಲಾಯಿತು.

ಪ್ರತಿಭಟನಾ ರ್‍ಯಾಲಿ ಆರಂಭಿಸಿದ ವಾಟಾಳ್ ನಾಗರಾಜ್, ಸಾ ರಾ ಗೋವಿಂದು, ಕೆ.ಆರ್ ಕುಮಾರ್ ಅವರನ್ನು ಬಲವಂತವಾಗಿ ರ್‍ಯಾಲಿ ಆರಂಭಕ್ಕೂ ಮುನ್ನವೇ ಪೊಲೀಸರು ವಶಕ್ಕೆ ಪಡೆದರು.

ನಂತರ ಅವರನ್ನು ವಾಹನಗಳಲ್ಲಿ ತುಂಬಿ ಫ್ರೀಡಂಪಾರ್ಕನತ್ತ ಕರೆದೊಯ್ದರು. ಪುಟ 2





### ಬಂದ್: ಮಿತಿ ಮೀರಿ ವರ್ತಿಸಿದ್ರೆ ಕ್ರಮ

**ಬೆಂಗಳೂರು:** ಎಂಇಎಸ್ ನಿಷೇಧಕ್ಕೆ ಆಗ್ರಹಿಸಿ ಇಂದು ಕರ್ನಾಟಕ ಬಂದ್ ಮಾಡಲಾಗಿದ್ದು ಈ ಮಧ್ಯೆ ಬಂದ್ ವೇಳೆ ಮಿತಿ ಮೀರಿ ವರ್ತಿಸಿದರೇ ಕ್ರಮ ಕೈಗೊಳ್ಳಲಾಗುವುದು ಎಂದು ಗೃಹ ಸಚಿವ ಡಾ.ಜಿ.ಪರಮೇಶ್ವರ್ ಎಚ್ಚರಿಕೆ ನೀಡಿದ್ದಾರೆ. ಪುಟ 2



ರಾಜ್ಯಕ್ಕೆ ಆಗಮಿಸಿದ ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆಪಿ ನಡ್ಡ ಅವರನ್ನು ಬಿಜೆಪಿ ರಾಜ್ಯಾಧ್ಯಕ್ಷ ಬಿ ವೈ ವಿಜಯೇಂದ್ರ ಅವರು ವಿರೋಧ ಪಕ್ಷದ ನಾಯಕರು ಆರ್ ಅಶೋಕ್, ಛಲವಾದಿ ನಾರಾಯಣಸ್ವಾಮಿ ಅವರು ಬರಮಾಡಿಕೊಂಡು.ಈ ಸಂದರ್ಭದಲ್ಲಿ ರಾಜ್ಯ ಸಹ ಉಸ್ತುವಾರಿ ಸುಧಾಕರ್ ರೆಡ್ಡಿ ಹಾಗೂ ಶಾಸಕ ಧೀರಜ್ ಮುನಿರಾಜು, ರಾಜ್ಯ ಕಾರ್ಯದರ್ಶಿ ಶರಣು ತಳ್ಳಿಕೇರಿ ಅವರು ಉಪಸ್ಥಿತರಿದ್ದರು.

## ಕನಿಷ್ಠ ಬೆಲೆ ನೀಡಿ ನೀರಿನ ಬಾಟಲಿ ಹಿಂಪಡೆಯಲು ನಿಯಮ ರೂಪಿಸಿ

**ಬೆಂಗಳೂರು:** ನೀರು ಕುಡಿದ ಬಳಿಕ ಪ್ಲಾಸ್ಟಿಕ್ ಬಾಟಲಿಗಳನ್ನು ಎಲ್ಲೆಂದರಲ್ಲಿ ಎಸೆಯುವುದಕ್ಕೆ ಕಡಿವಾಣ ಹಾಕಲು ಮುಂದಾಗಿರುವ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವ ಈಶ್ವರ ಖಂಡ್ರೆ, ನೀರಿನ ಬಾಟಲಿ ಮಾರುವ ಮಳಿಗೆಗಳು ಕಡ್ಡಾಯವಾಗಿ ಖಾಲಿ ನೀರಿನ ಬಾಟಲಿಗೆ ಕನಿಷ್ಠ ಬೆಲೆ ನೀಡಿ ಮರು ಖರೀದಿಸುವಂತೆ ನಿಯಮ ರೂಪಿಸಲು ಸೂಚನೆ ನೀಡಿದ್ದಾರೆ.



ತತ್ಸಂಬಂಧ ನಿಯಮ ರೂಪಿಸಲು ಇಲಾಖೆಯ ಅಪರ ಮುಖ್ಯ ಕಾರ್ಯದರ್ಶಿಯವರಿಗೆ ಸೂಚನೆ ನೀಡಿರುವ ಅವರು, ಬಾಟಲಿಗಳ ಮೂಲಕ ಕುಡಿಯುವ ನೀರನ್ನು ಮಾರಾಟ ಮಾಡುವ ಕಂಪನಿಗಳಿಗೆ ಆ ಪ್ಲಾಸ್ಟಿಕ್ ಬಾಟಲಿಯ ವೈಜ್ಞಾನಿಕ ವಿಲೇವಾರಿಯ ಜವಾಬ್ದಾರಿಯೂ ಇರುತ್ತದೆ. ಈ ಹಿನ್ನೆಲೆಯಲ್ಲಿ ಖಾಲಿ ಬಾಟಲಿಗಳನ್ನು ಕನಿಷ್ಠ ದರ ನೀಡಿ ಮರಳಿ ಖರೀದಿಸುವಂತೆ ನಿಯಮ ರೂಪಿಸಿದಲ್ಲಿ ಪ್ಲಾಸ್ಟಿಕ್ ಬಾಟಲಿಯ ಹಾವಳಿ ತಡೆಯಲು ಸಾಧ್ಯವಾಗುತ್ತದೆ ಎಂದು ಅಭಿಪ್ರಾಯಪಟ್ಟಿದ್ದಾರೆ.

ಮಣ್ಣಲ್ಲಿ ಮಣ್ಣಾಗದ, ನೀರಿನಲ್ಲಿ ಕರಗದ, ಸುಟ್ಟರೆ ಪ್ರಾಣವಾಯುವಿಗೆ ವಿಷಕಾರಿ ಅಂಶಗಳನ್ನು ಸೇರ್ಪಡೆ ಮಾಡುವ ಪ್ಲಾಸ್ಟಿಕ್ ಪ್ರಕೃತಿ ಪರಿಸರಕ್ಕೆ ಅಷ್ಟೇ ಅಲ್ಲದೆ ಜನ, ಜಾನುವಾರಗಳ ಆರೋಗ್ಯಕ್ಕೂ ಮಾರಕವಾಗಿದೆ.

ಈ ಹಿನ್ನೆಲೆಯಲ್ಲಿ ಕೇಂದ್ರ ಸರ್ಕಾರ ನಿರ್ದಿಷ್ಟ ಏಕ ಬಳಕೆ ಪ್ಲಾಸ್ಟಿಕ್ ತಯಾರಿಕೆ, ದಾಸ್ತಾನು, ಮಾರಾಟ, ಬಳಕೆಯನ್ನು ನಿಷೇಧಿಸಿದ್ದು, ರಾಜ್ಯ ಸರ್ಕಾರ ಕೂಡ ಈ ಸಂಬಂಧ ನಿಯಮಗಳನ್ನು ರೂಪಿಸಿದೆ. ಆದಾಗ್ಯೂ ಏಕ ಬಳಕೆ ಪ್ಲಾಸ್ಟಿಕ್ ಉತ್ಪನ್ನಗಳು ಹೆಚ್ಚಿನ ಪುಟ 2

## ನಾನ್ಯಾವುದೇ ತಪ್ಪು ಮಾಡಿಲ್ಲಂತ ಹೈಕಮಾಂಡ್‌ಗೆ ಗೊತ್ತಿರಬೇಕಲ್ಲ

**ತುಮಕೂರು:** "ಹೈಕಮಾಂಡ್‌ಗೆ ಯಾವುದಾದರೂ ಸಿಡಿ ತೆಗೆದುಕೊಂಡು ಹೋಗಿ ಕೊಟ್ಟರೆ ಮೊದಲೇ ಅವರಿಗೆ ಗೊತ್ತಿರಬೇಕಲ್ಲ. ನಾನು ಯಾವುದೇ ರೀತಿಯ ಲೋಪ ಎಸಗಿಲ್ಲ. ದೂರು ಬಂದ್ರೆ ನಂಬಬಾರದು. ಮತ್ತು ನನ್ನ ಮೇಲೆ ಕ್ರಮ ತೆಗೆದುಕೊಳ್ಳುವ ಮುನ್ನ ನನ್ನನ್ನು ಒಮ್ಮೆ ಹೈಕಮಾಂಡ್ ಕೇಳಬೇಕು ಎಂಬುದು ನನ್ನ ಅಭಿಪ್ರಾಯ" ಎಂದು ಸಚಿವ ಕೆ.ಎನ್. ರಾಜಣ್ಣ ತಿಳಿಸಿದರು.



ನಗರದಲ್ಲಿ ಮಾಧ್ಯಮಗೋಷ್ಠಿ ನಡೆಸಿ ಮಾತನಾಡಿದ ಅವರು, "ನಾನು ಯಾವತ್ತೂ ಕೂಡ ಕೆಟ್ಟದ್ದನ್ನು ಬಯಸಲ್ಲ. ಕೆಟ್ಟದ್ದನ್ನು ಬಯಸಿದವರು ಉದ್ಧಾರ ಆಗಿಲ್ಲ. ನನಗೆ ಕೆಟ್ಟದ್ದು ಮಾಡುವ ಅವಶ್ಯಕತೆ ಇಲ್ಲ. ನನಗೆ ಆದ ರೀತಿ ಯಾರಿಗೂ ಆಗಬಾರದು. ನಾನು ಯಾವುದೇ ರಾಜಕೀಯ ಹಿನ್ನೆಲೆವುಳ್ಳವನಲ್ಲ. ಪುಟ 2

## ದೇಶದ ಎಲ್ಲ ಜಿಲ್ಲಾ ಮುಖ್ಯಸ್ಥರೊಂದಿಗೆ ರಾಹುಲ್ ಸಂವಾದ

**ನವದೆಹಲಿ:** ರಾಷ್ಟ್ರಮಟ್ಟದಲ್ಲಿ ಹಳೆಯ ಪಕ್ಷವನ್ನು ಪುನರುಜ್ಜೀವನಗೊಳಿಸಲು ಕಾಂಗ್ರೆಸ್‌ನ ವಾಸ್ತವತೆಯ ಬಗ್ಗೆ ತಿಳಿದುಕೊಳ್ಳಲು ಕಾಂಗ್ರೆಸ್ ನಾಯಕ ಹಾಗೂ ಸಂಸದ ರಾಹುಲ್ ಗಾಂಧಿ ನೇರವಾಗಿ ಜಿಲ್ಲಾ ಘಟಕಗಳ ಮುಖ್ಯಸ್ಥರಿಂದ ಮಾಹಿತಿ ಸಂಗ್ರಹಿಸಲು ನಿರ್ಧರಿಸಿದ್ದಾರೆ. ಪುಟ 2

## ವಕೀಲರ ಸಂಘದ ಚುನಾವಣೆಗೆ ಹೈ ತಡೆ

**ಬೆಂಗಳೂರು:** ತುಮಕೂರು ಜಿಲ್ಲಾ ವಕೀಲರ ಸಂಘದ ಪದಾಧಿಕಾರಿಗಳ ಆಯ್ಕೆಗೆ ಏಪ್ರಿಲ್ 5ರಂದು ನಡೆಯಬೇಕಿದ್ದ ಚುನಾವಣೆಗೆ ಹೈಕೋರ್ಟ್ ತಡೆಯಾಜ್ಞೆ ನೀಡಿತು. ಚುನಾವಣೆಯಲ್ಲಿ ಮಹಿಳಾ ಅಭ್ಯರ್ಥಿಗಳಿಗೆ ಶೇ.33ರಷ್ಟು ಮೀಸಲು ಕಲ್ಪಿಸಲು ವಕೀಲರ ಸಂಘಕ್ಕೆ ಆದೇಶಿಸುವಂತೆ ಕೋರಿ ತುಮಕೂರಿನ ಮೋಹನ್ ಕುಮಾರಿ ಮತ್ತಿತರರು ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಪುಟ 2

## ಶೂಟೌಟ್: ಆರೋಪಿ ಕಾಲಿಗೆ ಗುಂಡೇಟು

**ಮೈಸೂರು:** ದರೋಡೆ ಪ್ರಕರಣವೊಂದರಲ್ಲಿ ಶಾಮೀಲಾಗಿದ್ದ ಆರೋಪಿ ಕಾಲಿಗೆ ಪೊಲೀಸರು ಗುಂಡು ಹಾರಿಸಿರುವ ಘಟನೆ ಮೈಸೂರು ಹೊರವಲಯದಲ್ಲಿ ನಡೆದಿದೆ. ಮಹಜರ್ ನಡೆಸುವ ವೇಳೆ ಪೊಲೀಸರ ಮೇಲೆ ಹಲ್ಲೆ ನಡೆಸಿ ಪರಾರಿ ಆಗಲು ಯತ್ನಿಸಿದ ಕಾರಣ ಆತ್ಮರಕ್ಷಣೆಗಾಗಿ ಪೊಲೀಸರು ಆರೋಪಿ ಕಾಲಿಗೆ ಗುಂಡು ಹಾರಿಸಿ ಹಿಡಿದಿದ್ದಾರೆ. ಆರೋಪಿ ನಡೆಸಿದ ದಾಳಿಯಲ್ಲಿ ಸಬ್ ಇನ್ಸ್‌ಪೆಕ್ಟರ್ ಪುಟ 2

## ಹಿಂದಿ ಹೇರಿಕೆಯಿಲ್ಲ, ಕನ್ನಡ ಸೇರಿ ಪ್ರಾದೇಶಿಕ ಭಾಷೆಗಳಲ್ಲೇ ಪತ್ರ ವ್ಯವಹಾರ

**ಬೆಂಗಳೂರು:** ಹಿಂದಿ ಹೇರಿಕೆ ಮಾಡಲಾಗುತ್ತಿದೆ ಎಂದು ಆರೋಪಿಸುವವರಿಗೆ ಕೇಂದ್ರ ಗೃಹ ಸಚಿವ ಅಮಿತ್ ಶಾ ರಾಜ್ಯಸಭೆಯಲ್ಲಿ ತೀಕ್ಷ್ಣ ತಿರುಗೇಟು ನೀಡಿದ್ದಾರೆ.

ಭಾಷೆಯ ಹೆಸರಿನಲ್ಲಿ ದೇಶವನ್ನು ವಿಭಜಿಸುವ ಕೆಲಸ ಮಾಡಬಾರದು ಎಂದ ಅವರು, ಪ್ರಾದೇಶಿಕ ಭಾಷೆಗಳ ಉತ್ತೇಜನಕ್ಕಾಗಿ ಡಿಸೆಂಬರ್‌ನಿಂದ ರಾಜ್ಯಗಳ ಜತೆ ಅಲ್ಲಿನ ಪ್ರಾದೇಶಿಕ ಭಾಷೆಯಲ್ಲೇ ಪತ್ರ ವ್ಯವಹಾರ ಮಾಡುವುದಾಗಿ ಘೋಷಣೆ ಮಾಡಿದ್ದಾರೆ.

ಅದರಂತೆ, ಕರ್ನಾಟಕ ಸರ್ಕಾರದ ಜತೆ



ಕನ್ನಡದಲ್ಲಿ, ತಮಿಳುನಾಡು ಸರ್ಕಾರದ ಜತೆ ತಮಿಳು ಹಾಗೂ ಇತರ ರಾಜ್ಯಗಳ ಜತೆ ಅಲ್ಲಿನ ಭಾಷೆಯಲ್ಲೇ ಅಮಿತ್ ಶಾ ಪತ್ರ ವ್ಯವಹಾರ ನಡೆಯಲಿದೆ.

**ಅಮಿತ್ ಶಾ ಹೇಳಿದ್ದೇನು?**

ಡಿಸೆಂಬರ್ ನಂತರ ನಾಗರಿಕರು, ಮುಖ್ಯಮಂತ್ರಿಗಳು, ಸಚಿವರು ಮತ್ತು ಸಂಸತ್ ಸದಸ್ಯರೊಂದಿಗೆ ಅವರದೇ ಭಾಷೆಯಲ್ಲಿ ಪತ್ರವ್ಯವಹಾರ ಮಾಡುತ್ತೇನೆ. ತಮ್ಮ ಭ್ರಷ್ಟಾಚಾರವನ್ನು ಮರೆಮಾಚಲು ಭಾಷೆಯ ಹೆಸರಿನಲ್ಲಿ ರಾಜಕೀಯ ನಡೆಸುವವರಿಗೆ ಇದು ಬಲವಾದ ಪ್ರತ್ಯುತ್ತರವಾಗಿದೆ ಎಂದು ಅಮಿತ್ ಶಾ ಹೇಳಿದರು.ಬಿಜೆಪಿ ದಕ್ಷಿಣ ಭಾರತದ ಭಾಷೆಗಳನ್ನು ಪುಟ 2

## ನಮ್ಮ ಹಕ್ಕು, ಅಸ್ತಿತ್ವ, ಸಂವಿಧಾನ ಉಳಿವಿಗೆ ಒಟ್ಟಾಗಿದ್ದೇವೆ: ಡಿಸಿಎಂ

**ಚೆನ್ನೈ:** "ನಾವು ನಮ್ಮ ಹಕ್ಕು, ಅಸ್ತಿತ್ವಕ್ಕೆ ಹೋರಾಡಲು, ಸಂವಿಧಾನ ಉಳಿವಿಗಾಗಿ ನಾವು ಒಟ್ಟಾಗಿದ್ದೇವೆ. ಎಂದು ಡಿಸಿಎಂ ಡಿ.ಕೆ.ಶಿವಕುಮಾರ್ ಅವರು ಹೇಳಿದರು.



ಚೆನ್ನೈ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಮಾಧ್ಯಮಗಳಿಗೆ ಶನಿವಾರ ಪ್ರತಿಕ್ರಿಯೆ ನೀಡಿದರು.

"ನಮ್ಮ ಸಂಸತ್ ಸ್ಥಾನಗಳು ಕಡಿಮೆಯಾಗಲು ನಾವು ಬಿಡುವುದಿಲ್ಲ. ದಕ್ಷಿಣದ ರಾಜ್ಯಗಳು ದೇಶದ ಬೆಳವಣಿಗೆಗೆ ಸಾಕಷ್ಟು ಕೊಡುಗೆ ನೀಡುತ್ತಿವೆ. ಶೈಕ್ಷಣಿಕ ಗುಣಮಟ್ಟದಲ್ಲಿ, ಆರ್ಥಿಕ ಬೆಳವಣಿಗೆ ಸೇರಿದಂತೆ ಅನೇಕ ವಿಷಯಗಳಲ್ಲಿ ಸಾಕಷ್ಟು ಮುಂದಿದ್ದೇವೆ, ತೆರಿಗೆ ಪಾವತಿಯಲ್ಲಿ ಮುಂಚೂಣಿಯಲ್ಲಿದ್ದೇವೆ" ಎಂದು ಹೇಳಿದರು.

"ಜೊತೆಗೂಡುವುದು ಆರಂಭ, ಜೊತೆಗೂಡಿ ಆಲೋಚಿಸುವುದು ಪ್ರಗತಿ, ಜೊತೆಗೂಡಿ ಕೆಲಸ ಮಾಡುವುದು ಪ್ರಗತಿ ಎನ್ನುವ ಮಾತಿನ ಮೇಲೆ ನಂಬಿಕೆಯನ್ನು ಇಟ್ಟಿರುವವರು ನಾವು. ಸ್ಟಾಲಿನ್ ಅವರ ನಾಯಕತ್ವದಲ್ಲಿ ದಕ್ಷಿಣ ಭಾರತ ರಾಜ್ಯಗಳು ಹಾಗೂ ಪಂಜಾಬ್ ರಾಜ್ಯ ಭಾಗವಹಿಸುತ್ತಿದ್ದು ಯಾವುದೇ ಕಾರಣಕ್ಕೂ ನಮ್ಮ ಹಕ್ಕುಗಳನ್ನು ಬಿಟ್ಟುಕೊಡಲು ಸಾಧ್ಯವಿಲ್ಲ. ಪುಟ 2

## ಬೇಸಿಗೆಯಲ್ಲಿ ಬೆಳೆ ಹಾಗೂ ಕುಡಿವ ನೀರಿಗೆ ತೊಂದರೆಯಾಗದಂತೆ ನೀರು ಹರಿಸುತ್ತೇವೆ

**ಬೆಂಗಳೂರು/ಕೊಪ್ಪಳ:** "ಬೇಸಿಗೆಯಲ್ಲಿ ಕುಡಿಯುವ ನೀರು ಹಾಗೂ ಬೆಳೆಗಳಿಗೆ ಯಾವುದೇ ಸಮಸ್ಯೆಯಾಗದಂತೆ ರಾಯಚೂರು, ಕೊಪ್ಪಳ, ಬಳ್ಳಾರಿ ಹಾಗೂ ವಿಜಯನಗರ ಜಿಲ್ಲೆಗಳಿಗೆ ನೀರು ಹರಿಸಲು ತೀರ್ಮಾನ ಕೈಗೊಳ್ಳಲಾಗಿದೆ" ಎಂದು ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವರೂ ಆದ ನೀರಾವರಿ ಸಲಹಾ ಸಮಿತಿ ಅಧ್ಯಕ್ಷ ಶಿವರಾಜ್ ಎಸ್. ತಂಗಡಗಿ ಹೇಳಿದರು.

ವಿಧಾನಸೌಧದ ಸಮ್ಮೇಳನ ಸಭಾಂಗಣದಲ್ಲಿ ತಮ್ಮ ಅಧ್ಯಕ್ಷತೆಯಲ್ಲಿ ನಡೆದ ತುಂಗಭದ್ರಾ ನೀರಾವರಿ ಸಲಹಾ ಸಮಿತಿ ಸಭೆ ಬಳಿಕ ಅವರು ಮಾತನಾಡಿದರು. "ಪ್ರಸ್ತುತ ಜಲಾಶಯದಲ್ಲಿ ನೀರಿನ ಸಾಮರ್ಥ್ಯ 18 ಟಿಎಂಸಿ, ಇದರಲ್ಲಿ ಡೆಡ್ ಸ್ಟೋರೇಜ್ 2 ಟಿಎಂಸಿ, ಅವಿಯಾಗುವಿಕೆ 1.2 ಟಿಎಂಸಿ, ಈ ಪೈಕಿ ರಾಜ್ಯದ ಪಾಲು 11 ಟಿಎಂಸಿ,



ಆಂಧ್ರಪ್ರದೇಶದ ಪಾಲು 4 ಟಿಎಂಸಿ ಇದೆ. ಈ ಹಿನ್ನೆಲೆಯಲ್ಲಿ ಜಲಾಶಯದಲ್ಲಿನ ನೀರಿನ ಲಭ್ಯತೆ ಆಧಾರಿಸಿ ನಾಲ್ಕು ಜಿಲ್ಲೆಗಳಿಗೆ ಕುಡಿಯುವ ನೀರು ಒಳಗೊಂಡಂತೆ ನೀರಾವರಿಗೆ ಈ ಕೆಳಗಿನಂತೆ ಹಂಚಿಕೆ ಮಾಡಲಾಗಿದೆ" ಎಂದು ತಿಳಿಸಿದರು.

"ತುಂಗಭದ್ರಾ ಎಡದಂಡೆ ಮುಖ್ಯಕಾಲುವೆ ಮೂಲಕ ಏ.1ರಿಂದ ಏ.10ರವರೆಗೆ ಕುಡಿಯುವ ನೀರು ಒಳಗೊಂಡಂತೆ ಹಾಗೂ ಬೆಳೆಗಳ ಸಂರಕ್ಷಣೆಗಾಗಿ 3000 ಪುಟ 2

## ಇಂದಿನಿಂದ ಐಪಿಎಲ್ ಫೀವರ್ ಶುರು

ಕ್ರಿಕೆಟ್ ಅಭಿಮಾನಿಗಳು ಕಾತುರದಿಂದ ಕಾಯುತ್ತಿರುವ ಐಪಿಎಲ್ ಹಬ್ಬ ಬಂದೇ ಬಿಡ್ತು. ಇಂಡಿಯನ್ ಪ್ರೀಮಿಯರ್ ಲೀಗ್ ಇಂದಿನಿಂದ ಶುರುವಾಗಲಿದೆ. 18ನೇ ಐಪಿಎಲ್ ಸೀಸನ್ ಕೆಲವು ಹೊಸ ನಿಯಮಗಳು, ಕೆಲವು ಹೊಸ ನಾಯಕರು ಮತ್ತು ಸಂಪೂರ್ಣ ಹೊಸ ನೋಟದೊಂದಿಗೆ ಆರಂಭಗೊಳ್ಳಲಿದೆ.

ಕಣ್ಣಿಗೆ ಕಟ್ಟುವ ಹೊಡೆತಗಳಿಂದ ಸಿಡಿಯುವ ಬ್ಯಾಟ್ಸ್‌ಮನ್‌ಗಳು, ಬ್ಯಾಟಿಂಗ್ ಆಟದಲ್ಲಿಯೂ ತಮ್ಮದೇ ಆದ ಛಾಪು ಮೂಡಿಸುವ ಬೌಲರ್‌ಗಳು ಮತ್ತು ಪ್ರಭಾವಲಯವನ್ನು ಹೊರಹಾಕುವ ಫೀಲ್ಡರ್‌ಗಳು ಕ್ರಿಕೆಟ್ ಜಗತ್ತನ್ನು ರೋಮಾಂಚನಗೊಳಿಸಲು ಸಿದ್ಧರಾಗಿದ್ದಾರೆ.

ಇಂದಿನಿಂದ ಆರಂಭವಾಗುವ ಐಪಿಎಲ್ ಟೂರ್ನಿಯ ಮೊದಲ ಪಂದ್ಯದಲ್ಲಿ ಹಾಲಿ ಚಾಂಪಿಯನ್ ಕೋಲ್ಕತ್ತಾ ನೈಟ್ ರೈಡರ್ಸ್ ತಂಡವು ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡವನ್ನು ಎದುರಿಸಲಿದೆ. 2008 ರಲ್ಲಿ ಮೊದಲ



ಐಪಿಎಲ್ ಪಂದ್ಯದಲ್ಲಿ ಮುಖಾಮುಖಿಯಾದ ನಂತರ ಈ ತಂಡಗಳು ಈ ಸೀಸನ್‌ನ ಆರಂಭಿಕ ಪಂದ್ಯದಲ್ಲಿ ಸ್ಪರ್ಧಿಸುತ್ತಿರುವುದು ಇದೇ ಮೊದಲು. ಹತ್ತು ತಂಡಗಳು ಸ್ಪರ್ಧಿಸುವ ಈ ಲೀಗ್‌ನಲ್ಲಿ ಒಟ್ಟು 74 ಪಂದ್ಯಗಳು ನಡೆಯಲಿವೆ. ಇದು 12 ಡಬಲ್ ಹೆಡರ್‌ಗಳನ್ನು ಒಳಗೊಂಡಿದೆ.

ಕೋಲ್ಕತ್ತಾ ಮತ್ತು ಆರ್‌ಸಿಬಿ ನಡುವಿನ ಈ ಪಂದ್ಯವು 2008 ರ ಐಪಿಎಲ್‌ನ ಉದ್ಘಾಟನಾ ಪಂದ್ಯವನ್ನು ನೆನಪಿಸುತ್ತದೆ. ಈಡನ್ ಗಾರ್ಡನ್ಸ್‌ನಲ್ಲಿ ನಡೆದ ಆ ಪಂದ್ಯದಲ್ಲಿ ಕೆಕೆಆರ್ ಆಟಗಾರ ಮೆಕಲಮ್ ಅವರ ವಿನಾಶಕಾರಿ ಇನ್ನಿಂಗ್ಸ್ (158) ಅನ್ನು ಅಭಿಮಾನಿಗಳು ಎಂದಿಗೂ ಮರೆಯುವುದಿಲ್ಲ. ಪುಟ 2

## ಬಾಕ್ಸಿಂಗ್ ತಾರೆ ಜಾರ್ಜ್ ಫೋರ್‌ಮನ್ ಇನ್ನಿಲ್ಲ

**ಲಾಸ್ ಏಂಜಲೀಸ್ :** ಹೆವಿವೇಯ್ಟ್ ಬಾಕ್ಸಿಂಗ್‌ನಲ್ಲಿ ಮಿಂಚಿದ್ದ ರಂಬಲ್ ಇನ್ ದಿ ಜಂಗಲ್‌ನಲ್ಲಿ ಮುಹಮ್ಮದ್ ಅಲಿ ವಿರುದ್ಧ ಹೋರಾಡಿದ್ದ ಬಾಕ್ಸಿಂಗ್ ಚಾಂಪಿಯನ್, ಯಶಸ್ವಿ ಉದ್ಯಮಿ ಜಾರ್ಜ್ ಫೋರ್‌ಮನ್ (76) ಶುಕ್ರವಾರ ನಿಧನರಾಗಿದ್ದಾರೆ, ಅವರ ಅಗಲಿಕೆ ಕುರಿತು ಪೋಸ್ಟ್ ಮಾಡಿರುವ ಕುಟುಂಬಸ್ಥರು, ಒಬ್ಬ ಧರ್ಮನಿಷ್ಠ ಉಪದೇಶಕ, ಧರ್ಮನಿಷ್ಠ ಪತಿ, ಪ್ರೀತಿಪಾತ್ರ ತಂದೆ, ಹೆಮ್ಮೆಯ ತಾತ-ಮುತ್ತಾತ, ಅವರು ಅಚಲ ನಂಬಿಕೆ, ನಮ್ರತೆ ಮತ್ತು ಉದ್ದೇಶಗಳಿಂದ ಜೀವನ ನಡೆಸಿದರು ಎಂದು ತಿಳಿಸಿದ್ದಾರೆ. ಎರಡು ಬಾರಿ ವಿಶ್ವದ ಹೆವಿವೇಯ್ಟ್ ಚಾಂಪಿಯನ್ ಆಗಿದ್ದ ಜಾರ್ಜ್ ಅವರು ಶಿಸ್ತು, ದೃಢನಿಶ್ಚಯದ ವ್ಯಕ್ತಿಯಾಗಿದ್ದು, ಕುಟುಂಬಕ್ಕಾಗಿ ಅವಿಶ್ರಾಂತರಾಗಿ ಹೋರಾಡುತ್ತಿದ್ದರು.



ಪುಟ 2

# ವಿಶ್ವ ಸಂಸ್ಥೆಯ ಮಹಿಳಾ ಸಭೆ; ಭಾರತದ ನಿಯೋಗದ ನೇತೃತ್ವ ವಹಿಸಿದ ಕನ್ನಡತಿ






**ಬೆಂಗಳೂರು:** ಮಹಿಳಾ ಹಕ್ಕುಗಳು, ಸಬಲೀಕರಣ ಮತ್ತು ಸಾಮಾಜಿಕ ಸ್ಥಾನಮಾನದ ಕುರಿತಾದ "ಮಹಿಳೆಯರ ಸ್ಥಿತಿಗತಿ ಆಯೋಗ" ದ ಸಭೆಯು ಮಾರ್ಚ್ 10 ರಿಂದ 21 ರವರೆಗೆ ನ್ಯೂಯಾರ್ಕ್‌ನಲ್ಲಿರುವ ವಿಶ್ವಸಂಸ್ಥೆಯ ಪ್ರಧಾನ ಕಚೇರಿಯಲ್ಲಿ ನಡೆಯಿತು.

ವಿವಿಧ ದೇಶಗಳ ಮಹಿಳಾ ಕಾರ್ಯ ಕರ್ತರೊಂದಿಗೆ ಮಹಿಳಾ ಸಬಲೀಕರಣ, ಲಿಂಗ ಸಮಾನತೆ ಮತ್ತು ಮಹಿಳಾ ಸುಸ್ಥಿರತೆಯ ಕುರಿತು ವಿಸ್ತೃತ ಚರ್ಚೆಗಳು ನಡೆದವು.10 ದಿನಗಳ ಸಮ್ಮೇಳನದಲ್ಲಿ ಭಾರತದ ನಿಯೋಗ ಪಾಲ್ಗೊಂಡಿತ್ತು.

ಈ ಸಭೆಯಲ್ಲಿ "ಮಹಿಳಾ ಸಬಲೀಕರಣ ಮತ್ತು ಬೀಜಿಂಗ್ ಘೋಷಣೆ ಮತ್ತು ಕ್ರಿಯೆಗಾಗಿ ವೇದಿಕೆ " ಅನುಷ್ಠಾನದ ಕುರಿತು ಚರ್ಚೆಗಳು ಮತ್ತು ವಿಮರ್ಶೆಗಳು ಸಹ ನಡೆದವು. ಭಾರತೀಯ ಮಹಿಳಾ ನಿಯೋಗ ,ಐಸಿಸಿಡಿಆರ್ ಮತ್ತು ಯುಎಸ್ ಪ್ರತಿನಿಧಿಗಳು ಭಾಗವಹಿಸಿದ್ದರು.ಭಾರತದ ನಿಯೋಗದ ನೇತೃತ್ವವನ್ನು ಕನ್ನಡತಿ ಹಾಗೂ ಬೆಂಗಳೂರಿನ ಪ್ರತಿಷ್ಠಿತ ಗ್ರೀನ್ ಈಡನ್ ಪಬ್ಲಿಕ್ ಸ್ಕೂಲ್ ನ ಸಂಸ್ಥಾಪಕ ಪ್ರಾಂಶುಪಾಲರಾದ ಡಾ. ವೇದಾವತಿ ದಿನೇಶ್ ಅವರು ವಹಿಸಿದ್ದರು. ಅಂತರರಾಷ್ಟ್ರೀಯ ಸಂಸ್ಕೃತಿ ಮತ್ತು ರಾಜತಾಂತ್ರಿಕ ಸಂಬಂಧಗಳ ಆಯೋಗದ ಪ್ರತಿನಿಧಿಯಾಗಿ ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ಡಾ. ಸುನೀತಾ ಎಲುರಿ,ಶ್ರೀಮತಿ ವಿನೀಲಾ, ಸೈಯದ್ ಅಶ್ರಫ್,ಐಸಿಸಿಡಿಆರ್‌ನ ಪ್ರಧಾನ ಕಾರ್ಯದರ್ಶಿ ಡಾ. ಶ್ರೀನಿವಾಸ್ ರಾವ್ ಎಲುರಿ ಸೇರಿದಂತೆ ಹಲವು ಪ್ರಮುಖರು ಭಾರತದ ನಿಯೋಗದಲ್ಲಿ ಇದ್ದರು.

ಈ ಸಭೆಯು ಮಹಿಳಾ ಸಮಸ್ಯೆಗಳ ಕುರಿತು ಚರ್ಚೆಗಳಿಗೆ ಜಾಗತಿಕ ವೇದಿಕೆಯನ್ನು ಒದಗಿಸಿದೆ. ಮಹಿಳಾ ಸಬಲೀಕರಣ ಮತ್ತು ಸಮಾನತೆಯ ಕುರಿತು ಮಾರ್ಗಸೂಚಿಗಳನ್ನು ಅಭಿವೃದ್ಧಿಪಡಿಸಲು ಗೊತ್ತುವಳಿ ಮಂಡಿಸಲಾಯಿತು.

ಹೆಬ್ಬಾಳ ವಿಧಾನ ಸಭಾ ಕ್ಷೇತ್ರದ ವಿ.ನಾಗೇನಹಳ್ಳಿಯಲ್ಲಿ ಇರುವ ಶ್ರೀ ಮುನೇಶ್ವರ ದೇವಾಲಯ ಬೆಂಗಳೂರು ಸಬ್ ಅರ್ಬನ್ ರೈಲು ಯೋಜನೆ ವ್ಯಾಪ್ತಿಗೆ ಹೊಂದಿರುವ ಕಾರಣ ದೇವಾಲಯವನ್ನು ಸ್ಥಳಾಂತರಿಸಿ ಬೇರೆಡೆ ಪುನರ್ ನಿರ್ಮಾಣ ಮಾಡುವಂತೆ, ಕನಕಾನಗರದಲ್ಲಿ ರೈಲು ಅಂಡರ್ ಪಾಸ್ ನಿರ್ಮಾಣ ಹಾಗೂ ಹೆಬ್ಬಾಳ ಜಂಕ್ಷನ್ ಬಳಿ ಸಂಚಾರ ದಟ್ಟಣೆ ನಿಯಂತ್ರಣ ಮಾಡಲು ಸ್ಕೈ ವಾಕ್ ನಿರ್ಮಾಣ, ಪಾದಚಾರಿ ಮಾರ್ಗ ಅಗಲೀಕರಣ ಮಾಡುವಂತೆ ನಗರಾಭಿವೃದ್ಧಿ ಮತ್ತು ನಗರ ಯೋಜನೆ ಹಾಗೂ ಹೆಬ್ಬಾಳ ಶಾಸಕರು ಆದ ಶ್ರೀ ಬಿ.ಎಸ್.ಸುರೇಶ(ಬೈರತಿ) ಅವರು ರೈಲು ಮೂಲಸೌಲಭ್ಯ ಅಭಿವೃದ್ಧಿ ಕಂಪನಿ(ಕರ್ನಾಟಕ) ನಿಯಮಿತ ವ್ಯವಸ್ಥಾಪಕ ನಿರ್ದೇಶಕರು ಹಾಗೂ ಅಧಿಕಾರಿಗಳನ್ನು ಭೇಟಿ ಮಾಡಿ ಚರ್ಚಿಸಿ ಮನವಿ ಪತ್ರವನ್ನು ನೀಡಿದರು



# ಕನ್ನಡಿಗರ ಕಿಚ್ಚು

ಮೊದಲ ಪುಟದಿಂದ

ಈ ವೇಳೆ ಪೊಲೀಸರು ಹಾಗೂ ಹೋರಾಟಗಾರರ ನಡುವೆ ದೊಡ್ಡ ಹೈಡ್ರಾಮವೇ ನಡೆಯಿತು.

ಟೌನ್ ಹಾಲ್‌ನಿಂದ ಹೋರಾಟಗಾರರನ್ನು ಬಂಧಿಸಿ ಫ್ರೀಡಂ ಪಾರ್ಕ್‌ಗೆ ಕರೆತಂದ ಪೊಲೀಸರು ಅಲ್ಲಿ ಅವರನ್ನು ಕೆಳಗಿಳಿಸಲು ಪ್ರಯತ್ನಿಸಿರಾದರೂ ವಾಟಾಳ್ ನಾಗರಾಜ್ ಹಾದಿಯಾಗಿ ಬಂಧಿತ ಯಾವೊಬ್ಬ ಹೋರಾಟಗಾರರು ಕೆಳಗಿಳಿಯಲಿಲ್ಲ. ಬಸ್‌ನಲ್ಲೇ ಕುಳಿತು ತಮ್ಮ ಹೋರಾಟವನ್ನು ಮುಂದುವರಿಸಿದರು. ಈ ವೇಳೆ ಸುಮಾರು 2-3 ಗಂಟೆಗಳ ಅವರನ್ನು ಕೆಳಗಿಳಿಸಲು ಪೊಲೀಸರು ಹರಸಾಹಸ ಪಟ್ಟರು.

ರಾಜ್ಯ ವ್ಯಾಪಿ ಬಹುತೇಕ ಕಡೆ ಟೈರ್‌ಗಳಿಗೆ ಬೆಂಕಿ ಹಚ್ಚಿ, ರಸ್ತೆ ಬಂದ್ ಮಾಡುವ ಮೂಲಕ ಹೋರಾಟಗಾರರು ಪ್ರತಿಭಟನೆ ನಡೆಸಿದರು.

ಪೊಲೀಸ್ ಆಯುಕ್ತ ಬಿ.ದಯಾನಂದ್ ಅವರ ಸೂಚನೆ ಮೇರೆಗೆ ಪೊಲೀಸರು ನಗರದಾದ್ಯಂತ ಅಲರ್ಟ್ ಆಗಿದ್ದರು. ಇದರ ಉಸ್ತುವಾರಿಯನ್ನು ಸ್ವತಃ ಆಯುಕ್ತರೇ ವಹಿಸಿಕೊಂಡಿದ್ದರು. ಹಾಗಾಗಿ ನಗರದಲ್ಲಿ ಪ್ರತಿಭಟನೆ ವೇಳೆ ಯಾವುದೇ ಅಹಿತಕರ ಘಟನೆಗಳು ನಡೆಯಲಿಲ್ಲ. ಆದರೆ ಇದರ ಹಿಂದಿರುವ ಸರ್ಕಾರದ ನಡೆಗೆ ತೀವ್ರ ಆಕ್ರೋಶ ವ್ಯಕ್ತವಾಯಿತು.




## ಬಂದ್: ಮಿತಿ ಮೀರಿ ವರ್ತಿಸಿದ್ರೆ ಕ್ರಮ

ಈ ಕುರಿತು ಮಾಧ್ಯಮಗಳ ಜೊತೆ ಮಾತನಾಡಿ, ಬಂದ್ ವೇಳೆ ಯಾವುದೇ ಅಹಿತಕರ ಘಟನೆ ನಡೆಯದಂತೆ ಕ್ರಮ ಕೈಗೊಳ್ಳಲಾಗಿದೆ. ಎಲ್ಲಾ ಕಡೆಯಲ್ಲೂ ಪೊಲೀಸರಿಂದ ಪರಿಶೀಲನೆ ನಡೆಯುತ್ತಿದೆ ಎಂದರು.ನಾವು ಮೂರ್ನಾಲ್ಕು ದಿನದಿಂದ ಎಲ್ಲಾ ಕ್ರಮ ಕೈ ಗೊಂಡಿದ್ದೇವೆ. ಎಲ್ಲಾ ಎಸ್ ಪಿ ಕಮಿಷನರ್ ಗೆ ಮಾಹಿತಿ ನೀಡಿದ್ದೇವೆ. ಯಾವುದೇ ಅಹಿತಕರ ಘಟನೆ ನಡೆಯದಂತೆ ವ್ಯವಸ್ಥೆ ಮಾಡಿದ್ದೇವೆ. ಕಾನೂನು ಮೀರಿ ವರ್ತಿಸಿದ್ರೆ ಬಂಧಿಸಲು ಸೂಚನೆ ನೀಡಲಾಗಿದೆ ಎಂದು ಪರಮೇಶ್ವರ್ ತಿಳಿಸಿದರು.

ಮೊದಲ ಪುಟದಿಂದ

## ಹಿಂಪಡೆಯಲು ನಿಯಮ ರೂಪಿಸಿ

ಸಂಖ್ಯೆಯಲ್ಲಿ ಮಾರಾಟವಾಗುತ್ತಿದ್ದು, ಪರಿಸರಕ್ಕೆ ಹಾನಿ ಆಗುತ್ತಿರುವುದನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಿದೆ ಎಂದು ಪತ್ರದಲ್ಲಿ ತಿಳಿಸಿದ್ದಾರೆ. ಮೊದಲಿಗೆ ರಸ್ತೆಯ ಬದಿಯಲ್ಲಿ ಎಲ್ಲೆಂದರಲ್ಲಿ ಬಿದ್ದು ಪರಿಸರ ಹಾಳು ಮಾಡುತ್ತಿರುವ, ಖನಿಜಯುಕ್ತ ನೀರಿನ ಬಾಟಲಿಗೆ ಕಡಿವಾಣ ಹಾಕಬೇಕಾಗಿದೆ. ಹೊಸ ನೀರಿನ ಬಾಟಲಿ ಖರೀದಿಸಲು ಬರುವ ಗ್ರಾಹಕರಿಂದ ಬಾಟಲಿ ನೀರು ಮಾರುವ ಚಿಲ್ಲರೆ ಮಳಿಗೆಗಳು ಯಾವುದೇ ಕಂಪನಿಯ ನೀರಿನ ಬಾಟಲಿ ನೀಡಿದರೂ ಅದಕ್ಕೆ ಕನಿಷ್ಠ ಬೆಲೆ ನೀಡಿ/ ಅಷ್ಟು ದರ ಕಡಿತ ಮಾಡಿ ಹೊಸ ಬಾಟಲಿ ಮಾರಾಟ ಮಾಡುವಂತೆ ಮತ್ತು ಈ ರೀತಿ ಸಂಗ್ರಹಿಸಲಾದ ಖಾಲಿ ಬಾಟಲಿಗಳನ್ನು ನೀರು ಮಾರಾಟ ಮಾಡುವ ಕಂಪನಿಗಳೇ ಹಿಂಪಡೆದು, ವೈಜ್ಞಾನಿಕವಾಗಿ ವಿಲೇವಾರಿ ಮಾಡುವುದನ್ನು ಕಡ್ಡಾಯಗೊಳಿಸಲು ಸೂಚಿಸಿದ್ದಾರೆ.

ಉತ್ಪಾದಕರ ವಿಸ್ತರಿತ ಜವಾಬ್ದಾರಿಯಂತೆ ಯಾವುದೇ ಉತ್ಪನ್ನವನ್ನು ತಯಾರಿಸುವವರು, ತಮ್ಮ ಉತ್ಪನ್ನಗಳಿಂದ ಪರಿಸರ ಮೇಲಾಗುವ ಪರಿಣಾಮಗಳನ್ನು ಉತ್ಪನ್ನವು ಗ್ರಾಹಕರ ಕೈಸೇರಿದ ನಂತರವೂ ನಿರ್ವಹಿಸುವ ಜವಾಬ್ದಾರಿ ಹೊಂದಿರುತ್ತಾರೆ. ಈ ಹಿನ್ನೆಲೆಯಲ್ಲಿ ಖಾಲಿ ಬಾಟಲಿಗಳನ್ನು ನೀರು ಮಾರಾಟ ಮಾಡುವ ಕಂಪನಿಗಳೇ ಮರು ಖರೀದಿ ಮಾಡಿ ವಿಲೇವಾರಿ ಮಾಡಿದಲ್ಲಿ ಬೃಹತ್ ಪ್ರಮಾಣದಲ್ಲಿ ಸಂಗ್ರಹವಾಗುತ್ತಿರುವ ಪ್ಲಾಸ್ಟಿಕ್ ತ್ಯಾಜ್ಯ ನಿಯಂತ್ರಿಸಬಹುದು ಎಂಬುದು ಈಶ್ವರ ಖಂಡ್ರೆ ಅವರ ಅಭಿಮತವಾಗಿದೆ

## ಹೈಕಮಾಂಡ್‌ಗೆ ಗೊತ್ತಿರಬೇಕಲ್ಲ

ಕಷ್ಟಪಟ್ಟು ರಾಜಕೀಯವಾಗಿ ಬೆಳೆದು ಬಂದಿದ್ದೇನೆ. ಆದರೆ ಈ ರೀತಿ ತೇಜೋವಧೆ ಮಾಡುವುದು ಅವರಿಗೆ ಭೂಷಣ ತರಲ್ಲ. ನನಗೆ ಮಾಟಮಂತ್ರ ಮಾಡಿಸುವುದು ಎಲ್ಲ ಮಾಡಿದ್ದಾರೆ. ನನಗೆ ಏನೂ ಆಗಲ್ಲ" ಎಂದರು. "ಅಧಿಕಾರದ ಆಸೆಗೆ, ಇನ್ನೊಬ್ಬನ ಮುಗಿಸಲು ವಿಷಕನ್ಯೆಯರನ್ನು ಬಳಸುತ್ತಿದ್ದಾರೆ. ಗುರುವಾರ ಸತೀಶ್ ಜಾರಕಿಹೊಳಿಯವರು ಸೇರಿದಂತೆ ಸಮಾನಮನಸ್ಕರೆಲ್ಲರೂ ಸೇರಿ ಅಂತಿಮ ನಿರ್ಣಯ ಮಾಡುತ್ತೇವೆ" ಎಂದು ತಿಳಿಸಿದರು. "ಪಕ್ಷಕ್ಕೆ ಸಂಬಂಧಿಸಿದ ಮಾತಿಗೆ ನಾನು ಉತ್ತರ ಕೊಡಲ್ಲ. ಹೈಕಮಾಂಡ್ ಪಕ್ಷದ ವಿಚಾರ ಕುರಿತು ಬಹಿರಂಗ ಹೇಳಿಕೆ ಕೊಡಬಾರದು ಎಂದಿದ್ದಾರೆ. ಯಾವುದೇ ತೀರ್ಮಾನವನ್ನು ಅಂತಿಮವಾಗಿ ಹೈಕಮಾಂಡ್ ಮಾಡಲಿದೆ" ಎಂದು ಹೇಳಿದರು. "ಸಿಎಂ ಮತ್ತು ಗೃಹಸಚಿವರನ್ನು ಬುಧವಾರ ಅಥವಾ ಗುರುವಾರ ಭೇಟಿ ಮಾಡುತ್ತೇನೆ. ಸಿಎಂ ಯಾವತ್ತೂ ನನ್ನ ಜೊತೆ ಇರುತ್ತಾರೆ. ಎಲ್ಲ ಒಳ್ಳೆ ಕೆಲಸಗಳಿಗೂ ಮಂತ್ರಿಗಳೂ ಜೊತೆ ಇರುತ್ತಾರೆ. ಸದನದಲ್ಲಿ ನಾನೊಂದು ಹೇಳಿಕೆ ಕೊಟ್ಟಿದ್ದೇನೆ. ಅದಕ್ಕೆ ಬದ್ಧನಿದ್ದೇನೆ. ಕಾನೂನು ಕ್ರಮ ತೆಗೆದುಕೊಳ್ಳುವುದಕ್ಕಾಗಿ ಗೃಹಮಂತ್ರಿಯನ್ನು ಭೇಟಿ ಮಾಡಿ ಲಿಖಿತ ರೂಪದಲ್ಲಿ ದೂರು ಕೊಡುತ್ತೇನೆ. ಮೂರು ದಿನ ಬ್ಯುಸಿ ಇದ್ದೇನೆ. ನಾಳೆ ಕೋಲಾರಕ್ಕೆ ಹೋಗುತ್ತೇನೆ. ನಾಡಿದ್ದು ತುರುವೇಕೆರೆ, ಅರಸೀಕೆರೆ ಕಾರ್ಯಕ್ರಮ ನಿಗದಿಯಾಗಿದೆ. ಮೂರು ದಿನಗಳ ಬಳಿಕ ಗೃಹಸಚಿವರನ್ನು ಭೇಟಿಯಾಗುತ್ತೇನೆ. ರಾಜೇಂದ್ರ ಸಿಎಂ ಅವರನ್ನು ಭೇಟಿ ಮಾಡಬಹುದು" ಎಂದು ತಿಳಿಸಿದರು. "ಮೂರು ನಾಲ್ಕು ದಿನ ನಾನು ಬೆಂಗಳೂರಿಗೆ ಹೋಗಲ್ಲ. ಅವಶ್ಯಕತೆ ಬಿದ್ದರೆ ಸಿಎಂ ಅವರನ್ನು ಭೇಟಿ ಮಾಡುತ್ತೇನೆ. ಗೃಹಸಚಿವರನ್ನು ಭೇಟಿ ಮಾಡೇ ಮಾಡುತ್ತೇನೆ. ಹನಿಟ್ರ್ಯಾಪ್ ವಿಚಾರಕ್ಕೆ ಸಂಬಂಧಿಸಿದಂತೆ ಮುಖ್ಯಮಂತ್ರಿ ಅವರನ್ನು ಭೇಟಿ ಮಾಡಿಲ್ಲ. ಸಿಎಂ 3 ಗಂಟೆಗೆ ಬಂದು ಉತ್ತರ ಕೊಡುವುದಕ್ಕೂ ಮೊದಲು ಭೇಟಿ ಮಾಡಿಲು ಹೋಗಿದ್ದೆ. ಅಲ್ಲಿ ಏನು ಚರ್ಚೆ ಆಗಿಲ್ಲ. 12.30ಕ್ಕೆ ಸಿಎಂ ಮನೆಗೆ ಹೋಗಿದ್ದೆ. ಅವರು ಏನೋ ಓದುತ್ತಿದ್ದರು. ದೇವರು ನಿನಗೆ ಏನು ಬುದ್ಧಿ ಕೊಡುತ್ತಾರೋ ಆ ರೀತಿ ಮಾಡು ಅಂತ ಹೇಳಿದ್ರು" ಎಂದು ತಿಳಿಸಿದರು. ಬಜೆಟ್ ಅಧಿವೇಶನ ಮುಕ್ತಾಯವಾದ ರೀತಿ ಪ್ರಜಾಪ್ರಭುತ್ವಕ್ಕೆ ಅವಮಾನವಾದಂತಾಗಿದೆ. ಅದರ ಬಗ್ಗೆ ವಿಷಾದವಿದೆ" ಎಂದು ಅವರು ಬೇಸರ ವ್ಯಕ್ತಪಡಿಸಿದರು.

ಸ್ಪೀಕರ್‌ಗೆ ಧಮ್ಕಿ ಹಾಕೋದು, ಪೇಪರ್ ಎಸೆಯುವುದು, ಮುಖ್ಯಮಂತ್ರಿಗೆ ಅಗೌರವ ತೋರುವುದು ಇದು ಶೋಭೆ ತರುವಂತಹದ್ದಲ್ಲ. ಬಿಜೆಪಿ ಶಿಸ್ತಿನ ಪಕ್ಷ ಎನ್ನುತ್ತಾರೆ. ಆದರೆ ಹೈಕಮಾಂಡ್ ಅವರು ಮಾಡುವ ರೀತಿಗೆ ಬುದ್ಧಿ ಹೇಳಬೇಕು. ಈ ರೀತಿ ಅಹಿತಕರ ಘಟನೆ ಸರಿಯಲ್ಲ" ಎಂದರು.

ಹಾಸನದಲ್ಲಿ ಮಾಜಿ ಸಚಿವ ಹೆಚ್ ಡಿ ರೇವಣ್ಣ, ಮಾಜಿ ಸಂಸದ ಪ್ರಜ್ವಲ್ ರೇವಣ್ಣ ಅವರನ್ನು ಟಾರ್ಗೆಟ್ ಮಾಡಿದ್ದಾರೆ. ಅದು ತನಿಖೆಯಲ್ಲಿ ಬಹಿರಂಗವಾಗಬೇಕಿದೆ. ಗೃಹಸಚಿವರು ತನಿಖೆ ನಡೆಸಿದರೆ ಸೂಕ್ತ. ಇದರ ಹಿಂದೆ ಯಾರಿದ್ದಾರೆ ಎಂಬ ಸತ್ಯ ಹೊರಬರಬೇಕು" ಎಂದು ರಾಜಣ್ಣ ಆಗ್ರಹಿಸಿದರು.

## ಪ್ರಾದೇಶಿಕ ಭಾಷೆಗಳಲ್ಲೇ ಪತ್ರ

ವಿರೋಧಿಸುತ್ತದೆ ಎಂಬ ಆರೋಪಗಳನ್ನು ತಿರಸ್ಕರಿಸಿದ ಅಮಿತ್ ಶಾ, 'ಅವರು ಏನು ಹೇಳುತ್ತಿದ್ದಾರೆ? ನಾವು ದಕ್ಷಿಣದ ಭಾಷೆಗಳನ್ನು ವಿರೋಧಿಸುತ್ತೇವೆಯೇ? ಇದು ಹೇಗೆ ಸಾಧ್ಯ? ನಾನು ಗುಜರಾತ್‌ನಿಂದ ಬಂದವನು. ನಿರ್ಮಲಾ ಸೀತಾರಾಮನ್ ತಮಿಳುನಾಡಿನವರು. ಹೀಗಿದ್ದಾಗ ನಾವು ಪ್ರಾದೇಶಿಕ ಭಾಷೆಗಳನ್ನು ಹೇಗೆ ವಿರೋಧಿಸಬಹುದು' ಎಂದು ಪ್ರಶ್ನಿಸಿದರು. ಭಾಷೆಯ ಹೆಸರಿನಲ್ಲಿ ದೇಶವನ್ನು ವಿಭಜಿಸುವವರು ತಮ್ಮ ಕಾರ್ಯಸೂಚಿಯನ್ನು ಜಾರಿಗೊಳಿಸಲು ಬಿಡಬಾರದು. ಅಧಿಕೃತ ಭಾಷಾ ಇಲಾಖೆಯ ಅಡಿಯಲ್ಲಿ, ನರೇಂದ್ರ ಮೋದಿ ಸರ್ಕಾರವು ಎಲ್ಲಾ ಭಾರತೀಯ ಭಾಷೆಗಳ ಬಳಕೆಯನ್ನು ಹೆಚ್ಚಿಸುವ ಕೆಲಸ ಮಾಡುತ್ತಿದೆ. ಅದಕ್ಕಾಗಿ ತಮಿಳು, ತೆಲುಗು, ಮರಾಠಿ, ಗುಜರಾತಿ, ಪಂಜಾಬಿ, ಅಸ್ಸಾಮಿ, ಬಂಗಾಳಿ ಸೇರಿದಂತೆ ಎಲ್ಲಾ ಭಾಷೆಗಳಿಗಾಗಿ 'ಭಾರತೀಯ ಅಧಿಕೃತ ಭಾಷಾ ಇಲಾಖೆ'ಯನ್ನು ಸ್ಥಾಪಿಸಿದೆ ಎಂದು ಶಾ ಹೇಳಿದರು. ಹಿಂದಿ ಯಾವುದೇ ಪ್ರಾದೇಶಿಕ ಭಾಷೆಯೊಂದಿಗೆ ಸ್ಪರ್ಧಿಸುವುದಿಲ್ಲ. ಅದರ ಬದಲಿಗೆ, ಹಿಂದಿಯು ಭಾಷಾ ಸಾಮರಸ್ಯವನ್ನು ಬೆಳೆಸುತ್ತದೆ. ಹಿಂದಿ ಎಲ್ಲಾ ಭಾರತೀಯ ಭಾಷೆಗಳಿಗೆ ಒಡನಾಡಿಯಾಗಿದೆ. ಹಿಂದಿ ಎಲ್ಲಾ ಭಾರತೀಯ ಭಾಷೆಗಳನ್ನು ಬಲಪಡಿಸುತ್ತದೆ ಮತ್ತು ಎಲ್ಲಾ ಭಾರತೀಯ ಭಾಷೆಗಳು ಹಿಂದಿಯನ್ನು ಬಲಪಡಿಸುತ್ತವೆ. ಇಲ್ಲಿ ಭಾಷೆಗಳ ನಡುವೆ ಕೊಡು ಕೊಳ್ಳುವಿಕೆ ಇದೆ ಎಂದ ಅವರು, ಭಾರತದ ಭಾಷಾ ವೈವಿಧ್ಯತೆಯನ್ನು ಬಲಪಡಿಸುವಲ್ಲಿ ಹಿಂದಿ ಮತ್ತು ಪ್ರಾದೇಶಿಕ ಭಾಷೆಗಳ ನಡುವಿನ ಪರಸ್ಪರ ಸಂಬಂಧವನ್ನು ಒತ್ತಿ ಹೇಳಿದರು. ಭ್ರಷ್ಟಾಚಾರ ಮರೆಮಾಚಲು ಭಾಷೆಯನ್ನು ದಾಳವಾಗಿ ಬಳಸುವವರ ಬಂಡವಾಳವನ್ನು ಹಳ್ಳಿ ಹಳ್ಳಿಗೆ ತೆರಳಿ ಬಯಲಿಗೆಳೆಯುತ್ತೇವೆ ಎಂದು ತಮಿಳುನಾಡಿನ ಆಡಳಿತಾರೂಢ ಡಿಎಂಕೆ ವಿರುದ್ಧ ಅಮಿತ್ ಶಾ ವಾಗ್ದಾಳಿ ನಡೆಸಿದರು. ನಿಮಗೆ (ಡಿಎಂಕೆ) ವೈದ್ಯಕೀಯ ಮತ್ತು ಎಂಜಿನಿಯರಿಂಗ್ ಕೋರ್ಸ್‌ಗಳನ್ನು ತಮಿಳು ಭಾಷೆಗೆ ಭಾಷಾಂತರಿಸಲು ಧೈರ್ಯವಿಲ್ಲ ಎಂದೂ ಹೇಳಿದರು. ಜತೆಗೆ, ನಾವು ಸರ್ಕಾರ ರಚಿಸಿದಾಗ, ವೈದ್ಯಕೀಯ ಮತ್ತು ಎಂಜಿನಿಯರಿಂಗ್ ಕೋರ್ಸ್‌ಗಳನ್ನು ತಮಿಳು ಭಾಷೆಗೆ ಭಾಷಾಂತರಿಸುತ್ತೇವೆ ಎಂದೂ ಹೇಳಿದರು. 'ಭಾಷೆಯ ಹೆಸರಿನಲ್ಲಿ ವಿಷ ಹರಡುವವರಿಗೆ ನಾನು ಒಂದು ಮಾತು ಹೇಳಲು ಬಯಸುತ್ತೇನೆ; ನೀವು ಸಾವಿರಾರು ಕಿಲೋಮೀಟರ್ ದೂರದ ಭಾಷೆಗಳನ್ನು ಇಷ್ಟಪಡುತ್ತೀರಿ, ಆದರೆ ನಿಮಗೆ ಭಾರತದ ಭಾಷೆ ಇಷ್ಟವಾಗುವುದಿಲ್ಲ' ಎಂದು ಅಮಿತ್ ಶಾ ಕುಟುಕಿದರು.

## ಚುನಾವಣೆಗೆ ಹೈ ತಡೆ

ಎಂ.ನಾಗಪ್ರಸನ್ನ ಅವರ ಪೀಠ ಈ ಆದೇಶ ಮಾಡಿದೆ. ಅಲ್ಲದೇ, ಇನ್ಮುಂದೆ ವಕೀಲರ ಸಂಘಗಳನ್ನು ಬಾಯ್ಸ್ ಕ್ಲಬ್ ಆಗಿ ಮುಂದುವರೆಯಲು ಅನುಮತಿಸಲಾಗುವುದಿಲ್ಲ ಎಂದು ನ್ಯಾಯಪೀಠ ಇದೇ ವೇಳೆ ಮೌಖಿಕವಾಗಿ ತಿಳಿಸಿತು.

ವಿಚಾರಣೆ ವೇಳೆ ಅರ್ಜಿದಾರರ ಪರ ವಕೀಲೆ ಕೆ.ಎಸ್.ವಿದ್ಯಾಶ್ರೀ ಹಾಜರಾಗಿ, "ಮಹಿಳಾ ಅಭ್ಯರ್ಥಿಗಳಿಗೆ ಚುನಾವಣೆಯಲ್ಲಿ ಮೀಸಲು ಕಲ್ಪಿಸಲು ಕೋರಿ ಅರ್ಜಿದಾರರು ತುಮಕೂರು ವಕೀಲರ ಸಂಘಕ್ಕೆ ಮನವಿ ಪತ್ರವನ್ನು ಸಲ್ಲಿಸಿದ್ದರು. ಮಹಿಳೆಯರಿಗೆ ಮೀಸಲಾತಿ ಒದಗಿಸಲು ಉಪ - ಕಾನೂನುಗಳನ್ನು ತಿದ್ದುಪಡಿ ಮಾಡಲು ಸಂಘಕ್ಕೆ ಸಾಕಷ್ಟು ಸಮಯವಿತ್ತು. ಆದರೂ ಅರ್ಜಿದಾರರ ಮನವಿ ತಿರಸ್ಕರಿಸಲಾಗಿದೆ. ಸುಪ್ರೀಂ ಕೋರ್ಟ್ ತೀರ್ಪು ಆಧರಿಸಿ ಬೆಂಗಳೂರು ವಕೀಲರ ಸಂಘವು ಕಳೆದ ಚುನಾವಣೆಯಲ್ಲಿ ಖಜಾಂಚಿ ಹುದ್ದೆಯನ್ನು ಮಹಿಳಾ ಅಭ್ಯರ್ಥಿಗೆ ಮೀಸಲಿಟ್ಟಿತ್ತು" ಎಂದು ನ್ಯಾಯಪೀಠದ ಗಮನಕ್ಕೆ ತಂದರು.

## ರಾಹುಲ್ ಸಂವಾದ

ಮಾರ್ಚ್ 27, 28 ಮತ್ತು ಏಪ್ರಿಲ್ 3 ರಂದು ದೇಶದ 750 ಕ್ಕೂ ಹೆಚ್ಚು ಜಿಲ್ಲಾ ಘಟಕದ ಮುಖ್ಯಸ್ಥರ ಜೊತೆಗೆ ರಾಹುಲ್ ಗಾಂಧಿ ಮಾತನಾಡಲಿದ್ದಾರೆ.

ಸುಮಾರು 250 ಜನರ ಬ್ಯಾಚ್‌ಗಳಲ್ಲಿ ನಡೆಯಲಿರುವ ಸಂವಾದಕ್ಕೂ ಮುನ್ನ, ವಿವಿಧ ರಾಜ್ಯ ಘಟಕಗಳು ಜಿಲ್ಲಾ ಮಟ್ಟದಲ್ಲಿ ಖಾಲಿ ಇರುವ ಹುದ್ದೆಗಳನ್ನು ಸಕ್ರಿಯವಾಗಿ ಭರ್ತಿ ಮಾಡುತ್ತಿವೆ.

ಮೂರು ದಿನಗಳ ಕಾಲ ಸಂವಾದ - ಚರ್ಚೆ: ಮೂರು ದಿನಗಳ ಸಂವಾದದಲ್ಲಿ ಕಾಂಗ್ರೆಸ್‌ನ ಮಾಜಿ ಅಧ್ಯಕ್ಷ ಸ್ಥಳೀಯ ತಂಡದ ಮುಖ್ಯಸ್ಥರಿಂದ ಪ್ರಮುಖ ಪ್ರತಿಕ್ರಿಯೆಗಳನ್ನು ಪಡೆಯಲಿದ್ದಾರೆ. ಉತ್ತರ ಪ್ರದೇಶ, ಬಿಹಾರ, ಪಶ್ಚಿಮ ಬಂಗಾಳ, ಮಧ್ಯಪ್ರದೇಶ, ಮಹಾರಾಷ್ಟ್ರ ಮತ್ತು ಗುಜರಾತ್‌ನಂತಹ ದೊಡ್ಡ ರಾಜ್ಯಗಳಲ್ಲಿ ಪಕ್ಷ ತನ್ನನ್ನು ತಾನು ಪುನರುಜ್ಜೀವನಗೊಳಿಸಲು ಇದು ಸಹಕಾರಿ ಆಗಲಿದೆ.

ಗಾಂಧಿ ಕುಟುಂಬದ ತವರು ರಾಜ್ಯವಾದ ಉತ್ತರ ಪ್ರದೇಶದಲ್ಲಿ ಕಾಂಗ್ರೆಸ್ ಮುಖ್ಯಸ್ಥ ಮಲ್ಲಿಕಾರ್ಜುನ ಖರ್ಗೆ ಅವರು, ಎಲ್ಲಾ ರಾಜ್ಯ ತಂಡಗಳನ್ನು ವಿಸರ್ಜಿಸಿದ್ದರು. ಅದಾದ ತಿಂಗಳುಗಳ ನಂತರ ಪಕ್ಷವು ಇತ್ತೀಚೆಗೆ ಎಲ್ಲಾ 750 ಜಿಲ್ಲೆಗಳಲ್ಲಿ ಜಿಲ್ಲಾ ಘಟಕಗಳ ಮುಖ್ಯಸ್ಥರನ್ನು ನೇಮಕ ಮಾಡಿದೆ.

ಉತ್ತರ ಪ್ರದೇಶದ 403 ಶಾಸಕರಲ್ಲಿ ಕೇವಲ 2 ಕಾಂಗ್ರೆಸ್ ಶಾಸಕರು ಮತ್ತು 80 ಸಂಸದರಲ್ಲಿ 6 ಜನ ಮಾತ್ರ ಕಾಂಗ್ರೆಸ್ ನಿಂದ ಆಯ್ಕೆ ಆಗಿದ್ದಾರೆ. ಇದು ಆ ರಾಜ್ಯದಲ್ಲಿ ಪಕ್ಷ ಸಂಘಟನೆಗೆ ಬಹಳ ಹಿಂದಿನಿಂದಲೂ ಸಮಸ್ಯೆಯಾಗಿತ್ತು. ಬಿಜೆಪಿ ಆಡಳಿತವಿರುವ ರಾಜ್ಯದಲ್ಲಿ ಕಳೆದುಹೋದ ನೆಲೆಯನ್ನು ಉಳಿಸಿಕೊಳ್ಳಲು ಉತ್ಸುಕರಾಗಿರುವ 6 ಸಂಸದರಲ್ಲಿ ಒಬ್ಬರಾದ ರಾಹುಲ್, ಸಾಂಸ್ಥಿಕ ಪುನಾರಚನೆಯ ಮೇಲ್ವಿಚಾರಣೆ ನಡೆಸುತ್ತಿದ್ದಾರೆ.

ಉತ್ತರಪ್ರದೇಶದಲ್ಲಿ ಪಕ್ಷ ಬಲವರ್ಧನೆಗೆ ಹೆಚ್ಚಿನ ಒತ್ತು ನೀಡಿದ ನಾಯಕರು: ಈಟಿವಿ ಭಾರತ್ ಜೊತೆಗೆ ಮಾತನಾಡಿದ ಮಧ್ಯಪ್ರದೇಶದ ಎಐಸಿಸಿ ಮಾಜಿ ಉಸ್ತುವಾರಿ ಕಾರ್ಯದರ್ಶಿ ಮತ್ತು ಹಿರಿಯ ಕಾಂಗ್ರೆಸ್ ನಾಯಕ ಸಂಜಯ್ ಕಪೂರ್, "ಖರ್ಗೆ, ರಾಹುಲ್ ಗಾಂಧಿ ಮತ್ತು ಪ್ರಿಯಾಂಕಾ ಗಾಂಧಿ ವಾದ್ರಾ ಅವರು ಯಾವಾಗಲೂ ಉತ್ತರ ಪ್ರದೇಶದ ಮೇಲೆ ಹೆಚ್ಚು ಕೇಂದ್ರೀಕರಿಸಿದ್ದಾರೆ. ಹಾಗಾಗಿ ಕೆಲವು ಡಿಸಿಸಿ ಮುಖ್ಯಸ್ಥರನ್ನು ಉಳಿಸಿಕೊಂಡು, ಹಲವೆಡೆ ಹೊಸ ಮುಖಗಳನ್ನೇ ಕರೆತರಲಾಗಿದೆ. ಈ ಸ್ಥಳೀಯ ನಾಯಕರು ಈಗ ಹೈಕಮಾಂಡ್‌ನೊಂದಿಗೆ ತಮ್ಮ ಅಭಿಪ್ರಾಯಗಳನ್ನು ಹಂಚಿಕೊಳ್ಳುತ್ತಾರೆ. ಮತ್ತು ರಾಜ್ಯದಲ್ಲಿ ಪಕ್ಷವನ್ನು ಪುನರುಜ್ಜೀವನಗೊಳಿಸುವ ಮಾರ್ಗಸೂಚಿಯನ್ನು ಸೂಚಿಸುತ್ತಾರೆ. ಸಾಮಾಜಿಕ ಎಂಜಿನಿಯರಿಂಗ್ ಅನ್ನು ಗಮನದಲ್ಲಿಟ್ಟುಕೊಂಡು ಹೊಸ ಡಿಸಿಸಿ ಮುಖ್ಯಸ್ಥರನ್ನು ನೇಮಿಸಲಾಗಿದೆ. ಮತ್ತು ಅವರು ಹೊಸ ವ್ಯಕ್ತಿಗಳು ಪಕ್ಷದಲ್ಲಿ ಹೆಚ್ಚು ಸಕ್ರಿಯ ಪಾತ್ರ ವಹಿಸಲು ಪ್ರೋತ್ಸಾಹಿಸಲಾಗುತ್ತದೆ. ಮುಂಬರುವ ದಿನಗಳಲ್ಲಿ, ಪಕ್ಷದಲ್ಲಿ ಹೊಸ ಬದಲಾವಣೆಯನ್ನು ನೀವು ಗಮನಿಸಬಹುದು" ಎಂದು ಅವರು ತಿಳಿಸಿದರು.

"ಮುಂದಿನ ತಿಂಗಳು ನಡೆಯಲಿರುವ ಎಐಸಿಸಿ ಅಧಿವೇಶನಕ್ಕೂ ಮುನ್ನ ಇತರ ಸಮಿತಿಗಳನ್ನು ಸಹ ಸ್ಥಾಪಿಸಲಾಗುವುದು" ಎಂದು ಅವರು ಹೇಳಿದರು.

## ಫೋರ್‌ಮನ್ ಇನ್ನಿಲ್ಲ

ಟೆಕ್ಸಾಸ್ ಮೂಲದ ಫೋರ್‌ಮನ್, ಒಲಿಂಪಿಕ್ ಚಿನ್ನದ ಪದಕ ವಿಜೇತರಾಗಿ ತಮ್ಮ ಬಾಕ್ಸಿಂಗ್ ವೃತ್ತಿಜೀವನವನ್ನು ಪ್ರಾರಂಭಿಸಿದರು. 1973 ರಲ್ಲಿ ಜೋ ಫ್ರೇಜಿಯರ್ ಅವರನ್ನು ಸೋಲಿಸುವ ಮೂಲಕ ವೃತ್ತಿ ಜೀವನದ ಶಿಖರ ಏರಿದ್ದರು.

## ಕಾಲಿಗೆ ಗುಂಡೇಟು

ಹಾಗೂ ಪೇದೆಯೊಬ್ಬರಿಗೆ ಗಾಯವಾಗಿದೆ.

ಜಯಪುರ ಪೊಲೀಸ್ ಠಾಣಾ ವ್ಯಾಪ್ತಿಯ ಗೋಪಾಲಪುರ ಗ್ರಾಮದ ಬಳಿ ಈ ಘಟನೆ ನಡೆದಿದೆ. ಕೇರಳ ಮೂಲದ ಆರೋಪಿ ಆದರ್ಶ್‌ಗೆ ಗುಂಡೇಟು ಬಿದ್ದಿದೆ. ಘಟನೆಯಲ್ಲಿ ಜಯಪುರ ಠಾಣೆ ಎ ಎಸ್‌ಐ ಪ್ರಕಾಶ್ ಹಾಗೂ ಸಿಬ್ಬಂದಿ ಗಾಯಗೊಂಡಿದ್ದಾರೆ.ಆದರ್ಶ್ ಬಂಧಿಸಿದ ಪೊಲೀಸರು ಸ್ಥಳ ಮಹಜರಿಗಾಗಿ ಆದರ್ಶ್ ಕಾರು ಸಿಕ್ಕ ಸ್ಥಳಕ್ಕೆ ಕರೆದುಕೊಂಡು ಹೋಗಲಾಗಿತ್ತು. ಜಯಪುರ ಸಬ್ ಇನ್ಸ್‌ಪೆಕ್ಟರ್ ಪ್ರಕಾಶ್ ಬೈಲುಕುಪ್ಪೆ, ಇನ್ಸಪೆಕ್ಟರ್ ದೀಪಕ್ ಹಾಗೂ ಇಬ್ಬರು ಸಿಬ್ಬಂ ಕರೆದೊಯ್ದಿದ್ದರು. ಕಾರು ಪತ್ತೆಯಾದ ಸ್ಥಳವನ್ನು ಆದರ್ಶ್ ಗುರುತಿಸಿದ್ದಾನೆ. ನಂತರ ಮೂತ್ರವಿಸರ್ಜನೆ ನೆಪವೊಡ್ಡಿ ರಸ್ತೆ ಬದಿಯಲ್ಲಿ ನಿಂತಿದ್ದಾನೆ. ಅಲ್ಲಿ ಯಾರೋ ಕುಡಿದು ಬಿಸಾಕಿದ್ದ ಬಿಯರ್ ಬಾಟಲಿ ಈತನ ಕೈಗೆ ಸಿಕ್ಕಿದೆ. ಬಾಟಲಿಯನ್ನು ತೆಗೆದುಕೊಂಡು ಅದನ್ನು ಒಡೆದು ಸಬ್ ಇನ್ಸ್‌ಪೆಕ್ಟರ್ ಪ್ರಕಾಶ್ ಹಾಗೂ ಸಿಬ್ಬಂದಿ ಹರೀಶ್ ಮೇಲೆ ದಾಳಿ ನಡೆಸಿ ಪರಾರಿಯಾಗಲು ಯತ್ನಿಸಿದ್ದಾನೆ. ಪ್ರಕಾಶ್ ಸಾಕಷ್ಟು ಬಾರಿ ಶರಣಾಗುವಂತೆ ಮನವಿ ಮಾಡಿದರೂ ಕೇಳಿಲ್ಲ. ನಿರಂತರ ದಾಳಿ ಮುಂದುವರಿಸಿದ್ದಾನೆ. ಈ ವೇಳೆ ಜೊತೆಯಲ್ಲಿದ್ದ ಬೈಲುಕುಪ್ಪೆ ಇನ್ಸ್‌ಪೆಕ್ಟರ್ ದೀಪಕ್ ಆತ್ಮರಕ್ಷಣೆಗಾಗಿ ತಮ್ಮಲ್ಲಿದ್ದ ಪಿಸ್ತೂಲ್‌ನಿಂದ ಆದರ್ಶ್ ಮೇಲೆ ಗುಂಡು ಹಾರಿಸಿದ್ದಾರೆ. ಆದರ್ಶ್ ಎಡಗಾಲಿಗೆ ಗುಂಡು ತಗುಲಿ ಬಿದ್ದಿದ್ದಾನೆ. ಗಾಯಗೊಂಡ ಸಬ್ ಇನ್ಸ್‌ಪೆಕ್ಟರ್ ಪ್ರಕಾಶ್ ಹಾಗೂ ಹರೀಶ್ ಅವರನ್ನು ಕೆಆರ್ ಆಸ್ಪತ್ರೆಗೆ ದಾಖಲಿಸಲಾಗಿದೆ. ಪ್ರಕಾಶ್, ಹರೀಶ್ ಇದೀಗ ಚೇತರಿಸಿಕೊಳ್ಳುತ್ತಿದ್ದಾರೆ. ಗುಂಡು ತಗುಲಿದ ಆದರ್ಶ್‌ನನ್ನು ಮೇಟಗಳ್ಳಿಯಲ್ಲಿರುವ ಸರ್ಕಾರಿ ಆಸ್ಪತ್ರೆಯಲ್ಲಿ ದಾಖಲಿಸಿ ಚಿಕಿತ್ಸೆ ನೀಡಲಾಗುತ್ತಿದೆ.

## ನೀರು ಹರಿಸುತ್ತೇವೆ

ಕ್ಯೂಸೆಕ್‌ನಂತೆ ನೀರು ಹರಿಸಲಾಗುವುದು. ಎಡದಂಡೆ ವಿಜಯನಗರ ಕಾಲುವೆಗೆ ಏ.11ರಿಂದ ಮೇ 10ರವರೆಗೆ 150 ಕ್ಯೂಸೆಕ್‌ನಂತೆ ವಿತರಣಾ ಕಾಲುವೆ 1 ರಿಂದ 11ಎ ವರೆಗೆ ಅಥವಾ ಈ ಕಾಲುವೆಯಡಿ ನೀರಿನ ಲಭ್ಯತೆ ಇರುವವರೆಗೆ ಮಾತ್ರ, ಯಾವುದು ಮೊದಲೋ, ಅದು ಅನ್ವಯಿಸುತ್ತದೆ" ಎಂದು ಹೇಳಿದರು. "ತುಂಗಭದ್ರಾ ಬಲದಂಡೆ ಕೆಳಮಟ್ಟದ ಕಾಲುವೆಗೆ ಲಭ್ಯವಾಗುವ ನೀರಿನಲ್ಲಿ ಏ.1ರಿಂದ ಏ.10ರವರೆಗೆ ಕುಡಿಯುವ ನೀರು ಒಳಗೊಂಡಂತೆ ಹಾಗೂ ಬೆಳೆಗಳ ಸಂರಕ್ಷಣೆಗಾಗಿ 450 ಕ್ಯೂಸೆಕ್‌ನಂತೆ ನೀರು ಹರಿಸಲಾಗುವುದು. ಇನ್ನು ರಾಯ ಬಸವಣ್ಣ ಕಾಲುವೆಗೆ ಏ.1ರಿಂದ ಮೇ 31ರವರೆಗೆ ಲಭ್ಯವಾಗುವ ನೀರಿನಲ್ಲಿ 200 ಕ್ಯೂಸೆಕ್‌ನಂತೆ ನೀರು ಹರಿಸಲಾಗುವುದು" ಎಂದು ವಿವರಿಸಿದರು. "ಕುಡಿಯುವ ನೀರು ಮತ್ತು ನಿಂತ ಬೆಳೆಗಳಿಗೆ ಆದ್ಯತೆ ಕೊಟ್ಟು ನೀರು ಒದಗಿಸಲು ತೀರ್ಮಾನ ಮಾಡಲಾಗಿದೆ. ಈ ಸಂದರ್ಭದಲ್ಲಿ ಯಾವುದೇ ತೊಂದರೆಯಾಗದ ರೀತಿಯಲ್ಲಿ ನಿಷೇಧಾಜ್ಞೆ ಮೂಲಕ ನೀರು ಹರಿಸಲಾಗುವುದು" ಎಂದು ತಿಳಿಸಿದರು. ಈ ಸಮಯದಲ್ಲಿ ಜಿಲ್ಲಾಧಿಕಾರಿಗಳು ಕಲಂ 144ನ್ನು ಅಳವಡಿಸಿ ಸೂಕ್ತ ಪೊಲೀಸ್ ಬಂದೋಬಸ್ತನ್ನು ಪಡೆದು ಕುಡಿಯುವ ನೀರಿನ ಕೆರೆ ಕಟ್ಟೆಗಳನ್ನು ತುಂಬಿಸಿಕೊಳ್ಳಲು ಸಚಿವರು ಸೂಚನೆ ನೀಡಿದರು.

## ಇಂದಿನಿಂದ ಐಪಿಎಲ್ ಶುರು

ಅವರ ಶಕ್ತಿಯು ಪಂದ್ಯಾವಳಿಗೆ ಅದ್ಭುತ ಆರಂಭವನ್ನು ನೀಡಿತು. ಇತ್ತೀಚಿನ ವರ್ಷಗಳಲ್ಲಿ ಕೋಲ್ಕತ್ತಾ ಮೂರು ಬಾರಿ ಪ್ರಶಸ್ತಿ ಗೆದ್ದಿದ್ದರೂ, ಬೆಂಗಳೂರು ತನ್ನ ಮೊದಲ ಪ್ರಶಸ್ತಿಗಾಗಿ ಶ್ರಮಿಸುತ್ತಲೇ ಇದೆ. ಪ್ರಶಸ್ತಿ ಗೆದ್ದ ಒಂದು ವರ್ಷದ ನಂತರ ಕೋಲ್ಕತ್ತಾ ಸೋಲು ಅನುಭವಿಸುವ ಅಭ್ಯಾಸ ಹೊಂದಿದೆ. ಇದು ಮತ್ತೆ ಸಂಭವಿಸದಂತೆ ನೋಡಿಕೊಳ್ಳಲು ರಹಾನೆ ನೇತೃತ್ವದ ಕೆಕೆಆರ್ ದೃಢನಿಶ್ಚಯ ಹೊಂದಿದೆ. ಭಾರತದ ಚಾಂಪಿಯನ್ಸ್ ಟ್ರೋಫಿ ಗೆಲುವಿನಲ್ಲಿ ಪ್ರಮುಖ ಪಾತ್ರ ವಹಿಸಿದ ನಿಗೂಢ ಸ್ಪಿನ್ನರ್ ವರುಣ್ ಚಕ್ರವರ್ತಿಯ ಮೇಲೆ ಎಲ್ಲರ ಕಣ್ಣುಗಳು ನೆಟ್ಟಿರುತ್ತವೆ ಎಂಬುದರಲ್ಲಿ ಸಂದೇಹವಿಲ್ಲ. ಸ್ಪಿನ್‌ಗೆ ಅನುಕೂಲಕರವಾದ ಪಿಚ್‌ನಲ್ಲಿ ಕೊಹ್ಲಿ ಅವರನ್ನು ಹೇಗೆ ಎದುರಿಸುತ್ತಾರೆ ಎಂಬುದನ್ನು ನೋಡಲು ಆಸಕ್ತಿದಾಯಕವಾಗಿರುತ್ತದೆ.

ಕೆಕೆಆರ್ ತಂಡದಲ್ಲಿ ನರೈನ್ ರೂಪದಲ್ಲಿ ಮತ್ತೊಬ್ಬ ಉತ್ತಮ ಸ್ಪಿನ್ನರ್ ಇದ್ದಾರೆ. 36 ವರ್ಷ ವಯಸ್ಸಿನಲ್ಲೂ ಅವರು ಇನ್ನೂ ಪ್ರಮುಖ ಬೌಲರ್. ಕೋಲ್ಕತ್ತಾದ ಬ್ಯಾಟಿಂಗ್ ಕೂಡ ಉತ್ತಮವಾಗಿದ್ದು, ರಸೆಲ್, ವೆಂಕಟೇಶ್ ಅಯ್ಯರ್, ಡಿ ಕಾಕ್, ರೋಮನ್ ಪೊವೆಲ್ ಮತ್ತು ರಿಂಕು ಅವರಿದ್ದಾರೆ. ಮತ್ತೊಂದೆಡೆ, ಬೆಂಗಳೂರು ತಂಡವು ಸಾಲ್ಟ್, ಕೊಹ್ಲಿ, ಲಿವಿಂಗ್‌ಸ್ಟನ್, ಜಿತೇಶ್, ಪಾಟಿದಾರ್ ಮತ್ತು ಡೇವಿಡ್ ಅವರೊಂದಿಗೆ ಉತ್ತಮ ಬ್ಯಾಟಿಂಗ್ ಲೈನ್‌ಅಪ್ ಅನ್ನು ಹೊಂದಿದೆ. ಆರ್‌ಸಿಬಿ ತಂಡದ ವೇಗದ ಹೊಣೆಯನ್ನು ಭುವನೇಶ್ವರ್ ಮತ್ತು ಹ್ಯಾಜಲ್‌ವುಡ್ ಹೊರಲಿದ್ದಾರೆ. ಸ್ಪಿನ್‌ನ ಪ್ರಮುಖ ಜವಾಬ್ದಾರಿ ಸುಯಾಶ್ ಶರ್ಮಾ ಮತ್ತು ಲಿವಿಂಗ್‌ಸ್ಟನ್ ಮೇಲಿದೆ.

ಈ ಸೀಸನ್‌ನಲ್ಲಿ ಕೆಲವು ನಿಯಮಗಳು ಬದಲಾಗಿವೆ. ಇವುಗಳಲ್ಲಿ ಪ್ರಮುಖವಾದದ್ದು ಉಗುಳುವಿಕೆಯ ಮೇಲಿನ ನಿಷೇಧವನ್ನು ತೆಗೆದುಹಾಕುವುದು. ಕೊರೊನಾ ಸಾಂಕ್ರಾಮಿಕ ರೋಗದ ನಂತರ ಮೊದಲ ಬಾರಿಗೆ ಬೌಲರ್‌ಗಳಿಗೆ ಚೆಂಡಿನ ಮೇಲೆ ಉಗುಳಲು ಅವಕಾಶ ನೀಡಲಾಗಿದೆ.

ರಾತ್ರಿ ಪಂದ್ಯದ ಎರಡನೇ ಇನ್ನಿಂಗ್ಸ್ ಸಮಯದಲ್ಲಿ ಹಿಮದ ಪರಿಣಾಮವನ್ನು ಕಡಿಮೆ ಮಾಡಲು ಬೌಲಿಂಗ್ ತಂಡಕ್ಕೆ ಎರಡನೇ ಬಾಲ್ ಅನ್ನು ನೀಡಲಾಗುತ್ತದೆ. ಅಂಪೈರ್‌ಗಳ ಅನುಮತಿಯೊಂದಿಗೆ 11 ಓವರ್‌ಗಳ ನಂತರ ಎರಡನೇ ಬಾಲ್ ತೆಗೆದುಕೊಳ್ಳಬಹುದು. ಇದು ಮೊದಲ ಬಾಲ್‌ನಂತಯೇ ಇರುತ್ತದೆ. ಈ ನಿಯಮ ಮಧ್ಯಾಹ್ನದ ಪಂದ್ಯಗಳಿಗೆ ಅನ್ವಯಿಸುವುದಿಲ್ಲ.

ಮತ್ತೊಂದೆಡೆ, ಹೈ ವೈಡ್‌ಗಳು ಮತ್ತು ಆಫ್‌ಸೈಡ್ ವೈಡ್‌ಗಳಿಗೂ ಆಖಖ ಬಳಸುವ ಆಯ್ಕೆಯನ್ನು ಒದಗಿಸಲಾಗಿದೆ. ಕೆಲವು ಆಕ್ಷೇಪಣೆಗಳ ಹೊರತಾಗಿಯೂ ಮಂಡಳಿಯು ಇಂಪ್ಯಾಕ್ಟ್ ಪ್ಲೇಯರ್ ನಿಯಮವನ್ನು ಮುಂದುವರಿಸಲು ನಿರ್ಧರಿಸಿದೆ.

ಹೊಸ ಆಟಗಾರರು : ಈ ಐಪಿಎಲ್‌ನ ಮತ್ತೊಂದು ಪ್ರಮುಖ ಅಂಶವೆಂದರೆ ಹಲವು ತಂಡಗಳ ನಾಯಕರು ಬದಲಾಗಿದ್ದಾರೆ. ಕೆಲವರು ಹೊಸ ನಾಯಕರಾಗುವ ಜವಾಬ್ದಾರಿ ದೊರೆತಿದೆ. ಎಲ್ಲಕ್ಕಿಂತ ಅಚ್ಚರಿಯ ವಿಷಯವೆಂದರೆ ಟೀಮ್ ಇಂಡಿಯಾ ಪರ ಇದುವರೆಗೆ ಟಿ20 ಪಂದ್ಯ ಆಡದ ರಜತ್ ಪಾಟಿದಾರ್ ಅವರನ್ನು ಬೆಂಗಳೂರಿನ ನಾಯಕರನ್ನಾಗಿ ನೇಮಿಸಲಾಗಿದೆ.

ಅಕ್ಷರ್ ಪಟೇಲ್ ದೆಹಲಿಯ ಸಾರಥ್ಯ ವಹಿಸಿಕೊಂಡರೆ, ಕಳೆದ ವರ್ಷ ಕೋಲ್ಕತ್ತಾ ತಂಡವನ್ನು ಪ್ರಶಸ್ತಿಗೆ ಕೊಂಡೊಯ್ದಿದ್ದ ಶ್ರೇಯಸ್ ಅಯ್ಯರ್ ಈ ಬಾರಿ ಪಂಜಾಬ್ ಕಿಂಗ್ಸ್ ತಂಡವನ್ನು ಮುನ್ನಡೆಸಲಿದ್ದಾರೆ. ಹಿರಿಯ ಆಟಗಾರ ಅಜಿಂಕ್ಯ ರಹಾನೆ ಅನಿರೀಕ್ಷಿತವಾಗಿ ಕೋಲ್ಕತ್ತಾ ತಂಡದ ನಾಯಕರಾದರು. ಸಂಜು ಸ್ಯಾಮ್ಸನ್ ಅವರ ಬೆರಳಿನ ಗಾಯದಿಂದಾಗಿ ಮೊದಲ ಮೂರು ಪಂದ್ಯಗಳಿಗೆ ರಿಯಾನ್ ಪರಾಗ್ ರಾಜಸ್ಥಾನ್ ರಾಯಲ್ಸ್ ತಂಡವನ್ನು ಮುನ್ನಡೆಸಲಿದ್ದಾರೆ. ಇನ್ನು ಹಾರ್ದಿಕ್ ಪಾಂಡ್ಯ ಒಂದು ಪಂದ್ಯದ ನಿಷೇಧ ಶಿಕ್ಷೆ ಅನುಭವಿಸುತ್ತಿರುವುದರಿಂದ ಈ ಸೀಸನ್‌ನ ಮೊದಲ ಪಂದ್ಯದಲ್ಲಿ ಸೂರ್ಯಕುಮಾರ್ ಮುಂಬೈ ತಂಡವನ್ನು ಮುನ್ನಡೆಸಲಿದ್ದಾರೆ. ದೆಹಲಿ ತೊರೆದ ರಿಷಭ್ ಪಂತ್ ಈ ಬಾರಿ ಲಕ್ನೋ ಸೂಪರ್ ಜೈಂಟ್ಸ್ ತಂಡದ ಸಾರಥ್ಯ ವಹಿಸಿಕೊಂಡಿದ್ದಾರೆ. ಲಕ್ನೋ ಹರಾಜಿನಲ್ಲಿ ಅವರನ್ನು 27 ಕೋಟಿ ರೂ.ಗಳ ಬೃಹತ್ ಮೊತ್ತಕ್ಕೆ ಖರೀದಿಸಲಾಗಿದೆ ಎಂಬುದು ತಿಳಿದ ವಿಷಯ. ಈ ನಾಯಕರು ಯಾವ ರೀತಿಯ ಪ್ರಭಾವ ಬೀರುತ್ತಾರೆ ಎಂಬುದನ್ನು ಕಾದು ನೋಡಬೇಕಾಗಿದೆ.

ಗೇಲ್‌ದೇ ರಿಕಾರ್ಡ್ : ಐಪಿಎಲ್‌ನಲ್ಲಿ ಟೂರ್ನಿಯಲ್ಲಿ ಅತಿ ಹೆಚ್ಚು ಸಿಕ್ಸರ್‌ಗಳನ್ನು ಬಾರಿಸಿದ ಬ್ಯಾಟ್ಸ್‌ಮನ್‌ಗಳ ಪಟ್ಟಿಯಲ್ಲಿ ಕ್ರಿಸ್ ಗೇಲ್ ಅಗ್ರಸ್ಥಾನದಲ್ಲಿದ್ದರೆ, ರೋಹಿತ್ (280) ಎರಡನೇ ಸ್ಥಾನದಲ್ಲಿದ್ದಾರೆ. ಗೇಲ್ ಅತಿ ಹೆಚ್ಚು ವೈಯಕ್ತಿಕ ಸ್ಕೋರ್ (175*) ಗಳಿಸಿದ ದಾಖಲೆಯನ್ನೂ ಹೊಂದಿದ್ದಾರೆ.

ಐಪಿಎಲ್‌ನಲ್ಲಿ ರನ್ ಮಷಿನ್ ಫಸ್ಟ್ : ಐಪಿಎಲ್‌ನಲ್ಲಿ ಕೊಹ್ಲಿ 8004 ರನ್‌ಗಳನ್ನು ಕಲೆ ಹಾಕಿದ್ದಾರೆ. ಅವರು ಪಂದ್ಯಾವಳಿಯಲ್ಲಿ ಅತಿ ಹೆಚ್ಚು ರನ್ ಗಳಿಸಿದ ಬ್ಯಾಟ್ಸ್‌ಮನ್. ಧವನ್ (6769) ಎರಡನೇ ಸ್ಥಾನದಲ್ಲಿದ್ದಾರೆ.

ಉದ್ಘಾಟನಾ ಪಂದ್ಯಕ್ಕೆ ಮಳೆಯ ಭೀತಿ : ಐಪಿಎಲ್‌ನ ಉದ್ಘಾಟನಾ ಪಂದ್ಯಕ್ಕೆ ಕಾತರದಿಂದ ಸಿದ್ಧತೆ ನಡೆಸುತ್ತಿರುವ ಅಭಿಮಾನಿಗಳಲ್ಲಿ ವರುಣ ಆತಂಕ ಮೂಡಿಸುತ್ತಿದ್ದಾನೆ. ಶನಿವಾರ ಕೋಲ್ಕತ್ತಾದಲ್ಲಿ ಮಧ್ಯಮ ಮಳೆಯಾಗುವ ಸೂಚನೆಗಳಿವೆ. ಹಿಂದಿನ ದಿನವೂ ಮಳೆಯಿಂದಾಗಿ ಕೋಲ್ಕತ್ತಾ ಮತ್ತು ಬೆಂಗಳೂರು ಆಟಗಾರರ ಅಭ್ಯಾಸಕ್ಕೆ ಅಡ್ಡಿಯಾಯಿತು. ಮೈದಾನವನ್ನು ಪ್ಲಾಸ್ಟಿಕ್ ಕವರ್‌ಗಳಿಂದ ಕವರ್ ಮಾಡಲಾಗಿದ್ದು, ಈ ಪಂದ್ಯವು ಸುಗಮವಾಗಿ ನಡೆಸಲು ಎಲ್ಲಾ ಸಿದ್ಧತೆಗಳಾಗಿವೆ.

## ಉಳಿವಿಗೆ ಒಟ್ಟಾಗಿದ್ದೇವೆ

ಮಾಜಿ ಪ್ರಧಾನಿ ವಾಜಪೇಯ ಅವರು ಇದೇ ರೀತಿ 2002 ರಲ್ಲಿ 84 ನೇ ತಿದ್ದುಪಡಿ ಮೂಲಕ ಸಂವಿಧಾನ ಬದಲಾವಣೆಗೆ ಮುಂದಾಗಿದ್ದರು" ಎಂದರು. "ನಾವು ಕ್ಷೇತ್ರ ವಿಂಗಡಣೆ ವಿಚಾರವಾಗಿ ಸೋಲುವುದಿಲ್ಲ, ನಮ್ಮ ಹೋರಾಟ ನಿರಂತರ. ನಮ್ಮ ಸ್ಥಾನಗಳು ಕಡಿಮೆ ಆಗಲು ಬಿಡುವುದಿಲ್ಲ. ನಾವು ನಮ್ಮ ವೈಯಕ್ತಿಕ ಹಕ್ಕುಗಳಿಗೆ ಹೋರಾಡುತ್ತಿಲ್ಲ, ದೇಶಕ್ಕಾಗಿ ಹೋರಾಟ ಮಾಡುತ್ತಿದ್ದೇವೆ. ಇದನ್ನು ಮಾಧ್ಯಮಗಳು ಸಹ ಅರ್ಥ ಮಾಡಿಕೊಳ್ಳಬೇಕು" ಎಂದು ಹೇಳಿದರು. ಅಣ್ಣಾಮಲೈಗೆ ನಮ್ಮ ಶಕ್ತಿ ಗೊತ್ತಿದೆ: ಸಭೆ ವಿರೋಧಿಸಿ ಬಿಜೆಪಿ ಕಪ್ಪು ಬಾವುಟ ಪ್ರದರ್ಶನದ ಬಗೆ ಕೇಳಿದಾಗ, "ಬಿಜೆಪಿಯ ಕಪ್ಪು ಬಾವುಟ ಪ್ರದರ್ಶನಕ್ಕೆ ನಾವು ಹೆದರುವುದಿಲ್ಲ. ಅವರ ನಡೆಯನ್ನು ನಾವು ಸ್ವಾಗತಿಸುತ್ತೇವೆ. ನನ್ನನ್ನು ತಿಹಾರ್ ಜೈಲಿಗೆ ಕಳುಹಿಸಿದಾಗಲೇ ಹೆದರಲಿಲ್ಲ. ಇಲ್ಲಿನ ಬಿಜೆಪಿ ಅಧ್ಯಕ್ಷ (ಅಣ್ಣಾಮಲೈ) ನಮ್ಮ ರಾಜ್ಯದಲ್ಲಿ ಕೆಲಸ ಮಾಡಿದ್ದಾರೆ. ನಮ್ಮ ಶಕ್ತಿ ಅವರಿಗೆ ಗೊತ್ತಿದೆ " ಎಂದು ಕಾಲೆಳೆದರು.

# ಕಮ್ಯಾಂಡ್ ಅಂಡ್ ಕಂಟ್ರೋಲ್ ಸೆಂಟರ್‌ಗೆ ಸ್ಮಾರ್ಟ್ ಸಿಟೀಸ್ ಇಂಡಿಯಾ ಪ್ರಶಸ್ತಿ

**ತುಮಕೂರು:** ತುಮಕೂರು ಸ್ಮಾರ್ಟ್‌ಸಿಟಿ ಲಿಮಿಟೆಡ್‌ನ ಪ್ರಮುಖ ಯೋಜನೆಯಾದ ಸಮಗ್ರ ನಗರ ಕಮ್ಯಾಂಡ್ ಅಂಡ್ ಕಂಟ್ರೋಲ್ ಸೆಂಟರ್(ICMCCC-Integrated City Management Command and Control Centre)ಗೆ ಪ್ರಥಮ ಪ್ರಶಸ್ತಿ ಲಭಿಸಿದೆ ಎಂದು ವ್ಯವಸ್ಥಾಪಕ ನಿರ್ದೇಶಕ ಬಿ.ವಿ. ಅಶ್ವಿಜ ತಿಳಿಸಿದ್ದಾರೆ.

ಕೇಂದ್ರ ಸರ್ಕಾರದ ಮಹತ್ವಾಕಾಂಕ್ಷಿ ಯೋಜನೆಯಾದ ಸ್ಮಾರ್ಟ್ ಸಿಟಿ ಮಿಷನ್ ಯೋಜನೆಯಡಿ ತುಮಕೂರು ಸ್ಮಾರ್ಟ್ ಸಿಟಿ ಲಿಮಿಟೆಡ್ ವತಿಯಿಂದ ನಗರದಲ್ಲಿ ವಿವಿಧ ಅಭಿವೃದ್ಧಿ ಯೋಜನೆಗಳನ್ನು ಕೈಗೊಂಡು ಯಶಸ್ವಿಯಾಗಿ ಅನುಷ್ಠಾನಗೊಳಿಸಲಾಗಿದೆ.

ಕೇಂದ್ರದ ನಗರಾಭಿವೃದ್ಧಿ ಸಚಿವಾಲಯದಿಂದ ಆಯೋಜಿತ ಮಾರ್ಚ್ 19 ರಿಂದ 21ರವದರೆಗೆ ನವದೆಹಲಿಯ ಪ್ರಗತಿ ಮೈದಾನದಲ್ಲಿ ನಡೆದ ದೇಶದ 100 ಸ್ಮಾರ್ಟ್ ಸಿಟಿ ಭಾಗವಹಿಸಿದ್ದ 10ನೇ ಸ್ಮಾರ್ಟ್ ಸಿಟೀಸ್ ಇಂಡಿಯಾ–2025 ಮತ್ತು 32ನೇ ಕನ್ವರ್‌ಜೆನ್ಸ್ ಇಂಡಿಯಾ 2025 ಎಕ್ಸ್ಪೋ ಕಾರ್ಯಕ್ರಮದಲ್ಲಿ ಈ ಪ್ರಶಸ್ತಿಯನ್ನು ನೀಡಲಾಗಿದೆ.

ತುಮಕೂರು ನಗರವು ಕರ್ನಾಟಕದ ಸ್ಮಾರ್ಟ್ ಸಿಟಿಗಳಲ್ಲಿ ಐಸಿಎಂಸಿಸಿಯನ್ನು ಸ್ಥಾಪಿಸಿ ಕಾರ್ಯಾರಂಭ ಮಾಡಿದ ಪ್ರಥಮ ಸ್ಮಾರ್ಟ್ ನಗರವಾಗಿದ್ದು, ಇ–ಆಡಳಿತದ ಗುರಿಯೊಂದಿಗೆ ನಗರದ ಕಾರ್ಯಾಚರಣೆಗಳು, ಸಂಚಾರ ನಿಯಮ ಉಲ್ಲಂಘನೆಗಾಗಿ ಇ–ಚಲನಿಂಗ್ ವ್ಯವಸ್ಥೆ, ಘನ ತ್ಯಾಜ್ಯ ಸಂಗ್ರಹಣಾ ವಾಹನಗಳ ಸಮರ್ಥ ಸ್ಥಳ ಟ್ರ್ಯಾಕಿಂಗ್ ವ್ಯವಸ್ಥೆಯಿಂದ ಪರಿಣಾಮಕಾರಿ ಕಸ ಸಂಗ್ರಹಣೆ, ದಿನದ 24 ಗಂಟೆಗಳಲ್ಲಿ ನಗರದ ನಿಗಾವಣೆಗಾಗಿ ಮೊಬೈಲ್ ಕಣ್ಗಾವಲು ವಾಹನಗಳು(ಒಖಗಿಗಳು), ಸಾರ್ವಜನಿಕ ಪ್ರಕಟಣೆಗಳು/ಎಚ್ಚರಿಕೆಗಳಿಗಾಗಿ ಸಾರ್ವಜನಿಕ ವಿಳಾಸ ವ್ಯವಸ್ಥೆ(ಕಂಖ) ಜೊತೆಗೆ ಡ್ಯಾಶ್ ಬೋರ್ಡ್ ಕ್ಯಾಮರಾಗಳು ಮತ್ತು ಕಚಿಟಿ ಖಿಟಣ ಚಿಂಟಿ (ಕಖಿಚ) ಕ್ಯಾಮೆರಾಗಳು ತ್ವರಿತ ಸೇವೆಗಳನ್ನು ಹತೋಟಿಗೆ ತಂದಿವೆ.

ಐಸಿಎಂಸಿಸಿ ಕೇಂದ್ರವು ತುರ್ತು ಪ್ರತಿಕ್ರಿಯೆ ವ್ಯವಸ್ಥೆ, ಚುರುಕು ಸಂದೇಶ ರವಾನೆ, ವ್ಯತ್ಯಯಗೊಳಿಸಬಹುದಾದ ಸಂದೇಶ ರವಾನೆ ವ್ಯವಸ್ಥೆ, ಸಾರ್ವಜನಿಕ ಪ್ರಕಟಣೆಗಳು, ಪರಿಸರ ಮೇಲ್ವಿಚಾರಣಾ ವ್ಯವಸ್ಥೆಯನ್ನು ತುಮಕೂರು ಒನ್ ವ್ಯವಸ್ಥೆಯೊಂದಿಗೆ ಪೂರೈಸುತ್ತದೆ. ಅಲ್ಲದೆ ನಗರದ ಆಡಳಿತ ಕಚೇರಿ/ಪ್ರಾಧಿಕಾರಗಳಿಗೆ ಅವುಗಳ ದೈನಂದಿನ ಕಾರ್ಯಚಟುವಟಿಕೆಗಳ ಸಮಯದಲ್ಲಿ ಹಾಗೂ ತುರ್ತು



ಸಂದರ್ಭಗಳಲ್ಲಿ ಬೆಂಬಲ ವ್ಯವಸ್ಥೆಯಾಗಿ ಈ ಕೇಂದ್ರ ಕಾರ್ಯನಿರ್ವಹಿಸುತ್ತಿದೆ. ಐಸಿಎಂಸಿಸಿ ವ್ಯವಸ್ಥೆಯಡಿ ವಿಶೇಷವಾಗಿ ಮಹಿಳೆಯರ ಮತ್ತು ಮಕ್ಕಳ ಸುರಕ್ಷತೆಗಾಗಿ ಹೆಚ್ಚುವರಿ ಸಿಸಿಟಿವಿ ಕ್ಯಾಮೆರಾಗಳನ್ನು ಅಳವಡಿಸಿ ನಗರದಾದ್ಯಂತ ನಿಗಾವಹಿಸಲಾಗುತ್ತಿದೆ.

ಐಸಿಎಂಸಿಸಿ ವ್ಯವಸ್ಥೆಯಿಂದ ಇತ್ತೀಚೆಗೆ ನಗರದ ಪ್ರಮುಖ ವೃತ್ತದಲ್ಲಿ ರಾತ್ರಿ ವೇಳೆಯಲ್ಲಿ ಬಸ್‌ಗಾಗಿ ಕಾಯ್ದು ಕುಳಿತಿದ್ದ ದಂಪತಿಗಳೊಂದಿಗೆ ಮತ್ತೊಬ್ಬ ವ್ಯಕ್ತಿಯನ್ನು ಅನುಚಿತವಾಗಿ ವರ್ತಿಸುತ್ತಿರುವುದನ್ನು ಸಿಸಿಟಿವಿ ಮೂಲಕ ಗಮನಿಸಿದ ಕೂಡಲೇ ಅವರಿಗೆ ಸಾರ್ವಜನಿಕ ಪ್ರಕಟಣೆ ಮೂಲಕ ಯಾವುದೇ ತುರ್ತು ಸಂದರ್ಭ ಎದುರಾಗಿದ್ದಲ್ಲಿ ಎಸ್‌ಓಎಸ್ ಬಟನ್ ಒತ್ತುವಂತೆ ಸೂಚನೆ ನೀಡಿ ಅವರಿಗೆ ನಗರವು ಸರಕ್ಷಿತವಾಗಿದೆ ಎಂದು ಮನದಟ್ಟು ಮಾಡಿದ ಘಟನೆಯನ್ನು ಇಲ್ಲಿ ಸ್ಮರಿಸಬಹುದಾಗಿದೆ.

ಇತ್ತೀಚೆಗೆ ನಗರದ ಶಿರಾಗೇಟ್ ರಸ್ತೆಯಲ್ಲಿ ಅನಾರೋಗ್ಯ ಪೀಡಿತ ದಾರಿಹೋಕರೊಬ್ಬರು ಅಸ್ವಸ್ಥರಾಗಿ ನರಳಾಡುತ್ತಿರುವುದನ್ನು ಸಿಸಿಟಿವಿ ಸರ್ವಲೆನ್ಸ್ ಮೂಲಕ ಗಮನಿಸಿದ ಐಸಿಎಂಸಿಸಿ ಸಿಬ್ಬಂದಿ ಆರೋಗ್ಯ ಇಲಾಖೆಯ 108 ಆಂಬುಲೆನ್ಸ್‌ಗೆ ಮಾಹಿತಿ ನೀಡಿ ಕೂಡಲೇ ಸ್ಥಳಕ್ಕೆ ಕಳುಹಿಸುವ ಮೂಲಕ ಅಗತ್ಯ ತುರ್ತು ಚಿಕಿತ್ಸೆಗೆ ನೆರವಾಗಿರುವುದು, ಮರಳೂರು ದಿಣ್ಣೆಯಲ್ಲಿ ಕೌಟುಂಬಿಕ ಕಲಹದಿಂದ ಗೃಹಿಣಿಯೊಬ್ಬರು ಎಸ್‌ಓಎಸ್ ಪ್ಯಾನಿಕ್ ಬಟನ್ ಮೂಲಕ ಐಸಿಎಂಸಿಸಿಯನ್ನು ಸಂಪರ್ಕಿಸಿ ಸೂಕ್ತ ರಕ್ಷಣೆ ಕೋರಿದ್ದು, ಕೂಡಲೇ ಕಾರ್ಯ ಪ್ರವೃತ್ತರಾದ ಸಿಬ್ಬಂದಿ ಪೋಲೀಸ್ ಇಲಾಖೆಗೆ ಮಾಹಿತಿ ನೀಡುವ ಮೂಲಕ ಸುರಕ್ಷತೆಗೆ ಧಾವಿಸಿರುವುದನ್ನು ಉದಾಹರಿಸಬಹುದು.

ಪ್ರಶಸ್ತಿ ಸ್ವೀಕಾರ :– ನಗರದಲ್ಲಿ ತನ್ನ ಕಾರ್ಯಾಚರಣೆಗಳೊಂದಿಗೆ ವಾಸ್ತವಿಕವಾಗಿ ನಗರವನ್ನು 'ಸ್ಮಾರ್ಟ್" ಆಗುವಂತೆ ತುಮಕೂರು ಸ್ಮಾರ್ಟ್‌ಸಿಟಿ ಲಿಮಿಟೆಡ್ ವತಿಯಿಂದ ಅನುಷ್ಠಾನಗೊಳಿಸಿರುವ ನಗರದ ಸುರಕ್ಷತೆ ಮತ್ತು ಭದ್ರತೆಗೆ ವಿವಿಧ ರೀತಿಯಲ್ಲಿ ಕಾರ್ಯಾಚರಣೆಗೊಳಿಸುತ್ತಿರುವ




ಐಸಿಎಂಸಿಸಿಗೆ ಪ್ರಥಮ ಪ್ರಶಸ್ತಿ ಲಭಿಸಿದ್ದು ಮಾರ್ಚ್ 21ರಂದು ನವದೆಹಲಿಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಸ್ಮಾರ್ಟ್ ಸಿಟಿ ಲಿಮಿಟೆಡ್‌ನ ವ್ಯವಸ್ಥಾಪಕ ನಿರ್ದೇಶಕರು ಮತ್ತು ಮುಖ್ಯ ಕಾರ್ಯನಿರ್ವಹಣಾಧಿಕಾರಿ ಅಶ್ವಿಜ ಬಿ.ವಿ. ಪ್ರಶಸ್ತಿ ಸ್ವೀಕರಿಸಿದ್ದಾರೆ.

ಪ್ರಶಸ್ತಿ ಪಡೆದ ಬಿ.ವಿ.ಅಶ್ವಿಜ ಅವರು ತುಮಕೂರು ಸ್ಮಾರ್ಟ್‌ಸಿಟಿ ಲಿಮಿಟೆಡ್‌ನ ಅಧ್ಯಕ್ಷರು, ನಿರ್ದೇಶಕ ಮಂಡಳಿ ಸದಸ್ಯರು, ನಗರದ ನಾಗರೀಕರು, ಸಿಬ್ಬಂದಿ ವರ್ಗದವರಿಗೆ ಮತ್ತು ನಗರದ ಸುವ್ಯವಸ್ಥೆಗೆ ಸಹಕರಿಸುತ್ತಿರುವ ಪೊಲೀಸ್ ಇಲಾಖೆಗೆ ಧನ್ಯವಾದಗಳನ್ನು ತಿಳಿಸಿದ್ದಾರೆ.

# ಮಾರುಕಟ್ಟೆಯ ಪ್ರಕ್ರಿಯೆಗಳ ಬಗ್ಗೆ ಮಂಡಳಿಯ ನಿರ್ದೇಶಕರಿಗೆ ವಿವರಣೆ

**ಶಿಡ್ಲಘಟ್ಟ:** ಕರ್ನಾಟಕ ರೇಷ್ಮೆ ಮಾರಾಟ ಮಂಡಳಿಯ ವ್ಯವಸ್ಥಾಪಕ ನಿರ್ದೇಶಕಿಯಾದ ಐಪಿಎಸ್ ಅಧಿಕಾರಿ ಅಧಿಕಾರ ವಹಿಸಿಕೊಂಡ ಬಳಿಕ ಮೊದಲ ಬಾರಿಗೆ ಶಿಡ್ಲಘಟ್ಟ ರೇಷ್ಮೆಗೂಡು ಮಾರುಕಟ್ಟೆಗೆ ಭೇಟಿ ನೀಡಿದ ಡಿ.ರೂಪ ಅವರಿಗೆ, ಮಾರುಕಟ್ಟೆ ಅಧಿಕಾರಿಗಳು ಇ–ಹರಾಜು, ಇ–ತೂಕ, ಹಾಗೂ ಇ–ಹಣ ಪಾವತಿ ಪ್ರಕ್ರಿಯೆಗಳ ಬಗ್ಗೆ ವಿವರಿಸಿದರು.

ರೇಷ್ಮೆಗೂಡು ಮಾರುಕಟ್ಟೆಯ ಆಡಳಿತ, ರೇಷ್ಮೆಗೂಡಿನ ವಹಿವಾಟು, ಹಣ ಪಾವತಿ, ಮತ್ತು ಹರಾಜು ನೀತಿಗಳ ಬಗ್ಗೆ ಮಾರುಕಟ್ಟೆ ಅಧಿಕಾರಿಗಳಿಂದ ಮಾಹಿತಿ ಪಡೆದುಕೊಂಡರು ಈ ವೇಳೆ ಅಧಿಕಾರಿಗಳು ಹಾಗೂ ರೀಲರ್‌ಗಳೊಂದಿಗೆ ಚರ್ಚೆ ನಡೆಸಿದರು.

ಮಾರುಕಟ್ಟೆಗೆ ಬರುವ ರೇಷ್ಮೆಗೂಡಿಗೆ ಸರಿಯಾದ ಜಾಲರಿಗಳನ್ನು ನೀಡಿ, ಪ್ರತಿ ಲಾಟಿಗೆ ಕ್ರಮಾಂಕ ನಿಗದಿಪಡಿಸಲಾಗುತ್ತದೆ ಈ ಇ–ಹರಾಜು ವ್ಯವಸ್ಥೆಯಲ್ಲಿ, ರೀಲರ್‌ಗಳು ತಮಗೆ ಬೇಕಾದ ರೇಷ್ಮೆಗೂಡಿಗೆ ಬಿಡ್ ನೀಡುವ ವ್ಯವಸ್ಥೆಯಿದೆ, ಹೆಚ್ಚಿನ ಮೊತ್ತದ ಬಿಡ್ ನೀಡುವವರಿಗೆ ಆ ರೇಷ್ಮೆಗೂಡು ಲಾಟು ಒದಗಿಸಲಾಗುತ್ತದೆ ಆದರೆ ರೈತರಿಗೆ ಖಂಡಿತಾ ಸಮಾಧಾನಕರ ಬೆಲೆ ಸಿಗಲೇಬೇಕು ಎಂಬ ನಿಟ್ಟಿನಲ್ಲಿ, ಅವರಿಗೂ ತಮ್ಮ ಬಿಡ್ ರದ್ದುಪಡಿಸುವ ಅವಕಾಶವಿದೆ ಎಂದರು.



ಹರಾಜು ಪ್ರಕ್ರಿಯೆಯಲ್ಲಿ ಒಮ್ಮೆ ಮಾರಾಟವಾಗದಿದ್ದರೆ ಅದನ್ನು ಎರಡನೇ ಸುತ್ತಿನಲ್ಲಿ ಮತ್ತೆ ಹರಾಜು ಮಾಡಲಾಗುತ್ತದೆ ಎರಡು ಹಂತಗಳಲ್ಲಿಯೂ ರೈತರು ಸಮಾಧಾನವಾಗದಿದ್ದರೆ, ಅವರು ತಮ್ಮ ರೇಷ್ಮೆಗೂಡನ್ನು ಬೇರೆ ಮಾರುಕಟ್ಟೆಗೆ ಕೊಂಡೊಯ್ಯುವ ಆಯ್ಕೆ ಸಹವಿದೆ. ಹರಾಜು ಮುಗಿದ ನಂತರ, ಎಲೆಕ್ಟ್ರಾನಿಕ್ ತೂಕ ಯಂತ್ರಗಳಲ್ಲಿ ನಿಖರ ತೂಕ ಮಾಡಲಾಗುತ್ತದೆ ಹಾಗು 24 ಗಂಟೆಗಳೊಳಗೆ ರೈತರ ಬ್ಯಾಂಕ್ ಖಾತೆಗೆ ಹಣ ಜಮೆ ಮಾಡಲಾಗುತ್ತದೆ ಇದರಿಂದ ರೇಷ್ಮೆಗೂಡಿನ ಗುಣಮಟ್ಟದ ಆಧಾರದ ಮೇಲೆ ರೈತರಿಗೆ ನ್ಯಾಯವಾದ ಬೆಲೆ ಸಿಗುವುದು ಮತ್ತು ರೀಲರ್‌ಗಳಿಗೆ ಸಹ ಉತ್ತಮ ಗುಣಮಟ್ಟದ ನೂಲು ಲಭ್ಯವಾಗಲಿದೆ ಎಂದು ಅವರು ವಿವರಿಸಿದರು.

ರೇಷ್ಮೆಗೂಡು ಮಾರುಕಟ್ಟೆಗೆ ಭೇಟಿ ನೀಡಿದ ವ್ಯವಸ್ಥಾಪಕ ನಿರ್ದೇಶಕಿಯಾದ ಡಿ.ರೂಪ ಅವರನ್ನು ಭೇಟಿ ಮಾಡಿದ ರೀಲರ್‌ಗಳು, ಇತ್ತೀಚೆಗೆ ರೇಷ್ಮೆನೂಲಿನ ಬೆಲೆ ಕುಸಿತದ ಬಗ್ಗೆ ಆತಂಕ ವ್ಯಕ್ತಪಡಿಸಿದರು. ಕಳೆದ ಮೂರು ದಿನಗಳಲ್ಲಿ ಪ್ರತಿ ಕೆಜಿ ರೇಷ್ಮೆನೂಲಿನ ಬೆಲೆಯಲ್ಲಿ 300 ರೂ. ಗಳಿಂದ 350 ರೂ.ಗಳಷ್ಟು ತಕ್ಷಣದ ಇಳಿಮುಖ ಕಂಡುಬಂದಿದ್ದು, ಇದರಿಂದ ಸಣ್ಣ ಮತ್ತು ಮಧ್ಯಮ ರೀಲರ್‌ಗಳಿಗೆ ಭಾರೀ ನಷ್ಟವಾಗುತ್ತಿದೆ ಎಂದು ಅವರು ವಿವರಿಸಿದರು.

ಬೆಲೆ ಕುಸಿದ ಸಂದರ್ಭಗಳಲ್ಲಿ, ರಾಜ್ಯ ಸರ್ಕಾರವೇ ನೇರವಾಗಿ ರೇಷ್ಮೆ ನೂಲವನ್ನು ಖರೀದಿಸಬೇಕು ಮತ್ತು ರೀಲರ್‌ಗಳಿಗೆ ಕಡಿಮೆ ಬಡ್ಡಿದರದಲ್ಲಿ ಸಾಲ ನೀಡಲು ಕ್ರಮಕೈಗೊಳ್ಳಬೇಕು ಎಂಬುದು ಅವರ ಪ್ರಮುಖ ಬೇಡಿಕೆ ಇದಕ್ಕಾಗಿ ಹೆಚ್ಚಿನ ಅನುದಾನ ಮೀಸಲಿಡುವಂತೆ ಅವರು ಮನವಿ ಮಾಡಿದರು.

ಈ ಕುರಿತಾಗಿ ಪ್ರತಿಕ್ರಿಯಿಸಿದ ಡಿ.ರೂಪ ಅವರು ಇತ್ತೀಚೆಗೆ ನಾನು ಕರ್ನಾಟಕ ರೇಷ್ಮೆ ಮಾರಾಟ ಮಂಡಳಿಯ ವ್ಯವಸ್ಥಾಪಕ ನಿರ್ದೇಶಕಿಯಾಗಿ ಅಧಿಕಾರ ವಹಿಸಿಕೊಂಡಿದ್ದೇನೆ ಇದರ ಬಗ್ಗೆ ಹೆಚ್ಚಿನ ಮಾಹಿತಿ ಸಂಗ್ರಹಿಸಬೇಕಿದೆ ಈ ಕಾರಣಕ್ಕಾಗಿ ರಾಜ್ಯದ ವಿವಿಧ ಮಾರುಕಟ್ಟೆಗಳಿಗೆ ಭೇಟಿ ನೀಡಿ ಅಧ್ಯಯನ ಮಾಡುತ್ತಿದ್ದೇನೆ ಎಲ್ಲಾ ಮಾಹಿತಿಯನ್ನು ಸಂಗ್ರಹಿಸಿದ ನಂತರ, ನಿಗಮದ ಅಧಿಕಾರಿಗಳ ಸಭೆ ನಡೆಸಿ, ನಿಮ್ಮ ಬೇಡಿಕೆ ಈಡೇರಿಸಲು ಸಾಧ್ಯವಿರುವ ಕ್ರಮಗಳ ಬಗ್ಗೆ ಪ್ರಾಮಾಣಿಕ ಪ್ರಯತ್ನ ಮಾಡಲಾಗುವುದು ಎಂದು ಅವರು ಭರವಸೆ ನೀಡಿದರು.

# ಪೊಲೀಸ್ ಇಲಾಖೆ ಸದಾ ನಿಮ್ಮೊಂದಿಗೆ



**ಮುಳಬಾಗಿಲು:** ನಿವೃತ್ತ ಪೊಲೀಸ್ ಅಧಿಕಾರಿಗಳ ಬೆನ್ನೆಲುಬಾಗಿ ಪೊಲೀಸ್ ಇಲಾಖೆ ಸದಾ ನಿಮ್ಮೊಂದಿಗೆ ಇರುತ್ತದೆ, ತಾವು ಸಹ ಇಲಾಖೆಯೊಂದಿಗೆ ಉತ್ತಮ ಬಾಂಧವ್ಯ ಹೊಂದಿರುವುದು ಈ ಸಭೆಯಿಂದ ಗೊತ್ತಾಗುತ್ತಿದೆ. ಕರ್ನಾಟಕ ರಾಜ್ಯ ಪೊಲೀಸ್ ನಿರ್ದೇಶಕರ ಆದೇಶದ ಅನ್ವಯ ಮುಳಬಾಗಿಲು ನಗರ ಪೊಲೀಸ್ ಠಾಣೆಯ ನಿರೀಕ್ಷಕ ರಾಜಣ್ಣ ಮಾತನಾಡಿ, ನಿವೃತ್ತ ಪೊಲೀಸ್ ಅಧಿಕಾರಿಗಳು ತಿಳಿಸಿರುವ ಸಮಸ್ಯೆಗಳಲ್ಲಿ ಮುಂದಿನ ಸಭೆ ಒಳಗೆ ಸಮಸ್ಯೆಗಳನ್ನು ಇತ್ಯರ್ಥಪಡಿಸಲು ಕ್ರಮ ಕೈಗೊಳ್ಳುವುದಾಗಿ ತಿಳಿಸಿದರು.

ಮುಳಬಾಗಿಲು ನಗರ ಪೊಲೀಸ್ ಠಾಣೆಯಲ್ಲಿ ಏರ್ಪಡಿಸಿದ್ದ ತಾಲೂಕು ಮಟ್ಟದ ನಿವೃತ್ತ ಪೊಲೀಸ್ ಅಧಿಕಾರಿ. ಸಿಬ್ಬಂದಿಯ ಕುಂದು ಕೊರತೆಗಳ ಸಭೆಯಲ್ಲಿ ಮುಖಂಡರಿಂದ ಸಮಸ್ಯೆಗಳನ್ನು ತಿಳಿದು ಮಾತನಾಡಿದರು.

ಪೊಲೀಸ್ ನಿವೃತ್ತ ನೌಕರರ ಕುಂದು ಕೊರತೆಗಳ ಬಗ್ಗೆ . ನಿಮಗೆ ಯಾವುದೇ ತೊಂದರೆ ಆದಲ್ಲಿ ಖುದ್ದಾಗಿ ನಮ್ಮ ಗಮನಕ್ಕೆ ತಂದು. ಸೂಕ್ತ ಪರಿಹಾರ ಪಡೆಯಲು ತಿಳಿಸಿದರು

ನಿವೃತ್ತ ನೌಕರರಿಗೆ ಮಾಸಿಕ ಸಭೆ ನಡೆಸಲು ಹಾಗೂ ಅವರ ಕೆಲಸ ಕಾರ್ಯಗಳ ಬಗ್ಗೆ ಮುಳಬಾಗಿಲಿಗೆ ಭೇಟಿ ನೀಡಿದಾಗ ವಿಶ್ರಾಂತಿ ಪಡೆಯಲು ಸಮುದಾಯ ಭವನವನದ ಅವಶ್ಯಕತೆ ಇದ್ದು ಸೂಕ್ತ ಸ್ಥಳಾವಕಾಶ ನೀಡಲು ಸಿಬ್ಬಂದಿ ಕೋರಿಕೆಯ ಮೇರೆಗೆ ಈ ಬಗ್ಗೆ ಹಿರಿಯ ಅಧಿಕಾರಿಗಳ ಗಮನಕ್ಕೆ ತಂದು ಕ್ರಮವಹಿಸುವುದಾಗಿ ತಿಳಿಸಿದರು

ಚೌಡಪ್ಪ. ನಾಗರಾಜು. ಚಿನ್ನಪ್ಪ. ನಾಗಭೂಷಣ್. ರಂಗಪ್ಪ. ಸಿದ್ದಪ್ಪ ವಾಸುದೇವ್ ರಾವ್ ಅಬ್ದುಲ್ ವಾಜಿದ್. ವೆಂಕಟಾಚಾರಿ ನಾರಾಯಣಪ್ಪ ವೆಂಕಟೇಶ್ ಬೋವಿ ಶ್ರೀನಿವಾಸ್. ಕೃಷ್ಣಪ್ಪ ಹನುಮಪ್ಪ. ಆಕುಲ ಕೃಷ್ಣಪ್ಪ. ಮತ್ತಿತರರಿದ್ದರು.

# ಒಳಮೀಸಲಾತಿಗೆ ಆಗ್ರಹಿಸಿ; ಬೆಂಗಳೂರು ಚಲೋ



**ದೇವನಹಳ್ಳಿ:** ತಾಲ್ಲೂಕು ಕೇಂದ್ರದಿಂದ ಫ್ರೀಡಂ ಪಾರ್ಕ್‌ಗೆ ಒಳ ಮೀಸಲಾತಿ ಜಾರಿಗಾಗಿ ಒತ್ತಾಯಿಸಿ ಮಾದಿಗ ಸ್ವಾಭಿಮಾನಿ ಯುವಪಡೆಯಿಂದ ಬೆಂಗಳೂರು ಚಲೋ ನಡೆಸಿ ಫ್ರೀಢಂ ಪಾರ್ಕಿನಲ್ಲಿ ಬೃಹತ್ ಪ್ರತಿಭಟನೆ ನಡೆಸಲು ಯುವಪಡೆ ಹೊರಟಿತು.

ಈ ವೇಳೆಯಲ್ಲಿ ಕರ್ನಾಟಕ ಅಂಬೇಡ್ಕರ್ ಸೇನೆಯ ತಾಲೂಕು ಅಧ್ಯಕ್ಷ ರಾಯಸಂದ್ರ ಸೋಮು ಮಾತನಾಡಿ ಕಾಂಗ್ರೆಸ್ ಸರ್ಕಾರದ ವಿರುದ್ಧ ಗುಡುಗಿದರು,ಕಾಂಗ್ರೆಸ್ ಕೇವಲ ದಲಿತರನ್ನ ವೋಟ್ ಬ್ಯಾಂಕ್ ಗಾಗಿ ಬಳಿಸಿಕೊಳ್ತಿದೆ,ದಲಿತರಿಗೆ ಸಂವಿಧಾನ ಬದ್ಧವಾಗಿ ಕಾಂಗ್ರೆಸ್ ನ್ಯಾಯ ಒದಗಿಸಿಲ್ಲ,ಕಾಂಗ್ರೆಸ್ ಪ್ರಣಾಳಿಕೆಯಲ್ಲಿ ಕೊಟ್ಟಿರುವಂತೆ ಮಾತನ್ನ ಉಳಿಸಿಕೊಳ್ಳಬೇಕು,ಒಳ ಮೀಸಲಾತಿ ಜಾರಿ ಮಾಡಿಲ್ಲ ಅಂದ್ರೆ ರಾಜ್ಯದ ಎಲ್ಲಾ ದಲಿತರು ಸೇರಿ ಕಾಂಗ್ರೆಸ್ ಸೋಲಿಸುತ್ತೇವೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಕರ್ನಾಟಕ ಮಾದಿಗ ದಂಡೋರ ಮತ್ತು ಮಾದಿಗ ಸಂಘಟನೆಗಳ ಒಕ್ಕೂಟ 30 ವರ್ಷಗಳಿಂದ ಮಾದಿಗರಿಗೆ ಮೀಸಲಾತಿಯಲ್ಲಿ ಎಬಿಸಿಡಿ ವರ್ಗೀಕರಣ ಮಾಡಲು ಹೋರಾಟಗಳು ಮಾಡಿಕೊಂಡು ಬಂದಿದ್ದು ಇದರಿಂದ ನ್ಯಾಯಮೂರ್ತಿ ಎಜೆ ಸದಾಶಿವ ಆಯೋಗವು ಮಾಡಿದವರಿಗೆ ಸರ್ವೋಚ್ಚ ನ್ಯಾಯಾಲಯವು ತೀರ್ಪು ನೀಡಿದ್ದು ಆ ತೀರ್ಪಿನ ಅನ್ವಯದಂತೆ ರಾಜ್ಯ ಸರ್ಕಾರಕ್ಕೆ ಅಧಿಕಾರ ಕೊಟ್ಟಿದ್ದು ಈ ಆದೇಶವನ್ನು ಯಥಾವತ್ತಾಗಿ ಜಾರಿ ಮಾಡಲು ಮೀನಾ ಮೇಷ ಎಣಿಸುತ್ತಿದ್ದಾರೆ ಹಾಗಾಗಿ ಈ ಬಗ್ಗೆ ಜಾಣ ನಡೆ ಅನುಸರಿಸುತ್ತಿರುವ ಸರ್ಕಾರವನ್ನು ಬಡಿದೆಬ್ಬಿಸಲು ನಮ್ಮ ಸಮಾಜದ ಭಾಂದವರು ಲಕ್ಷ ಲಕ್ಷ ಸಂಖ್ಯೆಯಲ್ಲಿ ಹರಿಹರದಿಂದ ಹೋರಾಟಗಾರ ಭಾಸ್ಕರಪ್ರಸಾದ್ ಸಾರಥ್ಯದಲ್ಲಿ ಪಾದಯಾತ್ರೆ ಹೊರಟಿದ್ದಾರೆ ಆ ಪಾದಯಾತ್ರೆ ಮಾ.21 ಶುಕ್ರವಾರ ಬೆಂಗಳೂರು ತಲುಪಲಿದೆ ಅವರ ಜೊತೆಯಾಗಿ ಕೈಜೋಡಿಸಲು ನಮ್ಮ ತಾಲುಕಿನಿಂದ ಸಾವಿರಾರು ಸಂಖ್ಯೆಯಲ್ಲಿ ಯುವಕರ ಭಾಗವಹಿಸಬೇಕಿದೆ ಎಂದರು.

ಇದೇ ಸಂದರ್ಭದಲ್ಲಿ ಎಎಸ್ಸ್ ಕೆ ಯ ಜಿಲ್ಲಾಧ್ಯಕ್ಷ ಬೆಟ್ಟೇನಹಳ್ಳಿ ಬಿವಿ. ಮುನಿರಾಜು, ಶಿವಾನಂದ, ರಾಯಸಂದ್ರ ಸೋಮು, ಡಿಸಿ ಹೇಮಂತ್, ಪುನೀತ್, ತಿರುಮಳೇಶ್, ಸುರೇಶ್ ಕೊಂಡ, ಬಾಲು, ಅರುಣ್, ಅಭಿ, ಹೇಮಂತ್‌ಪಾಪ, ಮನು, ಕಗ್ಗಲಹಳ್ಳಿ ಸುನಿಲ್‌ಕುಮಾರ್ ಸೇರಿದಂತೆ ಮಾದಿಗ ಸ್ವಾಭಿಮಾನಿ ಯುವಪಡೆ ಸದಸ್ಯರು ಭಾಗವಹಿಸಿದ್ದರು.

# ಅಂಗನವಾಡಿ ಕೇಂದ್ರಕ್ಕೆ ಜಿಲ್ಲಾಧಿಕಾರಿ ಭೇಟಿ

**ತುಮಕೂರು:** ಇಂದಿನಿಂದ ಎಸ್‌ಎಸ್‌ಎಲ್‌ಸಿ ವಾರ್ಷಿಕ ಪರೀಕ್ಷೆ–1 ಪ್ರಾರಂಭವಾಗಿದ್ದು, ಕೊರಟಗೆರೆ ತಾಲೂಕಿನ ತುಂಬಾಡಿ ಗ್ರಾಮದ ಶ್ರೀ ಶಿವಾನಂದ ಪ್ರೌಢಶಾಲೆಯ ಪರೀಕ್ಷಾ ಕೇಂದ್ರಕ್ಕೆ ಇಂದು ಜಿಲ್ಲಾಧಿಕಾರಿ ಶುಭ ಕಲ್ಯಾಣ್ ಭೇಟಿ ನೀಡಿದರು.

ಪರೀಕ್ಷಾ ಕೇಂದ್ರದಲ್ಲಿ ಬೆಳಕು, ಕುಡಿಯುವ ನೀರಿನ ವ್ಯವಸ್ಥೆ ಸೇರಿದಂತೆ ಮೂಲಭೂತ ಸೌಲಭ್ಯ, ಮುಂಜಾಗ್ರತಾ ಕ್ರಮವಾಗಿ ತುರ್ತು ಚಿಕಿತ್ಸೆ ನೀಡಲು ಆರೋಗ್ಯ ಸಿಬ್ಬಂದಿ ನಿಯೋಜನೆ ಮಾಡಿರುವ ಬಗ್ಗೆ ಪರಿಶೀಲಿಸಿದರು.

ಅಂಗನವಾಡಿ ಕೇಂದ್ರಕ್ಕೆ ಭೇಟಿ: ನಂತರ ಕೊರಟಗೆರೆ ತಾಲೂಕು ತುಂಬಾಡಿ ಗ್ರಾಮದ ಅಂಗನವಾಡಿ ಕೇಂದ್ರಕ್ಕೆ ಭೇಟಿ ನೀಡಿದ ಅವರು, ಮಕ್ಕಳ ಪೋಷಣೆ, ಶೈಕ್ಷಣಿಕ ಚಟುವಟಿಕೆ, ಆರೋಗ್ಯ ಸೇವೆ ಹಾಗೂ ಮಕ್ಕಳಿಗಾಗಿ ತಯಾರಿಸಿದ ಆಹಾರದ ಗುಣಮಟ್ಟವನ್ನು ಪರಿಶೀಲಿಸಿದರು. ಅಂಗನವಾಡಿ ಕೇಂದ್ರವನ್ನು ಸ್ವಚ್ಛವಾಗಿಡಲು ಹಾಗೂ ಸಮರ್ಪಕವಾಗಿ ದಾಖಲೆ ನಿರ್ವಹಣೆ ಮಾಡಲು ಅಂಗನವಾಡಿ ಸಿಬ್ಬಂದಿಗೆ ಸೂಚಿಸಿದರು.

ಸೌರ ಘಟಕ ವೀಕ್ಷಿಸಿದ ಜಿಲ್ಲಾಧಿಕಾರಿ :–

ಬಳಿಕ ತುಮಕೂರು ತಾಲ್ಲೂಕು ಅರಕೆರೆ ಗ್ರಾಮದ ಗುರುಲಿಂಗಯ್ಯ ಅವರ ಮನೆಯ ಮೇಲ್ಛಾವಣಿಯ ಮೇಲೆ ಪ್ರಧಾನ ಮಂತ್ರಿ ಸೂರ್ಯ ಘರ್ ಮುಫ್ತ್ ಬಿಜ್ಲಿ ಯೋಜನೆಯಡಿ ಅಳವಡಿಸಿದ್ದ ಸೌರಘಟಕವನ್ನು ವೀಕ್ಷಿಸಿ ಮಾತನಾಡಿದ ಅವರು, ಭಾರತ ಸರ್ಕಾರದ ಮಹತ್ವಾಕಾಂಕ್ಷಿ ಯೋಜನೆಯಾದ ಪ್ರಧಾನ ಮಂತ್ರಿ ಸೂರ್ಯ ಘರ್ ಮುಫ್ತ್ ಬಿಜ್ಲಿ ಯೋಜನೆಯಡಿ ಮನೆಯ ಮೇಲ್ಛಾವಣಿಯಲ್ಲಿ ಸೌರ ಘಟಕ ಸ್ಥಾಪಿಸಲು ಸಹಾಯಧನ ನೀಡುವ ಮೂಲಕ ಪ್ರೋತ್ಸಾಹ ನೀಡಲಾಗುತ್ತಿದೆ. ಇದರಿಂದ ಪ್ರತಿ ತಿಂಗಳು ತಮ್ಮ ಮನೆಗೆ ಅಗತ್ಯ ವಿದ್ಯುತ್ತನ್ನು ಉಚಿತವಾಗಿ ಪಡೆದುಕೊಳ್ಳಬಹುದಾಗಿದೆ. ಅಲ್ಲದೇ ಹೆಚ್ಚುವರಿ ವಿದ್ಯುತ್ ಅನ್ನು ಬೆಸ್ಕಾಂಗೆ ಮಾರಾಟ ಮಾಡಲು ಅವಕಾಶವಿದೆ ಎಂದು ತಿಳಿಸಿದರು.

ಸೌರ ಘಟಕ ಅಳವಡಿಕೆಯಿಂದ ವಿದ್ಯುತ್ ಖರ್ಚು ಕಡಿಮೆಯಾಗುವುದರ ಜೊತೆಗೆ ಪರಿಸರ ರಕ್ಷಣೆ ಹಾಗೂ ದೇಶದ ವಿದ್ಯುತ್ ಆರ್ಥಿಕತೆಗೂ ಸಹಾಯಕವಾಗಿದೆ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಕೊರಟಗೆರೆ ಗ್ರೇಡ್–2 ತಹಶೀಲ್ದಾರ್ ರಾಮ್ ಪ್ರಸಾದ್, ಕ್ಷೇತ್ರ ಶಿಕ್ಷಣಾಧಿಕಾರಿ ಸಿ.ವಿ. ನಟರಾಜ್, ಬೆಸ್ಕಾಂ ಅಧಿಕಾರಿಗಳು ಸೇರಿದಂತೆ ಮತ್ತಿತರರು ಹಾಜರಿದ್ದರು.



# ಮಾರ್ಚ್ 25ರಂದು ವಿವಿಧ ಹುದ್ದೆಗಳಿಗೆ ನೇರ ಸಂದರ್ಶನ

**ಚಾಮರಾಜನಗರ:** ಜಿಲ್ಲಾ ಉದ್ಯೋಗ ವಿನಿಮಯ ಕಚೇರಿ, ಚಾಮರಾಜನಗರದ ಪ್ಯಾಲೆಸ್ ಟೊಯೋಟಾ ಇವರ ಸಹಯೋಗದೊಂದಿಗೆ ವಿವಿಧ ಹುದ್ದೆಗಳ ನೇಮಕಾತಿಗಾಗಿ ಮಾರ್ಚ್ 25 ರಂದು ಬೆಳಿಗ್ಗೆ 10.30 ರಿಂದ ಮಧ್ಯಾಹ್ನ 3 ಗಂಟೆಯ ವರೆಗೆ ನಗರದ ಜಿಲ್ಲಾಢಳಿತ ಭವನದಲ್ಲಿರುವ ಜಿಲ್ಲಾ ಉದ್ಯೋಗ ವಿನಿಮಯ ಕಚೇರಿಯಲ್ಲಿ ನೇರ ಸಂದರ್ಶನ ನಡೆಸಲಾಗುತ್ತದೆ.

ಸೇಲ್ಸ್ ಎಕ್ಸಿಕ್ಯೂಟಿವ್ ಇನ್ ಶೋ ರೂಂ, ಸರ್ವಿಸ್ ಅಡ್ವೈಸರ್,ಟೆಕ್ನಿಷಿಯನ್, ರಿಸಪ್ಷನಿಸ್ಟ್ ಬ್ಯಾಕ್ ಎಂಡ್ ಎಕ್ಸಿಕ್ಯೂಟಿವ್ 25 ಹುದ್ದೆಗಳಿಗೆ ಪಿ.ಯು.ಸಿ. ಐಟಿಐ, (ಆಟೋ ಮೊಬೈಲ್ ಮತ್ತು ಮೆಕ್ಯಾನಿಕಲ್), ಡಿಪ್ಲೋಮಾ, ಯಾವುದೇ ಪದವಿ ಮತ್ತು ಸ್ನಾತಕೋತ್ತರ ಪದವಿ ವಿದ್ಯಾರ್ಹತೆ ಹೊಂದಿರುವ 21 ರಿಂದ 32 ವಯೋಮಿತಿಯ ಯುವಕ– ಯುವತಿಯರು ನೇರ ಸಂದರ್ಶನದಲ್ಲಿ ಭಾಗವಹಿಸಬಹುದು.

ಆಸಕ್ತಿಯುಳ್ಳ ಅಭ್ಯರ್ಥಿಗಳು ತಮ್ಮ ಸ್ವ–ವಿವರ (ಬಯೋಡೇಟಾ) ಮತ್ತು ಅಂಕಪಟ್ಟಿಗಳ ಮೂಲ ಹಾಗೂ ಜೆರಾಕ್ಸ್ ಪ್ರತಿಗಳೊಂದಿಗೆ ಸ್ವಂತ ಖರ್ಚಿನಲ್ಲಿ ಸಂದರ್ಶನಕ್ಕೆ ಹಾಜರಾಗಬೇಕು.

ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ಉದ್ಯೋಗಾಧಿಕಾರಿಗಳು, ಜಿಲ್ಲಾ ಉದ್ಯೋಗ ವಿನಿಮಯ ಕಚೇರಿ, ಚಾಮರಾಜನಗರ, ಇವರನ್ನು ಸಂಪರ್ಕಿಸಿ ಮಾಹಿತಿಯನ್ನು ಪಡೆಯಬಹುದಾಗಿದೆ ಅಥವಾ ದೂರವಾಣಿ ಸಂಖ್ಯೆ 08226–224410 ಗೆ ಕರೆಮಾಡಿ ಮಾಹಿತಿ ಪಡೆಯುವಂತೆ ಪ್ರಕಟಣೆ ತಿಳಿಸಿದೆ.

# ಏ.4ರಿಂದ ಮಕ್ಕಳ ಬೇಸಿಗೆ ರಂಗ ತರಬೇತಿ ಶಿಬಿರ

**ತುಮಕೂರು(ಕ.ವಾ.):** ಗುಬ್ಬಿ ಪಟ್ಟಣದ ಡಾ: ಗುಬ್ಬಿ ವೀರಣ್ಣ ಟ್ರಸ್ಟ್ ವತಿಯಿಂದ ಗುಬ್ಬಿ ಪಟ್ಟಣದ ಡಾ: ಗುಬ್ಬಿ ವೀರಣ್ಣ ರಂಗಮಂದಿರದಲ್ಲಿ ಮಕ್ಕಳಿಗಾಗಿ ಏಪ್ರಿಲ್ 4 ರಿಂದ ಮೇ 10ರವರೆಗೆ ಬೇಸಿಗೆ ರಂಗ ತರಬೇತಿ ಶಿಬಿರವನ್ನು ಆಯೋಜಿಸಲಾಗಿದೆ.

ಶಿಬಿರದಲ್ಲಿ 8 ರಿಂದ 14 ವರ್ಷ ವಯೋಮಾನದ ಮಕ್ಕಳು ಭಾಗವಹಿಸಬಹುದಾಗಿದೆ. ಶಿಬಿರವು ಪ್ರತಿ ದಿನ ಬೆಳಿಗ್ಗೆ ಮತ್ತು ಮಧ್ಯಾಹ್ನ ನಡೆಯಲಿದೆ. ತರಬೇತಿಗೆ 1,000 ರೂ. ಶುಲ್ಕವನ್ನು ನಿಗಧಿಪಡಿಸಲಾಗಿದ್ದು, ಭಾಗವಹಿಸುವ ಮಕ್ಕಳು ಊಟ, ಉಪಹಾರ ಮತ್ತು ಕುಡಿಯುವ ನೀರನ್ನು ಸ್ವಯಂ ವ್ಯವಸ್ಥೆ ಮಾಡಿಕೊಳ್ಳಬೇಕು. ಆಯ್ಕೆಯಾದ ಮಕ್ಕಳು ಟ್ರಸ್ಟ್ ಕಾಲ ಕಾಲಕ್ಕೆ ರೂಪಿಸುವ ನಿಯಮಗಳಿಗೆ ಬದ್ಧರಾಗಿರಬೇಕು.

ಶಿಬಿರದಲ್ಲಿ ಭಾಗವಹಿಸಲಿಚ್ಛಿಸುವ ಮಕ್ಕಳು ನಿಗಧಿತ ಅರ್ಜಿ ನಮೂನೆಯನ್ನು ಗುಬ್ಬಿ ಪಟ್ಟಣದ ಡಾ: ಗುಬ್ಬಿ ವೀರಣ್ಣ ರಂಗಮಂದಿರದಿಂದ ಪಡೆದು, ಭರ್ತಿ ಮಾಡಿದ ಅರ್ಜಿಯನ್ನು ಏಪ್ರಿಲ್ 5ರೊಳಗೆ ಸಲ್ಲಿಸಬೇಕು. ಹೆಚ್ಚಿನ ಮಾಹಿತಿಗೆ ದೂ.ಸಂ: 08131–223336 / 0816–2275204, ಮೊ.ಸಂ.8546948858ನ್ನು ಸಂಪರ್ಕಿಸಬೇಕೆಂದು ಟ್ರಸ್ಟ್‌ನ ಸದಸ್ಯ ಕಾರ್ಯದರ್ಶಿ ತಿಳಿಸಿದ್ದಾರೆ.

# ರಾಷ್ಟ್ರ ಮಟ್ಟದ ಖೋ–ಖೋ ಪಂದ್ಯಾವಳಿಗೆ ಗಂಗಾಧರ್ ಆಯ್ಕೆ



ಶಿಡ್ಲಘಟ್ಟ: ಸರ್ಕಾರಿ ನೌಕರರ ರಾಷ್ಟ್ರ ಸಮಿತಿ, ಯುವ ಕ್ರೀಡಾ ಮತ್ತು ಸಬಲೀಕರಣ ಇಲಾಖೆಯಿಂದ ನಡೆಯುವ ಅಖಿಲ ಭಾರತ ನಾಗರೀಕ ಸೇವಾ ಖೋ–ಖೋ ರಾಷ್ಟ್ರ ಮಟ್ಟದ ಪಂದ್ಯಾವಳಿಯಲ್ಲಿ ತಾಲ್ಲೂಕಿನ ಎಸ್.ಗುಂಡ್ಲಹಳ್ಳಿಯ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯ ಶಿಕ್ಷಕ ಸಿ.ಕೆ.ಗಂಗಾಧರ್ ಆಯ್ಕೆಯಾಗಿದ್ದಾರೆ.

ನವದೆಹಲಿಯ ವಿನಯ್ ಮಾರ್ಗ್ನ ಸ್ಪೋಟ್ಸ್ ಕಾಂಪ್ಲೆಕ್ಸ್ ನಲ್ಲಿ ಮಾ–21 ರಿಂದ 24 ರವರೆಗೂ ನಾಲ್ಕು ದಿನಗಳ ಕಾಲ ನಡೆಯುವ ರಾಷ್ಟ್ರ ಮಟ್ಟದ ಖೋ–ಖೋ ಪಂದ್ಯಾವಳಿಯಲ್ಲಿ ರಾಜ್ಯದ ತಂಡವನ್ನು ಪ್ರತಿನಿಧಿಸಲಿದ್ದಾರೆ.

ರಾಷ್ಟ್ರ ಮಟ್ಟದ ಸರಕಾರಿ ನೌಕರರ ಖೋ,ಖೋ ಪಂದ್ಯಾವಳಿಗೆ ಆಯ್ಕೆಯಾಗಿರುವ ಇರಗಪ್ಪನಹಳ್ಳಿ ಕ್ಲಸ್ಟರ್ ವ್ಯಾಪ್ತಿಯ ಎಸ್.ಗುಂಡ್ಲಹಳ್ಳಿ ಶಾಲೆಯ ಶಿಕ್ಷಕ ಸಿ.ಕೆ.ಗಂಗಾಧರ್ ಅವರನ್ನು ಶಾಸಕರಾದ ಬಿ.ಎನ್.ರವಿಕುಮಾರ್, ತಹಸೀಲ್ದಾರ್ ಬಿ.ಎನ್.ಸ್ವಾಮಿ, ಸರ್ಕಾರಿ ನೌಕರರ ಸಂಘದ ರಾಜ್ಯ ಕಾರ್ಯದರ್ಶಿ ಕೆ.ಎನ್.ಸುಬ್ಬಾರೆಡ್ಡಿ, ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷೆ ಸರಸ್ವತಮ್ಮ, ಬಿಇಒ ನರೇಂದ್ರಕುಮಾರ್, ಮುಖ್ಯ ಶಿಕ್ಷಕ ರಾಘವೇಂದ್ರ, ಸಿಆರ್‌ಪಿ ಆನಂದ್ ಮತ್ತಿತರರು ಅಭಿನಂದಿಸಿ ರಾಷ್ಟ್ರ ಮಟ್ಟದಲ್ಲಿ ಗೆಲವು ಸಿಗಲೆಂದು ಶುಭ ಅವರಿಗೆ ಹಾರೈಸಿದ್ಧಾರೆ.

# ವಿವಿಧೆಡೆ ವಿದ್ಯುತ್ ವ್ಯತ್ಯಯ

**ಚಾಮರಾಜನಗರ:** ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮದಿಂದ ಚಾಮರಾಜನಗರ ಉಪವಿಭಾಗ ವ್ಯಾಪ್ತಿಯ ಪಣ್ಯದಹುಂಡಿ ಮಾರ್ಗದಲ್ಲಿ 4ನೇ ತ್ರೈಮಾಸಿಕ ನಿರ್ವಹಣೆ ಕಾಮಗಾರಿಯನ್ನು ಮಾರ್ಚ್ 23 ರಂದು ಹಮ್ಮಿಕೊಂಡಿರುವುದರಿಂದ ಅಂದು ಬೆಳಿಗ್ಗೆ 9 ರಿಂದ ಸಂಜೆ 6 ಗಂಟೆಯವರೆಗೆ ವಿವಿಧೆಡೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ. ಬದನಗುಪ್ಪೆ, ಪಣ್ಯದಹುಂಡಿ, ಬೆಂಡರವಾಡಿ, ಕೆಲ್ಲಂಬಳ್ಳಿ ಎನ್.ಜೆ.ವೈ. ಇಂಡಸ್ಟ್ರೀಯಲ್ ಏರಿಯಾ, ಕೆ.ಇ.ಡಿ.ಪಿ. 10 ಮತ್ತು 11, ಮುತ್ತಿಗೆ, ಹೆಗ್ಗೋಠಾರ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ. ಸಾರ್ವಜನಿಕರು ನಿಗಮದ ಜೊತೆ ಸಹಕರಿಸಬೇಕು. ವಿದ್ಯುತ್ ಸಂಬಂಧಿತ ದೂರು ಮತ್ತು ಸಹಾಯಕ್ಕಾಗಿ ಗ್ರಾಹಕರು ಉಚಿತ ದೂ.ಸಂ 1912 ಗೆ ಕರೆ ಮಾಡುವಂತೆ ನಿಗಮದ ಕಾರ್ಯನಿರ್ವಾಹಕ ಎಂಜಿನಿಯರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಸಂತೆ, ಬಸ್ಟಾಂಡ್ ಸುಂಕ ವಸೂಲಿ; ಹರಾಜು ಮೂಲಕ ಹಕ್ಕು ಪಡೆದ ಬಿಡ್‌ದಾರರು

**ಕೊರಟಗೆರೆ:** ಕೊರಟಗೆರೆ ಪಟ್ಟಣದಲ್ಲಿ ಪಟ್ಟಣ ಪಂಚಾಯಿತಿ ವ್ಯಾಪ್ತಿಯ ವಾರದಸಂತೆ ಸುಂಕ ವಸೂಲಿ, ಬಸ್ಟಾಂಡ್ ಫೀ ವಸೂಲಿ ಹಾಗೂ ದಿನವಹಿ ಸುಂಕ 2025-26ನೇ ಸಾಲಿನ ವಸೂಲಿಗೆ ಬಹಿರಂಗ ಹರಾಜು ಪ್ರಕ್ರಿಯೆ ನಡೆದು 13 ಲಕ್ಷ ರೂಗಳಿಗೆ ಬಹಿರಂಗ ಹರಾಜು ಕೂಗುವ ಮೂಲಕ ಬೀಡ್ ದಾರರು ಹಕ್ಕು ಪಡೆದರು.

ಕೊರಟಗೆರೆ ಪಟ್ಟಣ ಪಂಚಾಯಿತಿ ಅಧ್ಯಕ್ಷ ಅನಿತಾ, ಮುಖ್ಯಾಧಿಕಾರಿ ಉಮೇಶ್ ಹಾಗೂ ಸದಸ್ಯರು ಸೇರಿದಂತೆ ಸಾರ್ವಜನಿಕರ ಸಮಾಕ್ಷಮ ಪಟ್ಟಣ ಪಂಚಾಯಿತಿ ವ್ಯಾಪ್ತಿಯಲ್ಲಿ ಬರುವ ವಾರದಸಂತೆ ಸುಂಕ ವಸೂಲಿ, ಬಸ್ ಸ್ಟಾಂಡ್ ಫೀ ವಸೂಲಿ, ದಿನವಹಿ ಸುಂಕ ವಸೂಲಿ ಹಾಗೂ ಕಛೇರಿಯ ಹಳೆ ನ್ಯೂಸ್ ಪೇಪರ್, ಹಳೆ ಸಾಮಗ್ರಿಗಳ ವಸೂಲಾತಿಗೆ ಮಾ.21 ರಂದು ಪಟ್ಟಣ ಪಂಚಾಯಿತಿ ಮುಂಭಾಗ 2025-26 ನೇ ಸಾಲಿನಲ್ಲಿ ಒಂದು ವರ್ಷದ ಅವದಿಯ ವಸೂಲಿಗೆ ಬಹಿರಂಗ ಹರಾಜು ನಡೆದು ವಾರದಸಂತೆ ಸುಂಕ ವಸೂಲಿ 5 ಲಕ್ಷ ಒಂದುಸಾವಿರಕ್ಕೆ, ಬಸ್ ಸ್ಟಾಂಡ್ ಫೀ ವಸೂಲಿ 5 ಲಕ್ಷಕ್ಕೆ, ದಿನವಹಿ ಸುಂಕ ವಸೂಲಿ 3 ಲಕ್ಷ ಹಾಗೂ ಕಛೇರಿಯ ಹಳೆ ನ್ಯೂಸ್ ಪೇಪರ್ ಹಾಗೂ ಹಳೆಯ ಸಾಮಗ್ರಿಗಳಿಗೆ 5 ಸಾವಿರ ರೂಗಳೊಟ್ಟು 13 ಲಕ್ಷ 5 ಸಾವಿರ ರೂಗಳಿಗೆ ಸವಾಲ್ ಕೂಗುವ ಮೂಲಕ ಹರಾಜು



ಷರತ್ತುಗಳ ನಿಯಮ ದಂತೆ ಭಾಗವಹಿಸಿದ್ದ ಬಿಡ್‌ದಾರರು ಪಡೆದರು.

ಬಹಿರಂಗ ಹರಾಜಿನ ನಂತರ ಮಾತನಾಡಿದ ಪಟ್ಟಣ ಪಂಚಾಯಿತಿ ಮುಖ್ಯಾಧಿಕಾರಿ ಉಮೇಶ್ ಅಖೈರು ಬಿಡ್‌ದಾರರು ಹರಾಜು ಮೂಲಕ ಪಡೆದ ಬಾಬ್ತುಗಳನ್ನು ಬೇರೆಯವರಿಗೆ ಪರಭಾರೆ ಮಾಡುವುದು, ವರ್ಗಾಯಿಸುಯವುದು ನಿಷೇದಿಸಿರುತ್ತದೆ, ಸಂತೆ, ಬಸ್‌ಸ್ಟಾಂಡ್ ವಸೂಲಿಯನ್ನು ಪಟ್ಟಣ ಪಂಚಾಯಿತಿಯವರು ವಿಧಿಸಿರುವ ಷೆಡ್ಯೂಲ್ ದರದಂತೆ ವಸೂಲು ಮಾಡಬೇಕು ಹಾಗೂ ರಶೀದಿಗಳಿಗೆ ಪಟ್ಟಣ ಪಂಚಾಯಿತಿ ಮುದ್ರೆ ಹಾಕಿಸಿಕೊಳ್ಳವುದು ಖಡ್ಡಾಯವಾಗಿದೆ, ಹರಾಜಿನ ಬಗ್ಗೆ ಪಟ್ಟಣ ಪಂಚಾಯಿತಿ ಆಗಿಂದಾಗ್ಗೆ ವಿಧಿಸುವ ನಿಬಂಧನೆಗಳಿಗೆ ಒಳಪಟ್ಟಿರತ್ತಕ್ಕದ್ದು, ನಿಗದಿಪಡಿಸಿರುವ ಧರಕ್ಕಿಂತ ಹೆಚ್ಚಿಗೆ ವಸೂಲಿ ಮಾಡಕೂಡದು ಮತ್ತು ವಸೂಲಿ ಬಗ್ಗೆ ಕ್ರಮವಾಗಿ ರಸೀದಿ ಪುಸ್ತಕ ಆಖೈರು ಬಿಡ್‌ದಾರರೇ ಸ್ವಂತ ಖರ್ಚಿನಿಂದ ಮುದ್ರಿಸಿಕೊಳ್ಳತಕ್ಕದ್ದು. ಬಿಡ್ ದಾರರು ಪಟ್ಟಣ ಪಂಚಾಯಿತಿ ಹಾಗೂ ಸರ್ಕಾರದ ನಿಯಮಗಳಿಗೆ ಒಳಪಟ್ಟಿರಬೇಕು ಎಲ್ಲಾ ಅಧಿಕಾರ ಪಟ್ಟಣ ಪಂಚಾಯಿತಿಗೆ ಸೇರಿರುತ್ತದೆ ಎಂದು ತಿಳಿಸಿದ ಅವರು ಹರಾಜಿನಲ್ಲಿ ಭಾಗವಹಿಸಿದ್ದ ಸಾರ್ವಜನಿಕರನ್ನು ಹಾಗೂ ಬಿಡ್ ದಾರರನ್ನು ಅಬಿನಂದಿಸಿದರು.

ಹರಾಜು ಪ್ರಕ್ರಿಯೆಯಲ್ಲಿ ಪಟ್ಟಣ ಪಂಚಾಯಿತಿ ಅಧ್ಯಕ್ಷೆ ಅನಿತಾ, ಸದಸ್ಯರುಗಳಾದ ಎ.ಡಿ.ಬಲರಾಮಯ್ಯ, ಕೆ.ಎನ್.ಲಕ್ಷ್ಮಿನಾರಾಯಣ್, ಪುಟ್ಟನರಸಪ್ಪ, ಕೆ.ಆರ್.ಓಬಳರಾಜು, ಮುಖಂಡರುಗಳಾದ ರಮೇಶ್, ಖಲೀಂಉಲ್ಲಾ, ಗಣೇಶ್, ಪ.ಪಂ. ಆರೋಗ್ಯ ನಿರೀಕ್ಷಕ ಮಹಮದ್ದ ಹುಸೇನ್, ವೇಣುಗೋಪಾಲ್ ಸೇರಿದಂತೆ ಪ.ಪಂ. ಎಲ್ಲಾ ನೌಕರರು ಭಾಗವಹಿಸಿದ್ದರು.

# ಬೆಟ್ಟಕೋಟೆ: 2024-25ನೇ ಸಾಲಿನ ಗ್ರಾಮ ಸಭೆ

**ದೇವನಹಳ್ಳಿ:** ಪ್ರತಿಯೊಂದು ಹಳ್ಳಿ ಮತ್ತು ಗ್ರಾಮಗಳು ಅಭಿವೃದ್ಧಿಯನ್ನು ಕಾಣಬೇಕು ಎಂಬ ಇಚ್ಛಾಶಕ್ತಿಯಿಂದ ಇಂತಹ ಗ್ರಾಮ ಸಭೆಗಳನ್ನ ಸದುಪಯೋಗಪಡಿಸಿಕೊಂಡು ಪ್ರತಿಯೊಬ್ಬರು ಜಾಗೃತರಾಗಿ ಅಧಿಕಾರಿಗಳನ್ನು ಪ್ರಶ್ನಿಸಬೇಕು ಆಗ ಮಾತ್ರ ಮೂಲಭೂತ ಸೌಕರ್ಯಗಳನ್ನು ಪಡೆದು ಯಾವುದೇ ಸಮಸ್ಯೆ ಇಲ್ಲದೆ ಅಭಿವೃದ್ಧಿ ಕಾಣಲು ಸಾಧ್ಯ ಎಂದು ಮಾಜಿ ಜಿಲ್ಲಾ ಪಂಚಾಯಿತಿ ಸದಸ್ಯ ಜಿ .ಲಕ್ಷ್ಮೀ ನಾರಾಯಣಪ್ಪ ಹೇಳಿದರು.

ತಾಲೂಕಿನ ಚನ್ನರಾಯಪಟ್ಟಣ ಹೋಬಳಿಯ ಬೆಟ್ಟ ಕೋಟೆ ಗ್ರಾಮ ಪಂಚಾಯಿತಿಯ ಮುಂಭಾಗದಲ್ಲಿ ನಡೆದ 2024 -25 ನೇ ಸಾಲಿನ ಗ್ರಾಮ ಸಭೆಯಲ್ಲಿ ಮಾತನಾಡಿದರು.

ಇತ್ತೀಚೆಗೆ ವ್ಯವಸಾಯ, ಹೈನುಗಾರಿಕೆ ಮತ್ತು ಪಶು ಸಂಗೋಪನೆಗಳು ಕಡಿಮೆ ಯಾಗುತ್ತಿದ್ದು, ಯಾವುದೇ ಇಲಾಖೆಗಳಲ್ಲಿ ಮಾಹಿತಿಯನ್ನು ಪಡೆಯಲು ಉತ್ಸುಕತೆಯನ್ನು ತೋರುತ್ತಿಲ್ಲ ಹಾಗೂ ಇಂತಹ ಗ್ರಾಮ ಸಭೆಗಳಲ್ಲಿ ಗ್ರಾಮ




ಪಂಚಾಯಿತಿ ವ್ಯಾಪ್ತಿಗೆ ಒಳಪಡುವ ಎಲ್ಲಾ ಹಳ್ಳಿಯ ಗ್ರಾಮಸ್ಥರು ಕಡ್ಡಾಯವಾಗಿ ಭಾಗವಹಿಸಿ ತಮ್ಮ ಕುಂದು ಕೊರತೆಗಳನ್ನು ತಿಳಿಸಿ ಪರಿಹಾರವನ್ನು ಕಂಡುಕೊಳ್ಳಬೇಕು ಎಂದರು.

ಬೆಟ್ಟಕೋಟೆ ಗ್ರಾಮ ಪಂಚಾಯಿತಿ ಅಧ್ಯಕ್ಷ ಡಿವಿಭೀಮೇಶ್ ಮಾತನಾಡಿ ಗ್ರಾಮ ಸಭೆಗಳಲ್ಲಿ ಪ್ರತಿಯೊಂದು ಇಲಾಖೆಯ ಅಧಿಕಾರಿಗಳು ಮತ್ತು ಜನಪ್ರತಿನಿಧಿಗಳು ಭಾಗವಹಿಸಿರುತ್ತಾರೆ ,ಗ್ರಾಮಸ್ಥರಿಗೆ ಅವಶ್ಯಕವಾದ ಇಲಾಖೆಯ ಸೌಲಭ್ಯಗಳು ಮತ್ತು ಸೌಲಭ್ಯ ಪಡೆಯಲು ಇರುವಂತಹ ಅಡೆತಡೆಗಳನ್ನು ಪ್ರಶ್ನಿಸಿ ಬಗೆಹರಿಸಿಕೊಳ್ಳಲು ಇದು ಒಂದು ಒಳ್ಳೆಯ ಅವಕಾಶ ಒಂದೇ ಸೂರಿನಡಿ ಎಲ್ಲವೂ ಲಭ್ಯ ಎಂಬುವಂತೆ ಗ್ರಾಮ ಸಭೆಯನ್ನು ಸದುಪಯೋಗ ಪಡಿಸಿಕೊಳ್ಳಬೇಕು ಎಂದು ತಿಳಿಸಿದರು.

ಗ್ರಾಮ ಸಭೆಯಲ್ಲಿ ನಿವೇಶನರಹಿತ ಯೋಜನೆಯಡಿ ನಿವೇಶನ ಪಡೆದ ಪಲಾನುಭವಿಗಳಿಗೆ ಹಕ್ಕುಪತ್ರ, ಅಂತರಾಷ್ಟ್ರೀಯ ಮಹಿಳಾ ದಿನಾಚರಣೆ ಪ್ರಯುಕ್ತ ಆಯೋಜಿಸಲಾಗಿದ್ದ ಕ್ರೀಡೆಯಲ್ಲಿ ವಿಜೇತರಿಗೆ ಬಹುಮಾನ ಹಾಗೂ ವಿಶೇಷ ಚೇತನರಿಗೆ ಪ್ಯಾನ್ ವಿತರಿಸಲಾಯಿತು.

ಇದೇ ಸಂದರ್ಭದಲ್ಲಿ ತಾಲೂಕು ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಸಿ .ಜಗನ್ನಾಥ್, ಗ್ರಾಪಂ ಉಪಾಧ್ಯಕ್ಷ ಅನಿತಾ, ಸದಸ್ಯರಾದ ಆರ್. ಲೋಕೇಶ್ ಗಾಂಧಿ, ವಿದ್ಯಾರಾಣಿ, ರಾಯಸಂದ್ರ ಮಂಜುನಾಥ್, ವಿಶಾಲಾಕ್ಷಿ, ಸಿ. ನಾರಾಯಣಸ್ವಾಮಿ, ಕೆಬಿ.ಭಾಗ್ಯಲಕ್ಷ್ಮಿ, ಅರ್ಚನಾ, ಪಿಡಿಒ ಕೆಂಪರಾಜಯ್ಯ, ಕಾರ್ಯದರ್ಶಿ ಪುಷ್ಪಾವತಿ ಸೇರಿದಂತೆ ಗ್ರಾಮ ಪಂಚಾಯಿತಿ ಸಿಬ್ಬಂದಿ ವರ್ಗ ಮತ್ತು ಗ್ರಾಮಸ್ಥರು ಭಾಗಿಯಾಗಿದ್ದರು.

# ವಿದ್ಯಾರ್ಥಿಗಳಿಗೆ ಆತ್ಮಸ್ಥೈರ್ಯತುಂಬಿದ ತೇಜಸ್



ದೇವನಹಳ್ಳಿ: ಮಾರ್ಚ್ 21ರಿಂದ ಎಸ್.ಎಸ್.ಎಲ್.ಸಿ.ಪರೀಕ್ಷೆ ಆರಂಭವಾಗಿದ್ದು, ಪ್ರಥಮ ಭಾಷೆಕನ್ನಡ ಪರೀಕ್ಷೆ ಬರೆಯಲು ನೂರಾರು ಮಂದಿ ವಿದ್ಯಾರ್ಥಿಗಳು ಪರೀಕ್ಷಾ ಕೇಂದ್ರಗಳತ್ತ ಬಂದರು.

ಪರೀಕ್ಷೆ ಬರೆಯಲು ಬಂದಿದ್ದ ವಿದ್ಯಾರ್ಥಿಗಳಿಗೆ ಎವಿವಿ ಟ್ರಸ್ಟ್‌ನ ಕಾರ್ಯದರ್ಶಿ ತೇಜಸ್ ಮಂಜುನಾಥ್ ಮತ್ತಿತರರು ಶುಭಕೋರಿದರು.ಪ್ರತಿ ವರ್ಷದಂತೆ ಈ ವರ್ಷವೂ ಸಹಾ ಎಸ್.ಎಸ್.ಎಲ್.ಸಿ. ಪರೀಕ್ಷೆಬರೆಯುವ ವಿದ್ಯಾರ್ಥಿಗಳಿಗೆ ಪಟ್ಟಣದ ಎವಿವಿ ಟ್ರಸ್ಟ್ ವತಿಯಿಂದ ಬಿಸ್ಕೆಟ್ ಹಾಗೂ ತಂಪುಪಾನೀಯಗಳನ್ನು ವಿತರಣೆ ಮಾಡಿ, ವಿದ್ಯಾರ್ಥಿಗಳಿಗೆ ಶುಭಕೋರಿದರು.ಎವಿವಿ ಟ್ರಸ್ಟ್ ನ ಕಾರ್ಯದರ್ಶಿ ತೇಜಸ್ ಮಂಜುನಾಥ್ ಮಾತನಾಡಿ, ಬಿಸಿಲಿನ ತಾಪಮಾನ ಹೆಚ್ಚಿರುವ ಸಮಯದಲ್ಲಿ ಮಕ್ಕಳು ಪರೀಕ್ಷೆ ಬರೆಯುವುದಕ್ಕೆ ಬಂದಿರುತ್ತಾರೆ.ಅವರಿಗೆ ಪ್ರತಿ ವರ್ಷ ನಮ್ಮ ಟ್ರಸ್ಟಿನ ವತಿಯಿಂದತಂಪು ಪಾನೀಯ ನೀಡುತ್ತೇವೆ. ಈ ವರ್ಷವೂ ನೀಡಿದ್ದೇವೆ. ವಿದ್ಯಾರ್ಥಿಗಳು ನಿರ್ಭೀತಿಯಿಂದ ಪರೀಕ್ಷೆಎದುರಿಸಬೇಕುಎಂದರು. ಪರೀಕ್ಷೆಗಾಗಿ ಸಿದ್ಧತೆ ನಡೆಸಿಕೊಂಡು ಬಂದಿದ್ದ ವಿದ್ಯಾರ್ಥಿಗಳಿಗೆ ತಮ್ಮ ಪೋಷಕರು ಹಾಗೂ ಶಿಕ್ಷಕರು ಧೈರ್ಯತುಂಬಿಸುವ ಮೂಲಕ ಅವರಿಗೆಆತ್ಮಸ್ಥೈರ್ಯವನ್ನು ತುಂಬಿಸಿದರು. ಶಿಕ್ಷಕರು ತಮ್ಮ ವಿದ್ಯಾರ್ಥಿಗಳನ್ನು ಅಂತಿಮವಾಗಿ ಪರೀಕ್ಷೆಗೆ ಅಣಿಗೊಳಿಸಿದರು.

ಈ ಬಾರಿಕರ್ನಾಟಕ ಪ್ರೌಢಶಿಕ್ಷಣ ಪರೀಕ್ಷಾ ಮಂಡಳಿಯು ವೆಬ್ ಕಾಸ್ಟಿಂಗ್ ಮೂಲಕ ಪರೀಕ್ಷೆ ನಡೆಸಿದ್ದು.ಸಿಸಿ ಟಿವಿ ಕ್ಯಾಮಾರಗಳ ಕಣ್ಗಾವಲಿನಲ್ಲಿ ವಿದ್ಯಾರ್ಥಿಗಳು ಪರೀಕ್ಷೆ ಎದುರಿಸಿದರು.

ಪರೀಕ್ಷಾಕೇಂದ್ರದಲ್ಲಿಆರೋಗ್ಯಇಲಾಖೆಯ ಸಿಬ್ಬಂದಿ, ಪೊಲೀಸ್ ಸಿಬ್ಬಂದಿಯನ್ನು ನೇಮಕ ಮಾಡಲಾಗಿತ್ತು.ಪರೀಕ್ಷಾಕೇಂದ್ರದಎಲ್ಲಾ ಕೊಠಡಿಗಳಲ್ಲೂ ಕುಡಿಯುವ ನೀರಿನ ವ್ಯವಸ್ಥೆಯನ್ನು ಮಾಡಲಾಗಿತ್ತು. ಟೌನ್‌ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಎಸ್.ಮಂಜುನಾಥ್, ಪುರಸಭೆ ಸದಸ್ಯಎಂ.ರಾಜಣ್ಣ, ಅಪ್ಜಲ್, ಮುಂತಾದವರು ಹಾಜರಿದ್ದರು.

# ಬಂದ್‌ಗೆ ನೈತಿಕ ಬೆಂಬಲ

**ಶಿಡ್ಲಘಟ್ಟ:** ರಾಜ್ಯದ ಗಡಿಭಾಗದಲ್ಲಿ ಬೆಳಗಾವಿಯ ಎಂಇಎಸ್‌ನ ಪುಂಡಾಟಿಕೆ ಖಂಡಿಸಿ ಶನಿವಾರ ನಡೆಯುವ ಕರ್ನಾಟಕ ಬಂದ್‌ಗೆ ಶಿಡ್ಲಘಟ್ಟ ತಾಲೂಕಿನ ಕನ್ನಡಪರ ಹಲವು ಸಂಘಟನೆಗಳ ಒಕ್ಕೂಟವು ನೈತಿಕ ಬೆಂಬಲ ವ್ಯಕ್ತಪಡಿಸಿವೆ.

ಇಲ್ಲಿನ ಶ್ರೀವೇಣುಗೋಪಾಲಸ್ವಾಮಿ ದೇವಾಲಯದ ಆವರಣದಲ್ಲಿ ಸಭೆ ಸೇರಿದ್ದ ನಾನಾ ಕನ್ನಡ ಪರ ಸಂಘಟನೆಗಳ ಮುಖಂಡರು, ಶನಿವಾರದ ಬಂದ್‌ಗೆ ನೈತಿಕ ಬೆಂಬಲ ವ್ಯಕ್ತಪಡಿಸಿ ತೀರ್ಮಾನ ಕೈಗೊಂಡಿದ್ದಾರೆ.

ಶಿಡ್ಲಘಟ್ಟದಲ್ಲಿ ಬಂದ್ ಇರುವುದಿಲ್ಲ ಆದರೆ ಕನ್ನಡ ಪರ ಸಂಘಟನೆಗಳ ಒಕ್ಕೂಟ ಹಾಗೂ ಬಂದ್‌ಗೆ ಬೆಂಬಲಿಸುವ ಎಲ್ಲ ಸಂಘಟನೆಗಳ ಮುಖಂಡರು ಶನಿವಾರ ಬೆಳಗ್ಗೆ ನಗರದಲ್ಲಿ ಮೆರವಣಿಗೆ ನಡೆಸಿ ತಹಸೀಲ್ದಾರ್ ಅವರಿಗೆ ಮನವಿ ಸಲ್ಲಿಸಲು ತೀರ್ಮಾನಿಸಲಾಯಿತು.

ಎಸ್ಸೆಸ್ಸೆಲ್ಸಿ ವಿದ್ಯಾರ್ಥಿಗಳಿಗೆ ಪರೀಕ್ಷೆ ನಡೆಯುತ್ತಿರುವ ಕಾರಣ ಮತ್ತು ಪದೇ ಪದೇ ಬಂದ್‌ನಿಂದ ಆಗುವ ಒಳ್ಳೆಯದಕ್ಕಿಂತಲೂ ಜನ ಸಾಮಾನ್ಯರು, ಕೂಲಿ ಕಾರ್ಮಿಕರು, ವಿದ್ಯಾರ್ಥಿಗಳಿಗೆ ಆಗುವ ತೊಂದರೆಯನ್ನು ದೃಷ್ಟಿಯಲ್ಲಿಟ್ಟುಕೊಂಡು ಬಂದ್ ನಡೆಸದೆ ಕೇವಲ ನೈತಿಕ ಬೆಂಬಲ ನೀಡಲು ನಿರ್ಧರಿಸಲಾಯಿತು.

ಈ ಸಂದರ್ಭದಲ್ಲಿ ಕಸ್ತೂರಿ ಕರ್ನಾಟಕ ಜನಪರ ವೇದಿಕೆಯ ಜಿಲ್ಲಾಧ್ಯಕ್ಷ ರಾಮಾಂಜನೇಯ, ತಾಲೂಕು ಅಧ್ಯಕ್ಷ ಬೂದಾಳ ವರದರಾಜು, ಕರವೇ ಅಧ್ಯಕ್ಷ ಯುವರತ್ನ ಸುನಿಲ್, ಸ್ನೇಹ ಯುವಕರ ಬಳಗದ ಗ್ಯಾಸ್ ಭರತ್, ಕದಂಬ ಸೈನ್ಯದ ಮುನಿರಾಜು,ಆಟೋ ಸೋಮು, ಅಂಬಾರಿ ಮಂಜುನಾಥ್, ಭಗತ್ ಸುರೇಶ್ ಮತ್ತಿತರರು ಸಭೆಯಲ್ಲಿ ಭಾಗವಹಿಸಿದ್ದರು.



# ಮಹಿಳೆಯರು ಆರ್ಥಿಕವಾಗಿ ಸಬಲರಾದರೆ ಮಾತ್ರ ಸಾಧನೆ ಮಾಡಲು ಸಾಧ್ಯ



**ದೇವನಹಳ್ಳಿ:** ವಿಜಯಪುರ ಪಟ್ಟಣದ ಜೇಸಿಸ್ ಶಾಲೆಯ ಆವರಣದಲ್ಲಿ ಬಿಜೆಪಿ ಮಹಿಳಾ ಮೋರ್ಚಾದ ವತಿಯಿಂದ ಮಹಿಳೆಯರ ಆರ್ಥಿಕ ಸಬಲೀಕರಣ ಹಾಗೂ ರಂಗೋಲಿ ಸ್ಪರ್ಧೆ ಕಾರ್ಯಕ್ರಮ ಆಯೋಜನೆ ಮಾಡಲಾಗಿತ್ತು. ಪಟ್ಟಣದ 30ಕ್ಕೂ ಹೆಚ್ಚು ಮಹಿಳೆಯರು ರಂಗೋಲಿ ಬಿಡಿಸುವ ಮೂಲಕ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

ಬಿಜೆಪಿ ತಾಲ್ಲೂಕು ಮಂಡಲ ಅಧ್ಯಕ್ಷ ಅಂಬರೀಶ್‌ಗೌಡ ಮಾತನಾಡಿ, ಸಮಾಜದಎಲ್ಲಾ ಕ್ಷೇತ್ರಗಳಲ್ಲೂ ಮಹಿಳೆಯರು ತಮ್ಮ ಕೌಶಲ್ಯಗಳನ್ನು ತೋರಿಸಿದ್ದಾರೆ.ಅವರು ಕೇವಲ ನಾಲ್ಕು ಗೋಡೆಗಳ ನಡುವೆ ಸೀಮಿತವಾದವರಲ್ಲ. ಸಮಾಜದಲ್ಲಿನ ಎಲ್ಲಾ ರಂಗಗಳನ್ನು ಪ್ರವೇಶಿಸಬೇಕು.ಇತ್ತಿಚೆಗೆ ಗಗನಯಾತ್ರಿಯಾಗಿ 9 ತಿಂಗಳ ಕಾಲ ಅಂತರಿಕ್ಷ ನಿಲ್ದಾಣದಲ್ಲಿಇದ್ದು, ವಿಜ್ಞಾನ ಲೋಕಕ್ಕೂ ಸವಾಲಾಗಿದ್ದ ಸಮಯದಲ್ಲೂಆತ್ಮಸ್ಥೈರ್ಯ ಕಳೆದುಕೊಳ್ಳದೆ, ಪುನಃ ಸುರಕ್ಷಿತವಾಗಿ ಭೂಮಿಗೆ ವಾಪಸ್ಸು ಬಂದು ಸುನಿತಾ ವಿಲಿಯಮ್ಸ್‌ಅವರಂತಹ ದಿಟ್ಟ ಮಹಿಳೆಯರು, ನಿಮಗೆ ಆದರ್ಶವಾಗಿದ್ದಾರೆ ಎಂದರು.

ಜಿಲ್ಲಾ ಮಹಿಳಾ ಪ್ರಧಾನ ಕಾರ್ಯದರ್ಶಿ ಬೂದಿಗೆರೆ ನಾಗವೇಣಿಶ್ರೀನಿವಾಸ್ ಮಾತನಾಡಿ, ಸಮಾಜದಲ್ಲಿ ಎಲ್ಲಾ ಕಡೆಗಳಲ್ಲಿ ಮಹಿಳೆಯರು ತಮ್ಮಲ್ಲಿನ ಸಾಮರ್ಥ್ಯವನ್ನು ಸಾಬೀತು ಪಡಿಸಬೇಕಾದರೆ, ಮೊದಲುಆರ್ಥಿಕವಾಗಿ ಸಬಲರಾಗಬೇಕು, ಕುಟುಂಬ ನಿರ್ವಹಣೆಯಿಂದ ಹಿಡಿದು ಸಮಾಜದಲ್ಲಿನಎಲ್ಲಾ ಸವಾಲುಗಳನ್ನು ಸಮರ್ಥವಾಗಿಎದುರಿಸಲು ಮುಖ್ಯ ವಾಹಿನಿಗೆ ಬರಬೇಕು. ಶೈಕ್ಷಣಿಕವಾಗಿ, ಸಾಮಾಜಿಕವಾಗಿ, ರಾಜಕೀಯವಾದ ಶಕ್ತಿಯು ಪಡೆದುಕೊಳ್ಳಬೇಕು.ಸ್ವಯಂಉದ್ಯೋಗವನ್ನು ಮಾಡುವತ್ತಗಮನಹರಿಸಬೇಕು.ಉತ್ತಮ ಕೌಶಲ್ಯಗಳನ್ನು ಬೆಳೆಸಿಕೊಳ್ಳಬೇಕು ಎಂದರು.

ರಂಗೋಲಿ ಸ್ಪರ್ಧೆಯಲ್ಲಿ ಭಾಗವಹಿಸಿದ್ದ ಮಹಿಳೆಯ ರಿಗೆ ಬಹುಮಾನಗಳು ವಿತರಣೆ ಮಾಡಿದರು. ಸಮಾಜದಲ್ಲಿಉತ್ತಮ ಸಾಧನೆ ಮಾಡಿರುವ ಮಹಿಳೆಯರನ್ನು ಗೌರವಿಸಿ ಸನ್ಮಾನಿಸಿದರು.

ಬಿಜೆಪಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಹೆಚ್.ಎಂ.ರವಿ ಕುಮಾರ್, ತಾಲ್ಲೂಕುಉಪಾಧ್ಯಕ್ಷೆ ಪುನೀತಾ, ತಾಲ್ಲೂಕು ಮಹಿಳಾ ಮೋರ್ಚಾಅಧ್ಯಕ್ಷೆ ವಿಜಯಾರಾಘವೇಂದ್ರ, ಪ್ರಧಾನ ಕಾರ್ಯದರ್ಶಿ ವೀಣಾಶ್ರೀನಿವಾಸ್, ಟೌನ್ ಅಧ್ಯಕ್ಷ ಆರ್.ಸಿ.ಮಂಜುನಾಥ್, ಪ್ರಧಾನ ಕಾರ್ಯದರ್ಶಿ ಡಿ.ಎಂ.ಮುನೀಂದ್ರ, ನಂಜೇಗೌಡ, ಸುಭ್ರಮಣಿ, ಶಾಮಣ್ಣ, ಭಾರತಿಪ್ರಭುದೇವ್,ಮುಂತಾದವರು ಹಾಜರಿದ್ದರು.

# ಕರ್ನಾಟಕ ಬಂದ್‌ಗೆ ನಮ್ಮ ಬೆಂಬಲ ಇಲ್ಲ

**ಶಿಡ್ಲಘಟ್ಟ:** ಮಹಾರಾಷ್ಟ್ರದ ಎಂಇಎಸ್‌ನ ಪುಂಡಾಟಿಕೆ ಖಂಡಿಸಿ ಮಾ-22ರ ಶನಿವಾರ ನಡೆಯುವ ಕರ್ನಾಟಕ ಬಂದ್‌ಗೆ ಕನ್ನಡ ರಕ್ಷಣಾ ವೇದಿಕೆ(ಕರವೇ) ನಾರಾಯಣಗೌಡರ ಬಣದಿಂದ ಬೆಂಬಲ ಇಲ್ಲ ಎಂದು ಅವು ಘೋಷಿಸಿದ್ದಾರೆ.



ಪತ್ರಿಕಾ ಹೇಳಿಕೆ ನೀಡಿರುವ ಕರವೇ ತಾಲ್ಲೂಕು ಅಧ್ಯಕ್ಷ ಮುನಿರಾಜು(ಕುಟ್ಟಿ), ಎಸ್ಸೆಸ್ಸೆಲ್ಸಿ ವಿದ್ಯಾರ್ಥಿಗಳಿಗೆ ವಾರ್ಷಿಕ ಮುಖ್ಯ ಪರೀಕ್ಷೆ ನಡೆಯುತ್ತಿದ್ದು ಅವರ ಶೈಕ್ಷಣಿಕ ಭವಿಷ್ಯದ ಹಿತದೃಷ್ಟಿ ಹಾಗೂ ಬಂದ್‌ನಿಂದ ಜನ ಸಾಮಾನ್ಯರು, ದಿನಗೂಲಿ, ಕಾರ್ಮಿಕರಿಗೆ ಆಗುವ ತೊಂದರೆಯನ್ನು ಪರಿಗಣಿಸಿ ಬಂದ್‌ಗೆ ಬೆಂಬಲ ನೀಡುತ್ತಿಲ್ಲ ಎಂದು ತಿಳಿಸಿದ್ದಾರೆ.

ರಾಜ್ಯ ಮಟ್ಟದಲ್ಲಿ ನಮ್ಮ ಸಂಘಟನೆಯ ರಾಜ್ಯಾಧ್ಯಕ್ಷ ಟಿ.ಎ.ನಾರಾಯಣಗೌಡರು ತೀರ್ಮಾನಿಸಿದ್ದು ಅದರಂತೆ ಶಿಡ್ಲಘಟ್ಟದಲ್ಲಿ ಬಂದ್‌ಗೆ ನಮ್ಮ ಸಂಘಟನೆಯಿಂದ ಯಾವುದೇ ರೀತಿಯ ಬೆಂಬಲ ಇರುವುದಿಲ್ಲ ಮತ್ತು ನಮ್ಮ ಸಂಘಟನೆಯ ಯಾವುದೆ ಕಾರ್ಯಕರ್ತರು ಭಾಗವಹಿಸುವುದಿಲ್ಲ ಎಂದಿದ್ದಾರೆ.

ಜನ ಸಾಮಾನ್ಯರು, ಕೂಲಿ ಕಾರ್ಮಿಕರು, ವಿದ್ಯಾರ್ಥಿಗಳಿಗೆ ತೊಂದರೆಯಾಗುವಂತ ಬಂದ್ ಬಿಟ್ಟು ಬೇರೆ ಮಾರ್ಗದ ಮೂಲಕ ಎಂಇಎಸ್ ಪುಂಢರನ್ನು ಮಟ್ಟ ಹಾಕುವ ಕೆಲಸ ಆಗಲಿದೆ. ನೂರೆಂಟು ದಾರಿಗಳಿವೆ. ಹಾಗಾಗಿ ಬಂದ್‌ಗೆ ಯಾವುದೆ ರೀತಿಯಲ್ಲಿ ಬೆಂಬಲ ಇರುವುದಿಲ್ಲ ಎಂದು ಸ್ಪಷ್ಟಪಡಿಸಿದ್ದಾರೆ.

# ಫಾಲ್ಗುಣ ಮಾಸ ಸಂಗೀತೋತ್ಸವ

**ಬೆಂಗಳೂರು:** ಸಮನ್ವಯ ಕಲಾ ಕೇಂದ್ರದ 'ಕರ್ನಾಟಕ ಕಲಾಶ್ರೀ 'ಸಂಗೀತ ವಿದ್ವಾನ್ ಶ್ರೀ ತಿರುಮಲೆ ಶ್ರೀನಿವಾಸ್ (ಭಾಮಿ) ಹಾಗೂ ಶ್ರೀ ಲಾಲ್ ದಾಸ್ ಭಕ್ತ ಆಂಜನೇಯ ಸ್ವಾಮಿ ಭಜನಾ ಮಂಡಳಿಯ ಮುಖ್ಯಸ್ಥರಾದ ಮೃದಂಗ ವಿದ್ವಾನ್ ಶ್ರೀ ಶ್ರೀನಿವಾಸ್





ಅನಂತರಾಮಯ್ಯ ಇವರುಗಳ ನೇತೃತ್ವದಲ್ಲಿ ಮಾರ್ಚ್ 23, ಭಾನುವಾರ ಬೆಳಗ್ಗೆ 9 ರಿಂದ ಸಂಜೆ 5ರ ವರೆಗೆ ಬಳೇಪೇಟೆಯಲ್ಲಿರುವ ಪುರಾತನವಾದ ಶ್ರೀ ಲಾಲ್ ದಾಸ್ ವೆಂಕಟರಮಣಸ್ವಾಮಿ ಸನ್ನಿಧಿಯಲ್ಲಿ ಗಾಯನ ಕಲಾವಿದರಿಗೆ ಪಕ್ಕವಾದ್ಯ ದೊಂದಿಗೆ ಸಂಗೀತ ಸೇವೆ ಯನ್ನು ಸಲ್ಲಿಸುವ ಅವಕಾಶ ವನ್ನು ಕಲ್ಪಿಸಿದ್ದಾರೆ. ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ : ಮೊಬೈಲ್ : 9844027006 / 9945437653

# ಅಪಘಾತದಲ್ಲಿ ಮರಣ ಹೊಂದಿದ ವಾರಸುದಾರರು ಗಾಯಗೊಂಡವರಿಗೆ ಪರಿಹಾರ ಸೌಲಭ್ಯ

**ಚಾಮರಾಜನಗರ:** ಹಿಟ್ ಮತ್ತು ರನ್ ಅಪಘಾತದಲ್ಲಿ ಮರಣ ಹೊಂದಿದ ವಾರಸುದಾರರು ಮತ್ತು ಗಾಯಗೊಂಡವರು ಪರಿಹಾರ ಮೊತ್ತವನ್ನು ಪಡೆಯಲು ಸಂಬಂಧಪಟ್ಟ ಪೊಲೀಸ್ ಠಾಣೆಯಲ್ಲಿ ಅರ್ಜಿ ಸಲ್ಲಿಸುವಂತೆ ಜಿಲ್ಲಾಧಿಕಾರಿ ಶಿಲ್ಪಾ ನಾಗ್ ಅವರು ತಿಳಿಸಿದ್ದಾರೆ.

ಮೋಟಾರು ವಾಹನ ಕಾಯ್ದೆ 1988 ರಡಿ ಸೆಕ್ಷನ್ 161 ರಲ್ಲಿ ಕಾಂಪನ್‌ಷೇಶನ್ ಟು ವಿಕ್ಟಿಮ್ಸ್ ಆಫ್ ಹಿಟ್ ಅಂಡ್ ರನ್ ಮೋಟಾರ್ ಆಕ್ಸಿಡೆಂಟ್ ಸ್ಕೀಮ್-2022ರ ಸೊಲಾಷಿಯಂ ಯೋಜನೆಯ 1989ಅನ್ನು ಮರುಪರಿಶೀಲಿಸಿ 2022ರ ಏಪ್ರೀಲ್ 1 ರಿಂದ ಜಾರಿಗೆ ಬರುವಂತೆ ಸದರಿ ಯೋಜನೆಯನ್ನು ವರ್ಧಿಸಲು ಹಾಗೂ ರಸ್ತೆ ಅವಘಾತಗಳ ಹಿಟ್ ಮತ್ತು ರನ್ ಪ್ರಕರಣಗಳಲ್ಲಿ ಗಾಯಗೊಂಡವರಿಗೆ ಐವತ್ತು ಸಾವಿರ ರೂಗಳನ್ನು ಮತ್ತು ಮೃತಪಟ್ಟ ಅವಲಂಬಿತ ಕುಟುಂಬದ ಸದಸ್ಯರಿಗೆ ಎರಡು ಲಕ್ಷ ರೂಗಳ ಪರಿಹಾರ ಮೊತ್ತವನ್ನು ಈ ಯೋಜನೆಯಡಿಯಲ್ಲಿ ಪಡೆದುಕೊಳ್ಳಬಹುದು.

ಸಾರ್ವಜನಿಕರು ಪರಿಹಾರದ ಅನುಕೂಲವನ್ನು ಪಡೆದುಕೊಳ್ಳಲು ಸಮಿತಿಯನ್ನು ರಚಿಸಲಾಗಿರುತ್ತದೆ. ಅದರಂತೆ ಕ್ಲೈಮ್ಸ್ ಸೆಟ್ಟಲ್‌ಮೆಂಟ್ ಕಮಿಷನರ್ ಆಗಿ ಜಿಲ್ಲಾಧಿಕಾರಿಗಳು ಅಧ್ಯಕ್ಷರಾಗಿದ್ದು, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳು/ಪೊಲೀಸ್‌ಉಪಾಧೀಕ್ಷಕರು, ಕ್ಲೈಮ್ಸ್ ಸೆಟ್ಟಲ್‌ಮೆಂಟ್ ಎನ್‌ಕ್ವೈರಿ ಆಫೀಸರ್ ಆಗಿ ಉಪವಿಭಾಗಾಧಿಕಾರಿಗಳು, ಜಿಲ್ಲಾ ಶಸ್ತ್ರ ಚಿಕಿತ್ಸಕರು ಹಾಗೂ ಅಧೀಕ್ಷಕರು, ಪ್ರಾದೇಶಿಕ ಸಾರಿಗೆ ಅಧಿಕಾರಿಗಳು, ರಸ್ತೆ ಸುರಕ್ಷತೆಯ ಕ್ಷೇತ್ರದಲ್ಲಿ ಕಾರ್ಯನಿರ್ವಹಿಸುತ್ತಿರುವ ಸ್ವಯಂ ಸೇವಾ ಸಂಸ್ಥೆಯ ಸದಸ್ಯರಾದ ನಗರದ ರೋಟರಿ ಸಿಲ್ಕ್, ಸಿಟಿಯ ಮಾಜಿ ಅಧ್ಯಕ್ಷರಾದ ಡಿ.ಎಸ್ ಗಿರೀಶ್, ಸಮಿತಿಯ ಸದಸ್ಯರಾಗಿದ್ದಾರೆ. ಸದಸ್ಯ ಕಾರ್ಯದರ್ಶಿಗಳಾಗಿ ಮೈಸೂರಿನ ಯುನೈಟೆಡ್ ಇಂಡಿಯಾ ಇನ್ಸುರೆನ್ಸ್ ಕಂಪನಿ ಲಿಮಿಟೆಡ್ ಅಧಿಕಾರಿ ಶಿವಪ್ರಸಾದ್ ನೇಮಕವಾಗಿದ್ದಾರೆ.

ಹಿಟ್ ಮತ್ತು ರನ್ ಅಪಘಾತದಲ್ಲಿ ಮರಣ ಹೊಂದಿದ ವಾರಸುದಾರರು ಹಾಗೂ ಗಾಯಗೊಂಡವರು ಸಂಬಂಧಪಟ್ಟ ಪೊಲೀಸ್ ಠಾಣೆಯಲ್ಲಿ ಪರಿಹಾರಕ್ಕಾಗಿ ಅರ್ಜಿ ಸಲ್ಲಿಸಬೇಕು. ಹೆಚ್ಚಿನ ಮಾಹಿತಿಗಾಗಿ ಜಿಲ್ಲಾಧಿಕಾರಿಗಳ ಕಚೇಟಿಜಜಜಿಟಿಜಜೇರಿ ಕಂಟ್ರೋಲ್ ರೂಂ ದೂರವಾಣಿ ಸಂಖ್ಯೆ: 08226-223160, ಮೊ.ಸಂ: 9740942901 ಹಾಗೂ ಪೊಲೀಸ್ ಇಲಾಖೆಯ ಕಂಟ್ರೋಲ್ ರೂಂ ದೂ.ಸಂ: 08226-222383, ಮೊ.ಸಂ.: 9480804600 ಅನ್ನು ಸಂಪರ್ಕಿಸುವಂತೆ ಜಿಲ್ಲಾಧಿಕಾರಿಗಳಾದ ಶಿಲ್ಪಾ ನಾಗ್ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ವಿಪ್ ಉಲ್ಲಂಘಿಸಿದ ಆರೋಪ ನಗರಸಭೆ ಸದಸ್ಯರು ಅನರ್ಹ

ಚಿಕ್ಕಬಳ್ಳಾಪುರ: ನಗರಸಭೆ ಅಧ್ಯಕ್ಷ, ಉಪಾಧ್ಯಕ್ಷರ ಚುನಾವಣೆಯ ವೇಳೆ ವಿಪ್ ಉಲ್ಲಂಘಿಸಿದ ಆರೋಪ ಹೊತ್ತ ನಗರಸಭೆ ಸದಸ್ಯರನ್ನು ಜಿಲ್ಲಾದಂಡಾಧಿಕಾರಿಯೂ ಆದ ಜಿಲ್ಲಾಧಿಕಾರಿ ಪಿ.ಎನ್.ರವೀಂದ್ರ ಅನರ್ಹಗೊಳಿಸಿದ್ದಾರೆ.

ಚಿಕ್ಕಬಳ್ಳಾಪುರ ನಗರಸಭೆ ಅಧ್ಯಕ್ಷ, ಉಪಾಧ್ಯಕ್ಷರ ಚುನಾವಣೆಯ ವೇಳೆವಿಪ್ ಉಲ್ಲಂಘಿಸಿದ ಆರೋಪದ ಮೇಲೆ ಕಾಂಗ್ರೆಸ್‌ನ ಆರು ಮಂದಿ ನಗರಸಭೆ ಸದಸ್ಯರನ್ನು ಅನರ್ಹ ಗೊಳಿಸಲಾಗಿದೆ.

2ನೇ ವಾರ್ಡ್ ಸದಸ್ಯೆ ರತ್ನಮ್ಮ, 7ನೇ ವಾರ್ಡ್‌ನ ಸತೀಶ್, 13ನೇ ವಾರ್ಡ್‌ನ ನಿರ್ಮಲಪ್ರಭು, 22ನೇ ವಾರ್ಡ್‌ನ ಸ್ವಾತಿ ಎಂ., 24ನೇ ವಾರ್ಡ್‌ನ ಅಂಬಿಕಾ, 27ನೇ ವಾರ್ಡ್‌ನ ವಿ.ನೇತ್ರಾವತಿ, ಅನರ್ಹತೆಗೆ ಒಳಗಾದವರು.

ಚಿಕ್ಕಬಳ್ಳಾಪುರ ರಾಜಕೀಯದಲ್ಲಿ ಈ ವಿಚಾರವೂ ತೀವ್ರ ಚರ್ಚೆಗೆ ಕಾರಣವಾಗಿತ್ತು. ಶಾಸಕ ಪ್ರದೀಪ್ ಈಶ್ವರ್, ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಂ.ಸಿ.ಸುಧಾಕರ್ ಮತ್ತು ಸಂಸದ ಡಾ.ಕೆ.ಸುಧಾಕರ್ ಅವರ ನಡುವೆ ತೀವ್ರ ಜಿದ್ದಾಜಿದ್ದಿಗೆ ಕಾರಣವಾಗಿತ್ತು. ಸೆಪ್ಟೆಂಬರ್ 12ರಂದು ಚಿಕ್ಕಬಳ್ಳಾಪುರ ನಗರಸಭೆಯ ಎರಡನೇ ಅವಧಿಯ ಅಧ್ಯಕ್ಷ, ಉಪಾಧ್ಯಕ್ಷರ ಆಯ್ಕೆಗೆ ಚುನಾವಣೆ ನಡೆಯಿತು. ಅಧ್ಯಕ್ಷ ಸ್ಥಾನ ಸಾಮಾನ್ಯ ವರ್ಗಕ್ಕೆ ಮತ್ತು ಉಪಾಧ್ಯಕ್ಷ ಸ್ಥಾನ ಪರಿಶಿಷ್ಟ ಜಾತಿಗೆ ಮೀಸಲಾಗಿತ್ತು. ಅಧ್ಯಕ್ಷ ಸ್ಥಾನಕ್ಕೆ ಬಿಜೆಪಿಯಿಂದ ನಾಲ್ಕನೇ ವಾರ್ಡ್‌ನ ಎ.ಗಜೇಂದ್ರ ಮತ್ತು ಉಪಾಧ್ಯಕ್ಷ ಸ್ಥಾನಕ್ಕೆ ಐದನೇ ವಾರ್ಡ್‌ನ ನಾಗರಾಜ್.ಜೆ ಸ್ಪರ್ಧಿಸಿದ್ದ ರು. ಕಾಂಗ್ರೆಸ್‌ನಿಂದ ಅಧ್ಯಕ್ಷ ಸ್ಥಾನಕ್ಕೆ 15ನೇ ವಾರ್ಡ್‌ನ ಟಿ.ಜೆ. ಅಂಬರೀಷ್ ಮತ್ತು ಉಪಾಧ್ಯಕ್ಷ ಸ್ಥಾನಕ್ಕೆ 30ನೇ ವಾರ್ಡ್‌ನ ಮೀನಾಕ್ಷಿ ವೆಂಕಟೇಶ್ ಸ್ಪರ್ಧೆ ಮಾಡಿದ್ದರು.

ವಿಧಾನಸಭೆ ಮತ್ತು ಲೋಕಸಭೆ ಚುನಾವಣೆಯ ಸಂದರ್ಭದಲ್ಲಿಯೇ ಡಾ.ಕೆ.ಸುಧಾಕರ್ ಜೊತೆ ಗುರುತಿಸಿಕೊಂಡಿದ್ದ ಆರು ಮಂದಿ ಕಾಂಗ್ರೆಸ್ ಸದಸ್ಯರು ನಗರಸಭೆ ಚುನಾವಣೆಯಲ್ಲಿ ಮತ್ತೆ ಡಾ.ಕೆ.ಸುಧಾಕರ್ ಪರವಾಗಿ ನಿಲುವು ತಾಳಿದರು.

ಪಕ್ಷದ ವಿಪ್ ಉಲ್ಲಂಘಿಸಿ ಬಿಜೆಪಿ ಅಭ್ಯರ್ಥಿಗಳಿಗೆ ಮತ ಹಾಕಿದರು. ಬಿಜೆಪಿ ಅಭ್ಯರ್ಥಿಗಳು ಗೆಲುವು ಸಾಧಿಸಿದರು. ಈ ಬಗ್ಗೆ ಕಾಂಗ್ರೆಸ್ ಜಿಲ್ಲಾ ಅಧ್ಯಕ್ಷ ಕೆ.ಎನ್.ಕೇಶವರೆಡ್ಡಿ ಮತ್ತು ನಗರಸಭೆ ಚುನಾವಣೆಯಲ್ಲಿ ಕಾಂಗ್ರೆಸ್‌ನಿಂದ ಅಧ್ಯಕ್ಷ ಸ್ಥಾನದ ಅಭ್ಯರ್ಥಿಯಾಗಿದ್ದ ಅಂಬರೀಷ್ ಜಿಲ್ಲಾಧಿಕಾರಿ ಅವರಿಗೆ ದೂರು ನೀಡಿದ್ದಾರೆ. ಅಡ್ಡಮತದಾನ ಮಾಡಿದ ಆರು ಮಂದಿಯ ಸದಸ್ಯತ್ವವನ್ನು ಅನರ್ಹ ಗೊಳಿಸಬೇಕು ಎಂದು ಕೋರಿದ್ದರು.

ಚಿಕ್ಕಬಳ್ಳಾಪುರ ನಗರಸಭೆಯಲ್ಲಿ ಬಹುಮತವಿದ್ದರೂ ಕಾಂಗ್ರೆಸ್ ಪಕ್ಷ ಅಧಿಕಾರದಿಂದ ದೂರ ಉಳಿಯುವಂತೆ ಆಗಿದೆ. ಮೊದಲ ಅವಧಿಯಲ್ಲಿಯೂ ಸುಧಾಕರ್ ಅವರ ರಾಜಕೀಯ ತಂತ್ರಗಾರಿಕೆಯ ಪರಿಣಾಮ ಕಾಂಗ್ರೆಸ್ ಅಧಿಕಾರ ವಂಚಿತವಾಗಿತ್ತು. ಎರಡನೇಅವಧಿಯಲ್ಲಿಯೂ ವಿಪ್ ಉಲ್ಲಂಘನೆಯ ಪರಿಣಾಮ ಕಾಂಗ್ರೆಸ್ ಅಧಿಕಾರ ಹಿಡಿಯಲು ಸಾಧ್ಯವಾಗಲಿಲ್ಲ. ಈಗ ವಿಪ್ ಉಲ್ಲಂಘಿಸಿದ ಸದಸ್ಯರು ಅನರ್ಹಗೊಂಡಿದ್ದಾರೆ. ಚಿಕ್ಕಬಳ್ಳಾಪುರ ನಗರಸಭೆಯ ಮುಂದಿನ ರಾಜಕೀಯ ಬೆಳವಣಿಗೆಗಳ ಬಗ್ಗೆ ತೀವ್ರ ಕುತೂಹಲ ಮೂಡಿದೆ.

# ಮೌಂಟ್ ಲೆವೊಟೊಬಿ ಜ್ವಾಲಾಮುಖಿ ಸ್ಫೋಟ



**ಜಕಾರ್ತಾ:** ಇಂಡೋನೇಷ್ಯಾದ ದಕ್ಷಿಣ – ಮಧ್ಯ ಭಾಗದಲ್ಲಿರುವ ಮೌಂಟ್ ಲೆವೊಟೊಬಿ ಲಾಕಿ ಲಾಕಿ ಜ್ವಾಲಾಮುಖಿ ಶುಕ್ರವಾರ ಮೂರು ಬಾರಿ ಸ್ಫೋಟಗೊಂಡಿದ್ದು, ಆಕಾಶದಲ್ಲಿ 8,000 ಮೀಟರ್ ಎತ್ತರದವರೆಗೆ ಬೂದಿಯ ಹೊಗೆ ಚಿಮ್ಮಿದೆ. ಪೂರ್ವ ನುಸಾ ತೆಂಗರಾ ಪ್ರಾಂತ್ಯದ ದೂರದ ದ್ವೀಪ ಫ್ಲೋರೆಸ್‌ನಲ್ಲಿರುವ ಜ್ವಾಲಾಮುಖಿಯಲ್ಲಿ ನೂರಾರು ಭೂಕಂಪಗಳು ಸಂಭವಿಸಿವೆ ಮತ್ತು ಕಳೆದ ಏಳು ದಿನಗಳಲ್ಲಿ ಸಕ್ರಿಯ ಜ್ವಾಲಾಮುಖಿ ಚಟುವಟಿಕೆ ಗಮನಾರ್ಹವಾಗಿ ಹೆಚ್ಚಾಗಿದೆ.

ಗುರುವಾರ ತಡರಾತ್ರಿ ಮತ್ತು ಶುಕ್ರವಾರ ಮುಂಜಾನೆ ಮೂರು ಸ್ಫೋಟಗಳ ನಂತರ, ಜ್ವಾಲಾಮುಖಿ ಹಗಲಿನಲ್ಲಿ ಶಾಂತವಾಗಿತ್ತು. ವುಲಾಂಗಿಟಾಂಗ್‌ನ ವೀಕ್ಷಣಾ ಪೋಸ್ಟ್‌ನ ಮೇಲ್ವಿಚಾರಣೆ ವರದಿಯ ಪ್ರಕಾರ ಹಗಲಿನಲ್ಲಿ ಭೂಕಂಪನಗಳು ಕಡಿಮೆಯಾಗಿವೆ.

ಅಧಿಕಾರಿಗಳು ಸ್ಫೋಟದ ಎಚ್ಚರಿಕೆಯನ್ನು ಅತ್ಯುನ್ನತ ಮಟ್ಟಕ್ಕೆ ಏರಿಸಿದ್ದು, ಅಪಾಯದ ವಲಯವನ್ನು ಕುಳಿಯಿಂದ 7 ಕಿಲೋಮೀಟರ್‌ನಿಂದ 8 ಕಿಲೋಮೀಟರ್‌ಗೆ ವಿಸ್ತರಿಸಿದ್ದಾರೆ. ಪ್ರಸ್ತುತ ಈ ಪ್ರದೇಶದಿಂದ ನಿವಾಸಿಗಳನ್ನು ಸ್ಥಳಾಂತರಿಸಿರುವ ಬಗ್ಗೆ ಯಾವುದೇ ವರದಿಗಳು ಬಂದಿಲ್ಲ. ಸ್ಫೋಟದಿಂದಾಗಿ ಹಲವಾರು ವಿಮಾನಯಾನ ಸಂಸ್ಥೆಗಳು ಆಸ್ಟ್ರೇಲಿಯಾ ಮತ್ತು ಇಂಡೋನೇಷ್ಯಾದ ಪ್ರವಾಸಿ ದ್ವೀಪ ಬಾಲಿ ನಡುವಿನ ವಿಮಾನಗಳನ್ನು ರದ್ದುಗೊಳಿಸಿವೆ. ಇದರಿಂದ ದ್ವೀಪಕ್ಕೆ ಇತರ ಅಂತಾರಾಷ್ಟ್ರೀಯ ಮತ್ತು ದೇಶೀಯ ವಿಮಾನಗಳ ಆಗಮನ ವಿಳಂಬವಾಗಿವೆ.

ಭಾರಿ ಮಳೆಯಾಗುವ ಹಾಗೂ ಮಳೆ ನೀರಿನ ಮೂಲಕ ಜ್ವಾಲಾಮುಖಿಯ ಲಾವಾ ಹರಿದು ಬರುವ ಅಪಾಯವಿದೆ ಎಂದು ಇಂಡೋನೇಷ್ಯಾದ ಭೂವಿಜ್ಞಾನ ಸಂಸ್ಥೆ ಜನರಿಗೆ ಎಚ್ಚರಿಕೆ ನೀಡಿದೆ.

ನವೆಂಬರ್ ನಲ್ಲಿ ಮೌಂಟ್ ಲೆವೊಟೊಬಿ ಲಕಿ ಲಕಿ ಜ್ವಾಲಾಮುಖಿ ಸ್ಫೋಟಗೊಂಡು ಒಂಬತ್ತು ಜನ ಸಾವನ್ನಪ್ಪಿದ್ದರು ಮತ್ತು ಡಜನ್ ಗಟ್ಟಲೆ ಜನ ಗಾಯಗೊಂಡಿದ್ದರು. ಇಂಡೋನೇಷ್ಯಾ 270 ಮಿಲಿಯನ್ ಜನರ ದ್ವೀಪಸಮೂಹವಾಗಿದ್ದು, ಇಲ್ಲಿ ಆಗಾಗ ಭೂಕಂಪಗಳು ಸಂಭವಿಸುತ್ತಿರುತ್ತವೆ. ದೇಶದಲ್ಲಿ 120 ಸಕ್ರಿಯ ಜ್ವಾಲಾಮುಖಿಗಳಿವೆ.

# ಮಹಾಕುಂಭ ಮುಗಿಸಿ ಹರಿದ್ವಾರಕ್ಕೆ ಮರಳಿದ ಸಾಧು–ಸಂತರು

**ಹರಿದ್ವಾರ:** ಪ್ರಯಾಗ್‌ರಾಜ್ ಮಹಾಕುಂಭವನ್ನ ಮುಗಿಸಿ ನಿರಂಜನಿ ಅಖಾಡದ ಸಂತರು ಹರಿದ್ವಾರ ತಲುಪಿದ್ದಾರೆ. ಈ ವೇಳೆ ಸಂತರು ಹಾಗೂ ಋಷಿಮುನಿಗಳಿಗೆ ಹರಿದ್ವಾರದ ಜನರು ಹೂವಿನ ಹಾರ ಹಾಕಿ ಸ್ವಾಗತಿಸಿದ್ದಾರೆ.

ಕುಂಭ ಮುಗಿಸಿ ಹರಿದ್ವಾರಕ್ಕೆ ಮರಳಿದ ಸಾಧು–ಸಂತರು : ಈ ವೇಳೆ ನಿರಂಜನಿ ಅಖಾಡದ ಕಾರ್ಯದರ್ಶಿ ಹಾಗೂ ಅಖಾರ ಪರಿಷತ್ತಿನ ಅಧ್ಯಕ್ಷ ಶ್ರೀ ಮಹಂತ್ ರವೀಂದ್ರಪುರಿ ಮಾತನಾಡಿ, ಮಹಾಕುಂಭದ ಸಂದರ್ಭದಲ್ಲಿ ಅಖಾರದ ಎಲ್ಲ ಅಧಿಕಾರಿಗಳು, ಸಾಧು–ಸಂತರು ಕುಂಭ ಪ್ರದೇಶಕ್ಕೆ ತೆರಳಿ ಹೋಳಿ ನಂತರ ತಮ್ಮ ತಮ್ಮ ಸ್ಥಳಗಳಿಗೆ ತೆರಳಿ ಜವಾಬ್ದಾರಿಯನ್ನು ಪೂರೈಸುತ್ತಾರೆ. ಹರಿದ್ವಾರದ ಎಲ್ಲಾ ಋಷಿಮುನಿಗಳು ಮತ್ತು ಸಂತರು ಪ್ರಯಾಗ್‌ರಾಜ್ ಕುಂಭವನ್ನು ಮುಗಿಸಿ ಹರಿದ್ವಾರಕ್ಕೆ ಬಂದಿದ್ದಾರೆ. ಈ ವೇಳೆ ಅವರನ್ನ ಇಲ್ಲಿನ ಎಲ್ಲರೂ ಸ್ವಾಗತಿಸಿದ್ದಾರೆ ಎಂದು ಹೇಳಿದ್ದಾರೆ.

ಅರ್ಧಕುಂಭಕ್ಕೆ ಸಿದ್ಧವಾದ ಹರಿದ್ವಾರ : ಪ್ರಯಾಗ್‌ರಾಜ್ ಮಹಾಕುಂಭ ಮುಗಿದ ನಂತರ ಇತರೆ ಕುಂಭಗಳ ಬಗ್ಗೆ ನಮ್ಮ ಕೆಲಸ ಆರಂಭವಾಗಲಿದೆ. 2027ರಲ್ಲಿ ಹರಿದ್ವಾರದಲ್ಲಿ ಅರ್ಧಕುಂಭ ನಡೆಯಲಿದೆ. ಇದಾದ ಬಳಿಕ ನಾಸಿಕ್ ಮತ್ತು ಉಜ್ಜಯಿನಿಯಲ್ಲೂ ಮಹಾಕುಂಭಗಳಿದ್ದು, ಇದೀಗ ನಿರಂಜನಿ ಅಖಾಡದ ಎಲ್ಲಾ ಅಧಿಕಾರಿಗಳು ಸಿದ್ಧತೆಯಲ್ಲಿ ತೊಡಗಿದ್ದಾರೆ ಎಂದರು.

ಅರ್ಧಕುಂಭಕ್ಕೆ ಸಂಬಂಧಿಸಿದಂತೆ ಉತ್ತರಾಖಂಡ ಮುಖ್ಯಮಂತ್ರಿ ಪುಷ್ಕರ್ ಸಿಂಗ್ ಧಾಮಿ ಅವರೊಂದಿಗೆ ಮಾತುಕತೆ ನಡೆದಿದೆ. ಹರಿದ್ವಾರದಲ್ಲಿ ನಡೆಯಲಿರುವ ಅರ್ಧಕುಂಭವನ್ನು ಕೂಡ ಮಹಾಕುಂಭದಂತೆ ಆಯೋಜಿಸಬೇಕು ಎಂದು ಮನವಿ ಮಾಡಿದ್ದೇವೆ. ಏಕೆಂದರೆ 2021ರಲ್ಲಿ ಕೊರೊನಾ ಅವಧಿಯು ಬಂದಿತ್ತು. ಇದರಿಂದಾಗಿ ಹರಿದ್ವಾರದಲ್ಲಿ ನಡೆದ ಮಹಾಕುಂಭದ ವೈಭವವು ಕಡಿಮೆಯಾಗಿತ್ತು. ಆದ್ದರಿಂದ 2027ರಲ್ಲಿ ನಡೆಯಲಿರುವ ಅರ್ಧಕುಂಭಕ್ಕೆ ಸಂಬಂಧಿಸಿದಂತೆ ಮೊದಲು ಸರ್ಕಾರದೊಂದಿಗೆ ಚರ್ಚೆ ನಡೆಸಲಾಗುವುದು. ಅದರ ನಂತರ ಎಲ್ಲ ಅಖಾಡಗಳ ಸಭೆಯನ್ನು ಕರೆದು 2027ರ ಕುಂಭವನ್ನು ಹೇಗೆ ನಡೆಸಬೇಕೆಂದು ನಿರ್ಧರಿಸಲಾಗುವುದು ಎಂದು ಹೇಳಿದರು.



2027ಕ್ಕೆ ಹರಿದ್ವಾರದಲ್ಲಿ ಅರ್ಧಕುಂಭ : 144 ವರ್ಷಗಳ ನಂತರ ಪ್ರಯಾಗರಾಜ್‌ನಲ್ಲಿ ಈ ಬಾರಿ ಮಹಾಕುಂಭ ಮೇಳ ನಡೆದಿರುವ ಗಮನಾರ್ಹ. ಜನವರಿ 13 ರಂದು ಪ್ರಾರಂಭವಾದ ಮಹಾಕುಂಭ ಫೆಬ್ರವರಿ 26 ರಂದು ಮುಕ್ತಾಯವಾಯಿತು.

ಯುಪಿ ಸರ್ಕಾರದ ಪ್ರಕಾರ, ಮಹಾಕುಂಭದ ಸಮಯದಲ್ಲಿ 66 ಕೋಟಿಗೂ ಹೆಚ್ಚು ಭಕ್ತರು ಗಂಗಾಸ್ನಾನ ಮಾಡಿದ್ದಾರೆ. ಕುಂಭ, ಅರ್ಧ ಕುಂಭ ಮತ್ತು ಮಹಾ ಕುಂಭಗಳು ಧಾರ್ಮಿಕ ಕಾರ್ಯಕ್ರಮಗಳ ವಿಧಗಳಾಗಿವೆ. ಇವುಗಳನ್ನು ವಿವಿಧ ಸಮಯದ ಮಧ್ಯಂತರಗಳಲ್ಲಿ ಮತ್ತು ವಿವಿಧ ಸ್ಥಳಗಳಲ್ಲಿ ಆಯೋಜಿಸಲಾಗುತ್ತದೆ. ಕುಂಭಮೇಳವನ್ನು ಪ್ರತಿ 12 ವರ್ಷಗಳಿಗೊಮ್ಮೆ ಹರಿದ್ವಾರ, ಪ್ರಯಾಗರಾಜ್, ನಾಸಿಕ್ ಮತ್ತು ಉಜ್ಜಯಿನಿಗಳಲ್ಲಿ ಯಾವುದಾದರೂ ಒಂದರಲ್ಲಿ ಆಯೋಜಿಸಲಾಗುತ್ತದೆ.

6 ವರ್ಷಗಳಿಗೊಮ್ಮೆ ಅರ್ಧ ಕುಂಭ : ಪ್ರಯಾಗರಾಜ್ ಮತ್ತು ಹರಿದ್ವಾರದಲ್ಲಿ ಪ್ರತಿ 6 ವರ್ಷಗಳಿಗೊಮ್ಮೆ ಅರ್ಧ ಕುಂಭವನ್ನು ಆಯೋಜಿಸಲಾಗುತ್ತದೆ. 144 ವರ್ಷಗಳಿಗೊಮ್ಮೆ ಪ್ರಯಾಗರಾಜ್‌ನಲ್ಲಿ ಮಹಾಕುಂಭವನ್ನು ಆಯೋಜಿಸಲಾಗುತ್ತದೆ. 2021ರಲ್ಲಿ ಹರಿದ್ವಾರದಲ್ಲಿ ಕುಂಭ ಕಾರ್ಯಕ್ರಮ ನಡೆದಿತ್ತು. ಈಗ 2027ರಲ್ಲಿ ಅರ್ಧಕುಂಭ ನಡೆಯಲಿದೆ.

# ತಾಂಡ್ಯ ಗ್ರಾಮದಲ್ಲಿ ಹನಿ ನೀರಿಗೂ ಹಾಹಾಕಾರ



**ಮಹಾರಾಷ್ಟ್ರ:** ಬೇಸಿಗೆ ಪ್ರಾರಂಭದಲ್ಲೇ ಹಲವೆಡೆ ಕುಡಿವ ನೀರಿನ ಸಮಸ್ಯೆ ಉದ್ಭವಿಸಿದ್ದು ಜನರು ಪರದಾಡುತ್ತಿದ್ದಾರೆ. ಗೋದಾವರಿ ಜಲಾನಯನ ಪ್ರದೇಶವಾದ ಛತ್ರಪತಿ ಸಂಭಾಜಿನಗರ ಜಿಲ್ಲೆ, ಪೈಥಾನ್ ತಾಲೂಕಿನ ತಾಂಡ್ಯ ಎಂಬ ಗ್ರಾಮದಲ್ಲಿ ನೀರಿನ ಸಮಸ್ಯೆ ಅತಿರೇಕಕ್ಕೆ ತಲುಪಿದೆ.

ನೀರು ಇಲ್ಲದ ಈ ಊರಿಗೆ ಯಾರೂ ಹೆಣ್ಣು ಕೊಡಲು ಮುಂದೆ ಬರುತ್ತಿಲ್ಲ! ಕಾರಣ ಗ್ರಾಮದ ಮಹಿಳೆಯರು ಮೈಲಿಗಳಷ್ಟು ದೂರ ಕ್ರಮಿಸಿ ನೀರು ತರಬೇಕಾದ ಪರಿಸ್ಥಿತಿ ಇಲ್ಲಿದ್ದು, ಇದನ್ನು ಕಂಡು ಹೆಣ್ಣು ಹೆತ್ತವರು ಈ ಊರಿಗೆ ತಮ್ಮ ಮಕ್ಕಳನ್ನು ಕೊಡಲು ಹಿಂದೇಟು ಹಾಕುವಂತಾಗಿದೆ.

ತಮ್ಮ ಮಕ್ಕಳು ಮದುವೆಯಾಗಿ ಈ ಗ್ರಾಮಕ್ಕೆ ತೆರಳಿದರೆ ಜೀವನಪೂರ್ತಿ ನೀರು ಹೊರಬೇಕಾಗುತ್ತದೆ. ಅದೂ ನಿತ್ಯ. ಆ ಕಷ್ಟ ನಮ್ಮ ಹೆಣ್ಣು ಮಕ್ಕಳಿಗೆ ಬರಬಾರದು. ಜೀವನಪರ್ಯಂತ ನೀರಿಗಾಗಿ ಹೋರಾಟ ಮಾಡುವುದು ನಮಗೆ ಇಷ್ಟವಿಲ್ಲ. ಬರಿ ನೀರಿಗಾಗಿ ಮೈಲಿಗಟ್ಟಲೇ ನಡೆಯುವುದನ್ನು ನಾವು ಬಯಸುವುದಿಲ್ಲ ಎನ್ನುತ್ತಾರೆ ನೆರೆಹೊರೆ ಗ್ರಾಮಸ್ಥರು. ಸಮಸ್ಯೆ ಮನಗೊಂಡ ತಾಂಡ್ಯ ಗ್ರಾಮದ ಅವಿವಾಹಿತ ಯುವಕರು, ಬೇರೆ ಸ್ಥಳಗಳಿಗೆ ವಲಸೆ ಹೋಗುವ ಮೂಲಕ ಅಲ್ಲಿ ತಮ್ಮ ತಮ್ಮ ಸಂಗಾತಿಗಳನ್ನು ಹುಡುಕಿಕೊಂಡು ಬರುವಂತಾಗಿದೆ. ಇದು ಇಂದು ನಿನ್ನೆಯ ಸಮಸ್ಯೆ ಅಲ್ಲ, ಕಳೆದ ಹಲವು ದಿನಗಳಿಂದ ಇದೇ ರೀತಿ ನಡೆದುಕೊಂಡು ಬರುತ್ತಿದ್ದಾರೆ.

ಇಲ್ಲಿ ಪ್ರತಿವರ್ಷವೂ ಇದೇ ಗೋಳು, ಅದೇ ಹಾಡು: ಸುಮಾರು 3,000 ಜನಸಂಖ್ಯೆಯನ್ನು ಹೊಂದಿರುವ ತಾಂಡ್ಯ ಗ್ರಾಮ, ವರ್ಷಪೂರ್ತಿ ನೀರಿನ ಬಿಕ್ಕಟ್ಟಿನ ವಿರುದ್ಧ ಹೋರಡಬೇಕಾಗಿದೆ. ಇದೀಗ ಬೇಸಿಗೆ ಬಂದಿದ್ದರಿಂದ ನೀರಿನ ಸಮಸ್ಯೆ ಅತಿರೇಕಕ್ಕೆ ತಲುಪಿದೆ. ಹನಿ ನೀರಿಗೂ ಹಾಹಾಕಾರ, ತತ್ವಾರ ಉಂಟಾಗಿದೆ. ಸುಡುವ ಬಿಸಿಲಿನಲ್ಲಿ ಮಹಿಳೆಯರು ಮತ್ತು ಮಕ್ಕಳು ನೀರಿಗಾಗಿ ಕಿಲೋ ಮೀಟರ್ ಗಟ್ಟಲೇ ಕ್ರಮಿಸಬೇಕು. ವಿಪರ್ಯಾಸ ಎಂದರೆ ಈ ಗ್ರಾಮವು ಏಷ್ಯಾದ ಅತಿದೊಡ್ಡ ಅಣೆಕಟ್ಟಿನಲ್ಲಿ ಒಂದಾದ ಜಯಕ್ವಾಡಿ ಅಣೆಕಟ್ಟಿನಿಂದ ಕೇವಲ 25ರಿಂದ 30 ಕಿಲೋಮೀಟರ್ ದೂರದಲ್ಲಿದೆ!.

ಟ್ಯಾಂಕರ್ ಪೂರೈಕೆ ಇದ್ದರೂ ಯಾವುದಕ್ಕೂ ಸಾಲುತ್ತಿಲ್ಲ: ನೀರಿನ ಟ್ಯಾಂಕರ್ ಮೂಲಕ 10 ರಿಂದ 12 ದಿನಗಳಿಗೊಮ್ಮೆ ನೀರು ಪೂರೈಸುತ್ತಿದ್ದರೂ ಗ್ರಾಮದಲ್ಲಿ ಅಳವಡಿಸಲಾದ ನಲ್ಲಿಗಳು ಬತ್ತಿ ಹೋಗುತ್ತಿವೆ. ಟ್ಯಾಂಕರ್ ಪೂರೈಕೆ ಇದ್ದರೂ, ನೀರು ಸಾಕಾಗುತ್ತಿಲ್ಲ. ನೀರನ್ನು ಮೊದಲು ಬಾವಿಗೆ ಬಿಡಲಾಗುತ್ತದೆ. ಆದರೆ, ಅಡುಗೆ ಮತ್ತು ಕುಡಿಯಲು ಬಳಸಿದ ನಂತರ, ಮೂಲಭೂತ ಬಳಕೆಗಳಿಗೆ ನೀರೇ ಉಳಿಯುವುದಿಲ್ಲ. ಶಾಲೆ ಮುಗಿದ ಬಳಿಕ ಅನೇಕರು ತಮ್ಮ ಮಕ್ಕಳನ್ನು ನೀರು ತರಲು ಒತ್ತಾಯಿಸುವುಂಟು. ಗ್ರಾಮದಲ್ಲಿ ನೀರಿನ ಮಟ್ಟ ತುಂಬಾ ಕಡಿಮೆಯಾಗಿದೆ. ಸಮಸ್ಯೆ ಕುರಿತು ಸಂಬಂಧಪಟ್ಟ ಅಧಿಕಾರಿಗಳಿಗೆ ತಿಳಿಸಿದರೂ ಯಾವುದೇ ಪ್ರಯೋಜನವಾಗಿಲ್ಲ ಎಂದು ಗ್ರಾಮದ ಮಹಿಳೆಯರು ತಮ್ಮ ಅಳಲು ತೋಡಿಕೊಂಡಿದ್ದಾರೆ.

ಆಯ್ಕೆ ಆದವರಿಗೆ ಇದೇ ಬಂಡವಾಳ: ಗ್ರಾಮಕ್ಕೆ ಅನುಮೋದಿತ ನೀರಿನ ಯೋಜನೆ ಅಪೂರ್ಣವಾಗಿಯೇ ಉಳಿದಿದೆ. ಆಯ್ಕೆಯಾಗಿ ಬಂದ ಜನಪ್ರತಿನಿಧಿಗಳು ನೀರಿನ ಸಮಸ್ಯೆಯನ್ನು ಈವರೆಗೂ ಜೀವಂತಾಗಿಟ್ಟಿದ್ದಾರೆ. ಎಷ್ಟೋ ಬಾರಿ ಮನವಿ ಮಾಡಲಾಗಿದೆ. ಆದರೂ, ಗ್ರಾಮಕ್ಕೆ ಕಾಡುತ್ತಿರುವ ನೀರಿನ ಸಮಸ್ಯೆ ಸರಿದೂಗಿಲ್ಲ. ಹಾಗಾಗಿ ನಾವು ಸ್ಥಳಾಂತರಗೊಳ್ಳುವ ಆಲೋಚನೆ ಮಾಡುತ್ತಿದ್ದೇವೆ ಎಂದು ಗ್ರಾಮಸ್ಥರು ಅವಿನಾಶ್ ಜಾಧವ್ ಹತಾಶೆ ವ್ಯಕ್ತಪಡಿಸಿದರು.

ಜಲಾಶಯದ ಮಟ್ಟ ಕಡಿಮೆಯಾಗುತ್ತಿರುವುದರಿಂದ ಮರಾಠವಾಡ ಮತ್ತು ಪುಣೆಯಂತಹ ಪ್ರದೇಶಗಳಲ್ಲಿಯೂ ನೀರಿನ ಸಮಸ್ಯೆ ಉದ್ಭವಿಸಿದೆ. ಹಲವು ಪ್ರದೇಶಗಳು ಟ್ಯಾಂಕರ್‌ಗಳ ಮೂಲಕ ನೀರು ತರಿಸಿಕೊಳ್ಳುತ್ತಿವೆ. ಹಾಗಾಗಿ ಟ್ಯಾಂಕರ್‌ಗಳ ಅವಲಂಬನೆ ಹೆಚ್ಚುತ್ತಿದೆ. ಇದು ಕುಡಿಯುವ ನೀರು ಮತ್ತು ನೀರಾವರಿ ಎರಡರ ಮೇಲೂ ಪರಿಣಾಮ ಬೀರುತ್ತಿದೆ.

# ಭಾರಿ ಬೆಂಕಿ ಅವಘಡ: ಹೀಥ್ರೋ ಏರ್ಪೋರ್ಟ್ ಬಂದ್



**ಲಂಡನ್:** ಲಂಡನ್‌ನ ಹೀಥ್ರೋ ವಿಮಾನ ನಿಲ್ದಾಣದಲ್ಲಿ ಭಾರಿ ಪ್ರಮಾಣದ ಬೆಂಕಿ ಅವಘಡ ಸಂಭವಿಸಿದೆ. ನಗರದ ಪಶ್ಚಿಮ ಭಾಗದಲ್ಲಿ ವಿದ್ಯುತ್ ವ್ಯತ್ಯಯ ಉಂಟಾಗಿದ್ದು, 16,000 ಮನೆಗಳೂ ಸೇರಿದಂತೆ ವಿಮಾನ ನಿಲ್ದಾಣದಲ್ಲಿ ವಿದ್ಯುತ್ ಸಂಪರ್ಕ ಕಡಿತಗೊಂಡಿದೆ. ಮುನ್ನೆಚ್ಚರಿಕಾ ಕ್ರಮವಾಗಿ 150 ಜನರನ್ನು ಸ್ಥಳಾಂತರಿಸಲಾಗಿದೆ.

ಶುಕ್ರವಾರ ಬೆಳಗ್ಗೆ (ಭಾರತೀಯ ಕಾಲಮಾನ) ವಿಮಾನ ನಿಲ್ದಾಣದಲ್ಲಿ ವಿದ್ಯುತ್ ಅವಘಡದಿಂದಾಗಿ ಬೆಂಕಿ ಕಾಣಿಸಿಕೊಂಡಿದೆ. ನಂತರ ಯಾರೂ ಕೂಡ ಇಲ್ಲಿಂದ ಪ್ರಯಾಣಿಸದಂತೆ ಸಲಹೆ ನೀಡಲಾಯಿತು.

ಪ್ರಯಾಣಿಕರು ಮತ್ತು ಸಹೋದ್ಯೋಗಿಗಳ ಸುರಕ್ಷತೆ ನಿರ್ವಹಣೆ ಉದ್ದೇಶದಿಂದ ವಿಮಾನ ನಿಲ್ದಾಣವನ್ನು ಮಾರ್ಚ್ 21ರಂದು ರಾತ್ರಿ ಗಂಟೆ 11.59ಯವರೆಗೆ ಮುಚ್ಚಲಾಗುವುದು ಎಂದು ಏರ್‌ಪೋರ್ಟ್ ಅಧಿಕಾರಿಗಳು ತಿಳಿಸಿದ್ದಾರೆ.

ವಿಮಾನ ನಿಲ್ದಾಣದ ವಕ್ತಾರರು ಮಾಧ್ಯಮಕ್ಕೆ ಪ್ರತಿಕ್ರಿಯಿಸಿ, "ಅಗ್ನಿಶಾಮಕದಳದ ಸಿಬ್ಬಂದಿ ಕಾರ್ಯ ನಿರ್ವಹಿಸುತ್ತಿದ್ದು, ಯಾವಾಗ ವಿದ್ಯುತ್ ಸಂಪರ್ಕ ಮರುಸ್ಥಾಪನೆಯಾಗಲಿದೆ ಎಂದು ತಿಳಿದಿಲ್ಲ. ಪರಿಸ್ಥಿತಿ ನಿಯಂತ್ರಿಸಲು ಎಲ್ಲಾ ಪ್ರಯತ್ನ ನಡೆಯುತ್ತಿದೆ" ಎಂದು ಹೇಳಿದರು.

ವಿಮಾನ ನಿಲ್ದಾಣ ಬಂದ್ ಮಾಡಿರುವುದರಿಂದ ಸಾವಿರಾರು ವಿಮಾನಗಳ ಹಾರಾಟದಲ್ಲಿ ವ್ಯತ್ಯಯ ಉಂಟಾಗಿದೆ.

ದಕ್ಷಿಣ ಮತ್ತು ಸೆಂಟ್ರಲ್ ಇಂಗ್ಲೆಂಡ್‌ನ ನಾಲ್ಕು ಮಿಲಿಯನ್ ಮನೆಗಳಿಗೆ ವಿದ್ಯುತ್ ಪೂರೈಕೆ ಮಾಡುವ ಸ್ಕಾಟಿಶ್ ಮತ್ತು ಸದರ್ನ್ ಎಲೆಕ್ಟ್ರಿಸಿಟಿ ನೆಟ್‌ವರ್ಕ್, ಹಲವು ಪ್ರದೇಶದಲ್ಲಿ ತುರ್ತು ಸೇವೆಗಳನ್ನು ಪೂರೈಸುವ ಕಾರ್ಯ ಸಾಗುತ್ತಿದೆ ಎಂದು ಹೇಳಿದೆ.

ಲಂಡನ್ ಫೈರ್ ಬ್ರಿಗೇಡ್ ವರದಿ ಪ್ರಕಾರ, ಟ್ರಾನ್ಸ್‌ಫಾರ್ಮರ್‌ನೊಳಗೆ ಬೆಂಕಿ ಕಾಣಿಸಿಕೊಂಡಿದ್ದು, ಇದು ದೊಡ್ಡ ಪ್ರಮಾಣದಲ್ಲಿ ತುರ್ತು ಪರಿಸ್ಥಿತಿ ನಿರ್ಮಾಣವಾಗಿದೆ. 10 ಅಗ್ನಿಶಾಮಕದಳದ ವಾಹನ ಮತ್ತು ಸಿಬ್ಬಂದಿಗಳನ್ನು ಸ್ಥಳದಲ್ಲಿ ನಿಯೋಜಿಸಲಾಗಿದೆ. ದಟ್ಟ ಹೊಗೆ ನಿರ್ಮಾಣವಾಗಿರುವ ಕಾರಣ ಈ ಪ್ರದೇಶದ ಜನರು ಮನೆ ಮತ್ತು ಕಿಟಕಿಗಳ ಬಾಗಿಲು ಬಂದ್? ಮಾಡುವಂತೆ ಸೂಚಿಸಲಾಗಿದೆ.

ಹೀಥ್ರೂ ಯುಕೆಯ ಅತಿದೊಡ್ಡ ವಿಮಾನ ನಿಲ್ದಾಣವಾಗಿದ್ದು, ಪ್ರತಿನಿತ್ಯ ಇಲ್ಲಿಂದ 1,300ಕ್ಕೂ ಹೆಚ್ಚು ವಿಮಾನಗಳ ಹಾರಾಟ ನಡೆಯುತ್ತದೆ.

# ಚಾಕುವಿನಿಂದ ದಾಳಿ: ಮೂವರು ವಿದ್ಯಾರ್ಥಿಗಳಿಗೆ ಗಾಯ


**ಮಲಪ್ಪುರಂ:** ವಿದ್ಯಾರ್ಥಿಗಳ ನಡುವಿನ ವಾಗ್ವಾದ ಹಿಂಸಾತ್ಮಕ ಘರ್ಷಣೆಗೆ ಕಾರಣವಾಗಿದ್ದು, ಚಾಕು ದಾಳಿಗೆ ಮೂವರು ವಿದ್ಯಾರ್ಥಿ ಗಳು ಗಾಯಗೊಂಡ ಘಟನೆ ಕೇರಳ ರಾಜ್ಯದ ಮಲಪ್ಪುರಂನ ಪೆರಿಂಥಲ್ಮನ್ನ ದಲ್ಲಿರುವ ಪಿಟಿಎಂ ಹೈಯರ್ ಸೆಕೆಂಡರಿ ಶಾಲೆಯಲ್ಲಿ ನಡೆದಿದೆ. ಗಾಯ ಗೊಂಡ ಮೂವರಲ್ಲಿ ಇಬ್ಬರನ್ನು ಮಂಜೇರಿ ವೈದ್ಯಕೀಯಕಾಲೇಜಿಗೆ ಹಾಗೂ ಒಬ್ಬ ವಿದ್ಯಾರ್ಥಿಯನ್ನು ಪೆರಿಂಥಲ್ಮನ್ನಾದ ಖಾಸಗಿಆಸ್ಪತ್ರೆಗೆ ದಾಖಲಿಸಲಾಗಿದೆ. ವಿದ್ಯಾರ್ಥಿಗಳ ನಡುವೆ ಭಿನ್ನಾಭಿಪ್ರಾಯಉಂಟಾಗಿ ಪರಿಸ್ಥಿತಿ ಗಂಭೀರವಾಯಿತು ಎಂದು ಪ್ರತ್ಯಕ್ಷದರ್ಶಿಗಳು ತಿಳಿಸಿದ್ದಾರೆ. ಈ ಬಗ್ಗೆ ಮಾಹಿತಿ ನೀಡಿದ ಪೊಲೀಸರು, ಘಟನೆಯ ಬಗ್ಗೆ ವಿವರವಾದ ತನಿಖೆಯನ್ನು ಆರಂಭಿಸಲಾಗಿದ್ದು, ಶಿಕ್ಷಕರು ಹಾಗೂ ವಿದ್ಯಾರ್ಥಿಗಳ ಹೇಳಿಕೆಗಳನ್ನು ದಾಖಲಿಸಲಾಗಿದೆ. ಶಾಲೆಯ ಭದ್ರತಾ ವ್ಯವಸ್ಥೆಗಳನ್ನು ಸಹ ಅಧಿಕಾರಿಗಳು ಪರಿಶೀಲಿಸುತ್ತಿದ್ದಾರೆ ಎಂದು ತಿಳಿಸಿದರು.



# ಇಲ್ಲಿದೆ ನೋಡಿ ವಿಶ್ವದ ಅತ್ಯಂತ ಚಿಕ್ಕ ದೇಶ ಮೊಲೋಸಿಯಾ

ಸದ್ಯ ಜಗತ್ತಿನಲ್ಲಿ 225 ದೇಶಗಳಿವೆ. ಕೆಲವು ದೇಶಗಳು ಗಾತ್ರದಲ್ಲಿ ಬಹಳ ದೊಡ್ಡದಾಗಿದ್ದರೆ, ಕೆಲವು ದೇಶಗಳು ಗಾತ್ರದಲ್ಲಿ ತುಂಬಾ ಚಿಕ್ಕದಾಗಿದೆ. ಕೆಲವು ದೇಶಗಳ ಜನಸಂಖ್ಯೆಯು ಕೋಟಿ ಮತ್ತು ಶತಕೋಟಿಗಳಲ್ಲಿದೆ. ಇನ್ನು ಕೆಲವು ದೇಶಗಳ ಜನಸಂಖ್ಯೆಯು ಲಕ್ಷಗಳು ಮತ್ತು ಸಾವಿರಾರು ಇದೆ. ಇಂದು ನಾವು ನಿಮಗೆ ಅಂತಹ ಒಂದು ದೇಶದ ಬಗ್ಗೆ ಹೇಳಲು ಬಯಸುತ್ತೇವೆ. ಪ್ರಸ್ತುತ ಕೇವಲ ಮೂರು ನಾಯಿಗಳು ಮತ್ತು ಮೂರು ಜನರು ವಾಸಿಸುತ್ತಾರೆ. ಈ ಪುಟ್ಟ ದೇಶವು ಎಲ್ಲಿದೆ ಎಂಬುದನ್ನು ತಿಳಿಯೋಣ.

ನೆವಾಡದಲ್ಲಿದೆ ಈ ಪುಟ್ಟ ದೇಶ: ಈ ದೇಶವು ಅಮೆರಿಕಾ ಸಂಯುಕ್ತ ಸಂಸ್ಥಾನದ ನೆವಾಡಾ ರಾಜ್ಯದಲ್ಲಿದೆ. ಜನರು ಇದನ್ನು 'ರಿಪಬ್ಲಿಕ್ ಆಫ್ ಮೊಲೋಸಿಯಾ' ಎಂದು ಕರೆಯುತ್ತಾರೆ. ಈ ದೇಶವು ತುಂಬಾ ಚಿಕ್ಕದಾಗಿದೆ, ಆದ್ದರಿಂದ ನೀವು ಇದನ್ನು ಮೈಕ್ರೊನೇಷನ್ ಎಂದೂ ಹೇಳಾಗುತ್ತದೆ. ಈ ದೇಶವು ತನ್ನದೇ ಆದ ನೌಕಾಪಡೆ, ನೌಕಾ ಅಕಾಡೆಮಿ, ಅಂಚೆ ಸೇವೆ, ಬ್ಯಾಂಕ್, ಬಾಹ್ಯಾಕಾಶ ಯೋಜನೆ, ರೈಲ್ವೆ ಮತ್ತು ಆನ್‌ಲೈನ್ ರೇಡಿಯೊ ಕೇಂದ್ರವನ್ನು ಹೊಂದಿದೆ. ಈ ಮೈಕ್ರೊನೇಷನ್ ಅನ್ನು ಪ್ರಪಂಚದಾದ್ಯಂತ ಗ್ರ್ಯಾಂಡ್ ರಿಪಬ್ಲಿಕ್ ಆಫ್ ಗೋಲ್ಡ್‌ಸ್ಟೈನ್ ಅಥವಾ ಮೊಲೋಸಿಯಾ ಎಂದು ಕರೆಯಲಾಗುತ್ತದೆ.



,ಯಾವುದು ಆ ಚಿಕ್ಕ ದೇಶ: ಮೊಲೋಸಿಯಾ ವಿಶ್ವದ ಅತ್ಯಂತ ಚಿಕ್ಕ ದೇಶಗಳಲ್ಲಿ ಒಂದಾಗಿದೆ. ಇದರ ಒಟ್ಟು ವಿಸ್ತೀರ್ಣ 11.3 ಎಕರೆ ಆಗಿದೆ. ಇದು ನೆವಾಡಾದ ಡೇಟನ್ ನಗರದೊಳಗೆ ಈ ದೇಶವಿದೆ. ಮೊಲೋಸಿಯಾವನ್ನು 1977ರಲ್ಲಿ ಸ್ಥಾಪಿಸಲಾಯಿತು. ಈ ದೇಶದ ಜನಸಂಖ್ಯೆ ಕೇವಲ 38 ಇದೆ. ಆದರೆ ಪ್ರಸ್ತುತ ಇಲ್ಲಿ ಕೇವಲ ಮೂರು ನಾಯಿಗಳು ಮತ್ತು ಮೂರು ಜನರು ವಾಸಿಸುತ್ತಿದ್ದಾರೆ. ರಿಪಬ್ಲಿಕ್ ಆಫ್ ಮೊಲೋಸಿಯಾ ತನ್ನನ್ನು ತಾನು ಒಂದು ದೇಶವೆಂದು ಕರೆದುಕೊಂಡರೂ ಕೂಡ ವಿಶ್ವಸಂಸ್ಥೆಯಿಂದ ಇದನ್ನು ದೇಶವೆಂದು ಗುರುತಿಸಲ್ಪಟ್ಟಿಲ್ಲ. ರಿಪಬ್ಲಿಕ್ ಆಫ್ ಮೊಲೋಸಿಯಾವು ಕಾರ್ಸನ್ ಸಿಟಿಯ ಪಶ್ಚಿಮಕ್ಕೆ ಸುಮಾರು ಮೂವತ್ತು ನಿಮಿಷಗಳ ದೂರದ್ದು, ಇದು ಮೈಕ್ರೊನೇಷನ್ ಆಗಿದೆ.

ಮೊದಲು ಹೀಗೆ ಕರೆಯಲಾಗುತ್ತಿತ್ತು: ಮೊಲೋಸಿಯಾ ಎರಡು ಎಕರೆಗಿಂತ ಕಡಿಮೆ ಭೂಮಿಯಲ್ಲಿ ಹರಡಿಕೊಂಡಿದೆ. ಇದು ನೆವಾಡಾದ ಡೇಟನ್‌ನಲ್ಲಿ ಕಾರ್ಸನ್ ನದಿಯ ದಡದಲ್ಲಿದೆ. 1977ರಲ್ಲಿ ಸ್ಥಾಪಿಸಿದಾಗ ಈ ದೇಶವನ್ನು ಮೂಲತಃ ಗ್ರ್ಯಾಂಡ್ ರಿಪಬ್ಲಿಕ್ ಆಫ್ ವಾಲ್ಡ್‌ಸ್ಟೈನ್ ಎಂದು ಕರೆಯಲಾಯಿತು. ಸುಮಾರು 20 ವರ್ಷಗಳ ನಂತರ, 1998ರಲ್ಲಿ ಅದರ ಹೆಸರನ್ನು ಮೊಲೋಸಿಯಾ ಸಾಮ್ರಾಜ್ಯ ಎಂದು ಬದಲಾಯಿಸಲಾಯಿತು. ಮೊಲೋಸಿಯಾ ದೇಶದ ಅಧ್ಯಕ್ಷರ ಹೆಸರು ಕೆವಿನ್ ಬಾಗ್.

ಈ ದೇಶದಲ್ಲಿಲ್ಲ ಈರುಳ್ಳಿಗೆ ಪ್ರವೇಶ, ಕಾರಣ: ಮೊಲೋಸಿಯಾ ದೇಶಕ್ಕೆ ಬರುವ ಪ್ರವಾಸಿಗರು ಕೆಲವು ವಿಷಯಗಳ ಬಗ್ಗೆ ವಿಶೇಷ ಕಾಳಜಿ ವಹಿಸಬೇಕು. ಈ ದೇಶದಲ್ಲಿ ಕ್ಯಾಟ್‌ಫಿಶ್ ಮತ್ತು ಈರುಳ್ಳಿಯನ್ನು ನಿಷೇಧಿಸಲಾಗಿದೆ. ನೀವು ಇಲ್ಲಿಗೆ ಹೋದಾಗ, ಈ ಎರಡು ವಸ್ತುಗಳನ್ನು ನಿಮ್ಮೊಂದಿಗೆ ತೆಗೆದುಕೊಂಡು ಹೋಗಲು ಸಾಧ್ಯವಿಲ್ಲ. ಹೀಗೆ ಮಾಡಿದರೆ ಜೈಲಿಗೆ ಹೋಗಬಹುದು. ಮೊಲೋಸಿಯಾದ ರಾಷ್ಟ್ರೀಯ ಭಾಷೆ ಇಂಗ್ಲಿಷ್ ಆಗಿದೆ. ಆದರೆ, ಎಸ್ಪೆರಾಂಟೊ ಮತ್ತು ಸ್ಪ್ಯಾನಿಷ್ ಸಹ ಇಲ್ಲಿ ಮಾತನಾಡುತ್ತಾರೆ. ಮೊಲೋಸಿಯಾದ ಕರೆನ್ಸಿ ವಲೋರಾ.

ಪ್ರವಾಸಿಗರು ಏಪ್ರಿಲ್ ಮತ್ತು ಅಕ್ಟೋಬರ್‌ನಲ್ಲಿ ಮೊಲೋಸಿಯಾಕ್ಕೆ ಪ್ರವಾಸಗಳನ್ನು ಬುಕ್ ಮಾಡಬಹುದು. ಮೊಲೊಸ್ಸಿಯಾ ರೈಲ್ವೆ ಹೊಂದಿದೆ. ಆದರೆ ಕಾಲ್ನಡಿಗೆಯಲ್ಲಿ ಅದನ್ನು ಅನ್ವೇಷಿಸಲು ಉತ್ತಮವಾಗಿದೆ. ಮೊಲೋಸಿಯಾ ತನ್ನ ಸ್ವಂತ ಬ್ರಾಂಡ್ ನೀರನ್ನು ಮೊಲೋಸಿಯನ್ ವಾಟರ್ ಎಂದು ಹೊಂದಿದೆ.

ವಿಶ್ವಸಂಸ್ಥೆಯ ಯಾವುದೇ 193 ಸದಸ್ಯ ರಾಷ್ಟ್ರಗಳಲ್ಲಿ ಮೊಲೋಸಿಯಾವನ್ನು ಗುರುತಿಸಲಾಗಿಲ್ಲ. ಇಂದು ಮೊಲೊಸ್ಸಿಯಾ ವಿಶ್ವದ 200 ಮೈಕ್ರೊನೇಷನ್‌ಗಳಲ್ಲಿ ಒಂದಾಗಿದೆ. ಈ ಚಿಕ್ಕ ದೇಶಕ್ಕೆ ತೆರಳಲು ಕಾರ್ಸನ್ ಸಿಟಿಯಿಂದ ಕೇವಲ 31 ನಿಮಿಷದ ಮತ್ತು ವರ್ಜೀನಿಯಾ ಸಿಟಿಯಿಂದ 18 ನಿಮಿಷಗಳು ಬೇಕಾಗುತ್ತದೆ. ಈ ಪುಟ್ಟ ದೇಶವು ಹೆಮ್ಮೆಯ ಪರಂಪರೆ ಮತ್ತು ಇತಿಹಾಸ ಹೊಂದಿದೆ.

# ಅರ್ಚಕರ ನಡುವಿನ ವಿವಾದ ಕೊಲೆಯಲ್ಲಿ ಅಂತ್ಯ

**ರಾಜಸ್ಥಾನ:** ಜಿಲ್ಲೆಯ ಲಾಲ್ಸೋಟ್‌ನಲ್ಲಿರುವ ದೇವಾಲಯವೊಂದರಲ್ಲಿ ಸಂತರೊಬ್ಬರನ್ನು ಮತ್ತೊಬ್ಬ ಸಂತ ಇರಿದು ಕೊಂದಿರುವ ಆರೋಪ ಪ್ರಕರಣ ಶುಕ್ರವಾರ ರಾತ್ರಿ ನಡೆದಿದೆ. ಘಟನೆ ತಿಳಿಯುತ್ತಿದ್ದಂತೆ ಸ್ಥಳಕ್ಕೆ ಆಗಮಿಸಿದ ಪೊಲೀಸರು, ಪ್ರಕರಣ ದಾಖಲಿಸಿಕೊಂಡು ತಲೆಮರೆಸಿಕೊಂಡಿದ್ದ ಆರೋಪಿಯನ್ನು ವಶಕ್ಕೆ ಪಡೆಯುವಲ್ಲಿ ಯಶಸ್ವಿಯಾಗಿದ್ದಾರೆ.

ಘಟನೆ ಕುರಿತು ಮಾತನಾಡಿದ ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ದಿನೇಶ್ ಅಗರ್ವಾಲ್, ಪ್ರಾಥಮಿಕವಾಗಿ ಇಬ್ಬರ ನಡುವೆ ಆರತಿ ಮಾಡುವ ಬಗ್ಗೆ ಜಗಳ ನಡೆದಿತ್ತು. ದೇವಾಲಯದ ಮೇಲೆ ಪ್ರಾಬಲ್ಯ ಸಾಧಿಸುವ ಬಗ್ಗೆ ಜಗಳ ನಡೆದಿರಬಹುದು. ಮೂಲ ಕಾರಣವನ್ನು ತಿಳಿಯಲು ಆರೋಪಿ ಅರ್ಚಕನನ್ನು ವಿಚಾರಣೆ ನಡೆಸಲಾಗುವುದು ಎಂದರು.

ಏನಿದು ಘಟನೆ: ಜಿಲ್ಲೆಯ ಲಾಲ್ಸೋಟ್ ಪೊಲೀಸ್ ಠಾಣೆ ಪ್ರದೇಶದ ದಿಡ್ವಾನಾದ ಪಂಚಮುಖಿ ಬಾಲಾಜಿ ದೇವಸ್ಥಾನದಲ್ಲಿ ಆರತಿ ಸಮಯದಲ್ಲಿ, ಇಬ್ಬರು ಸಂತರ ನಡುವೆ ಯಾವುದೋ ವಿಷಯಕ್ಕೆ ಜಗಳವಾಗಿದೆ. ಈ ವಿವಾದದಲ್ಲಿ ಸಂತ ಪರಶುರಾಮ ದಾಸ್ ಮಹಾರಾಜರನ್ನು ಚಾಕುವಿನಿಂದ ಇರಿದು ಕೊಂದಿದ್ದಾರೆ. ಇದರಿಂದ ಗ್ರಾಮದಲ್ಲಿ ಬಿಗುವಿನ ವಾತಾರಣ ನಿರ್ಮಾಣವಾಗಿದೆ.

ಸುತ್ತಮುತ್ತಲಿನ ಪ್ರದೇಶದ ಗ್ರಾಮಸ್ಥರು ಹೆಚ್ಚಿನ ಸಂಖ್ಯೆಯಲ್ಲಿ ದೇವಾಲಯಕ್ಕೆ ಆಗಮಿಸಿ ಹತ್ಯೆ ಸಂಬಂಧ ಆಕ್ರೋಶ ವ್ಯಕ್ತಪಡಿಸಿದರು. ಘಟನೆಯ ಮಾಹಿತಿ ತಿಳಿಯುತ್ತಿದ್ದಂತೆ, ಲಾಲ್ಸೋಟ್ ನ ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ದಿನೇಶ್ ಅಗರ್ವಾಲ್, ಡಿಎಸ್ಪಿ ದಿಲೀಪ್ ಮೀನಾ ಮತ್ತು ಲಾಲ್ಸೋಟ್ ಪೊಲೀಸ್ ಠಾಣಾಧಿಕಾರಿ ಕಿಶನ್ ಮೀನಾ ಸ್ಥಳಕ್ಕೆ ತಲುಪಿ ಅಪರಾಧದ ಸ್ಥಳವನ್ನು ಪರಿಶೀಲಿಸಿದರು. ಎಫ್‌ಎಸ್‌ಎಲ್ ಮತ್ತು ಎಂಒಬಿ ತಂಡ ಸ್ಥಳದಲ್ಲಿ ಸಾಕ್ಷ್ಯ ಸಂಗ್ರಹಿಸಿದರು.



ಘಟನೆಗೂ ಮುನ್ನ ಸಿಸಿಟಿವಿ ಆಫ್: ತನಿಖೆ ವೇಳೆ ದೇವಾಲಯದಲ್ಲಿ ಅಳವಡಿಸಲಾದ ಸಿಸಿಟಿವಿ ದೃಶ್ಯಾವಳಿಗಳನ್ನು ಪರೀಕ್ಷಿಸಿದಾಗ ದೇವಾಲಯದ ಆವರಣದಲ್ಲಿ ಶಿವಪಾಲ್ ಎಂಬ ಮತ್ತೊಬ್ಬ ಸಂತ ವಾಸಿಸುತ್ತಿರುವುದು ಕಂಡುಬಂದಿದೆ. ಘಟನೆಗೂ ಮುನ್ನ ಸಂತ ಶಿವಪಾಲ್ ದೇವಾಲಯದ ಸಿಸಿಟಿವಿಗಳನ್ನು ಆಫ್ ಮಾಡಿದ್ದರು. ಕೊಲೆಗೆ ಸಂಚು ರೂಪಿಸಿ ಅವರು ಸಿಸಿಟಿವಿ ಆಫ್ ಮಾಡಿರುವುದು ಮೇಲ್ನೋಟಕ್ಕೆ ಕಂಡು ಬಂದಿದೆ.

ತಲೆಮರೆಸಿಕೊಂಡಿದ್ದ ಸಂತ ಪತ್ತೆಗೆ ತಕ್ಷಣಕ್ಕೆ ಪೊಲೀಸ್ ತಂಡಗಳು ಸಕ್ರಿಯಗೊಂಡು ಆರೋಪಿಗಾಗಿ ಹುಡುಕಾಟ ಆರಂಭಿಸಿದದರು. ಹಲವು ಗಂಟೆಗಳ ಬಳಿಕ ಪೊಲೀಸರು ಸವಾಯಿ ಮಾಧೋಪುರ್ ರಸ್ತೆಯಿಂದ ಆರೋಪಿಯನ್ನು ಬಂಧಿಸಿದರು. ಈ ವೇಳೆ ಗಾಯಗೊಂಡಿದ್ದ ಅವರನ್ನು ಚಿಕಿತ್ಸೆಗಾಗಿ ಲಾಲ್ಸೋಟ್ ಆಸ್ಪತ್ರೆಗೆ ದಾಖಲಿಸಲಾಯಿತು.

ಕೊಲೆಗೆ ಕಾರಣಗಳ ತನಿಖೆ ನಡೆಸುತ್ತಿರುವ ಪೊಲೀಸರು: ಚಿಕಿತ್ಸೆಯ ನಂತರ ಆರೋಪಿ ಆರೋಪಿ ಸಂತ ಶಿವಪಾಲ್ ಅವರನ್ನು ಪೊಲೀಸರು ಬಂಧಿಸಲಿದ್ದಾರೆ. ಈ ವಿವಾದದ ಹಿಂದಿನ ನಿಜವಾದ ಕಾರಣ ಇನ್ನೂ ಬಹಿರಂಗವಾಗಿಲ್ಲ.

# ಭಾರತದಲ್ಲಿ 1 ಬಿಲಿಯನ್ ಟನ್ ಕಲ್ಲಿದ್ದಲು ಉತ್ಪಾದನೆ



**ನವದೆಹಲಿ:** ಪ್ರಧಾನಿ ನರೇಂದ್ರ ಮೋದಿ ಇಂದು 1 ಬಿಲಿಯನ್ ಟನ್ ಕಲ್ಲಿದ್ದಲು ಉತ್ಪಾದನೆಯನ್ನು ಸಾಧಿಸಿದ್ದಕ್ಕಾಗಿ ಕಲ್ಲಿದ್ದಲು ಸಚಿವಾಲಯವನ್ನು ಅಭಿನಂದಿಸಿದ್ದಾರೆ. ಎಕ್ಸ್‌ನಲ್ಲಿ ಈ ಬಗ್ಗೆ ಪೋಸ್ಟ್ ಮಾಡಿದ ಪ್ರಧಾನಿ ಮೋದಿ, ಈ ಸಾಧನೆಯು "ಇಂಧನ ಭದ್ರತೆ, ಆರ್ಥಿಕ ಬೆಳವಣಿಗೆ ಮತ್ತು ಸ್ವಾವಲಂಬನೆಗೆ ಗಮನಾರ್ಹ ಬದ್ಧತೆಯನ್ನು" ಸೂಚಿಸುತ್ತದೆ. ಇದು "ಭಾರತಕ್ಕೆ ಹೆಮ್ಮೆಯ ಕ್ಷಣ" ಎಂದು ಕರೆದಿದ್ದಾರೆ. ಕೇಂದ್ರ ಕಲ್ಲಿದ್ದಲು ಮತ್ತು ಗಣಿ ಸಚಿವ ಜಿ. ಕಿಶನ್ ರೆಡ್ಡಿ ಅವರು ಎಕ್ಸ್‌ನಲ್ಲಿ ಮೈಲಿಗಲ್ಲನ್ನು ಹಂಚಿಕೊಂಡಿದ್ದರು. ಭಾರತ ಈ ಮಹತ್ವದ ಉತ್ಪಾದನಾ ಮಟ್ಟವನ್ನು ತಲುಪಿದೆ ಎಂದಿದ್ದರು.

"ಭಾರತವು 1 ಬಿಲಿಯನ್ ಟನ್ ಕಲ್ಲಿದ್ದಲು ಉತ್ಪಾದನೆಯನ್ನು ದಾಟಿದೆ ಅತ್ಯಾಧುನಿಕ ತಂತ್ರಜ್ಞಾನಗಳು ಮತ್ತು ದಕ್ಷ ವಿಧಾನಗಳೊಂದಿಗೆ, ನಾವು ಉತ್ಪಾದನೆಯನ್ನು ಹೆಚ್ಚಿಸಿದ್ದೇವೆ. ಇಷ್ಟು ಮಾತ್ರವಲ್ಲದೆ ಸುಸ್ಥಿರ ಮತ್ತು ಜವಾಬ್ದಾರಿಯುತ ಗಣಿಗಾರಿಕೆಯನ್ನು ನಡೆಸುತ್ತಿದ್ದೇವೆ. ಈ ಸಾಧನೆಯು ದೇಶದ ಹೆಚ್ಚುತ್ತಿರುವ ಇಂಧನ ಬೇಡಿಕೆಗಳನ್ನು ಪೂರೈಸಲು, ಆರ್ಥಿಕ ಬೆಳವಣಿಗೆಗೆ ಚಾಲನೆ ನೀಡಲು ಮತ್ತು ಪ್ರಧಾನಿ ಮೋದಿಯವರ ದೂರದೃಷ್ಟಿಯ ನಾಯಕತ್ವದಲ್ಲಿ ಪ್ರತಿಯೊಬ್ಬ ಭಾರತೀಯನ ಉಜ್ವಲ ಭವಿಷ್ಯಕ್ಕೆ ಕೊಡುಗೆ ನೀಡಲು ಸಹಾಯ ಮಾಡುತ್ತದೆ" ಎಂದು ಕಿಶನ್ ರೆಡ್ಡಿ ತಮ್ಮ ಪೋಸ್ಟ್‌ನಲ್ಲಿ ಹೇಳಿದ್ದರು.

# ‘ಶಿಕ್ಷೆ ಕೊಡಲು ಸಿನಿಮಾ ತೋರಿಸಿದರು’



ಸೈಫ್ ಅಲಿ ಖಾನ್ ಮಗ ಇಬ್ರಾಹಿಮ್ ಅಲಿ ಖಾನ್ ಹಾಗೂ ಶ್ರೀದೇವಿ ಮಗಳು ಖುಷಿ ಕಪೂರ್ ನಟಿಸಿದ ‘ನಾದಾನಿಯಾ’ ಸಿನಿಮಾ ಇತ್ತೀಚೆಗೆ ರಿಲೀಸ್ ಆಗಿದೆ. ಈ ಚಿತ್ರ ಸಾಕಷ್ಟು ಟ್ರೋಲ್ ಆಗುತ್ತಿದೆ.

ಇಬ್ಬರೂ ನೆಪೋಟಿಸಂ ಹಿನ್ನೆಲೆ ಹೊಂದಿದ್ದಾರೆ. ಜೊತೆಗೆ ಕಳಪೆ ನಟನೆ ಮಾಡಿದ್ದಾರೆ. ಈ ಕಾರಣಕ್ಕೆ ಸಾಕಷ್ಟು ಟ್ರೋಲ್ ಆಗುತ್ತಿದ್ದಾರೆ. ಈಗ ಸ್ಟ್ಯಾಂಡಪ್ ಕಾಮಿಡಿಯನ್ ಪ್ರಣೀತ್ ಮೋರೆ ಅವರು ಈ ಚಿತ್ರವನ್ನು ಹಾಗೂ ಯುವ ಕಲಾವಿದರ ನಟನೆಯನ್ನು ತೀವ್ರವಾಗಿ ಟೀಕೆ ಮಾಡಿದ್ದಾರೆ.

ಮಾರ್ಚ್ 7ರಂದು ‘ನಾದಾನಿಯಾ’ ಸಿನಿಮಾ ನೆಟ್‌ಫ್ಲಿಕ್ಸ್ ಮೂಲಕ ಪ್ರಸಾರ ಆರಂಭಿಸಿದೆ. ಖುಷಿ ಕಪೂರ್ ಅವರು ನಟನೆ ಮಾಡೋದನ್ನು ಬಿಟ್ಟು ಕತ್ತನ್ನು ಅಲ್ಲಾಡಿಸಿದ್ದಾರೆ. ಇದನ್ನೇ ಅವರು ನಟನೆ ಎಂದುಕೊಂಡಿದ್ದಾರೆ ಎಂಬ ಟ್ರೋಲ್‌ಗಳು ಹರಿದಾಡುತ್ತಿವೆ.

ಒಂದೊಮ್ಮೆ ಶ್ರೀದೇವಿ ಇದ್ದಿದ್ದರೆ ಮಗಳ ನಟನೆ ನೋಡಿ ಖಂಡಿತವಾಗಿಯೂ ಆಘಾತ ಆಗುತ್ತಿತ್ತು ಎಂದು ಕೆಲವರು ಅಭಿಪ್ರಾಯಪಟ್ಟಿದ್ದಾರೆ. ‘ಸೈಫ್ ಅಲಿ ಖಾನ್ ಮೇಲೆ ಅಟ್ಯಾಕ್ ಮಾಡಿದ ವ್ಯಕ್ತಿಗೆ ಶಿಕ್ಷೆಯಾಗಿ ‘ನಾದಾನಿಯಾ’ ಸಿನಿಮಾ ತೋರಿಸಲಾಗಿದೆ ಎಂದು ಪ್ರಣೀತ್ ಟೀಕಿಸಿದ್ದಾರೆ.

‘ಖುಷಿ ಕಪೂರ್ ಅವರ ಲೆವೆಲ್ ಬೇರೆಯದೇ ಹಂತದಲ್ಲಿ ಇದೆ. ಖುಷಿ ಕಪರೂರ್ ಅವರು ಕೆಟ್ಟದಾಗಿ ನಟಿಸಿದ್ದಾರೆ. ವಿಶೇಷ ಎಂದರೆ ನಿರಂತರವಾಗಿ ಅವರು ಕೆಟ್ಟದಾಗಿ ನಟಿಸಿದ್ದಾರೆ. ಖುಷಿ ಅವರ ಕೊನೆಯ ಸಿನಿಮಾ ಆಮಿರ್ ಖಾನ್ ಮಗ ಜುನೈದ್ ಖಾನ್ ಜೊತೆ ಬಂದಿತ್ತು. ಆ ಸಿನಿಮಾ ಆಮಿರ್ ಖಾನ್ ಇಮೇಜ್‌ನ ಹಾಳು ಮಾಡಿತು. ಈಗ ಸೈಫ್ ಅಲಿ ಖಾನ್ ಅವರ ಇಮೇಜ್ ಹಾಳಾಗಿದೆ’ ಎಂದು ಹೇಳಿದ್ದಾರೆ.

‘ಸೈಫ್ ಮಗ ಎಷ್ಟು ಕೆಟ್ಟದಾಗಿ ನಟಿಸಿದ್ದಾನೆ ಎಂದರೆ ನ್ಯಾಯಾಧೀಶರು ಸೈಫ್ ಮೇಲೆ ದಾಳಿ ಮಾಡಿದವನಿಗೆ ‘ನಾನು ನಿಮಗೆ ಶಿಕ್ಷೆ ವಿಧಿಸುವುದಿಲ್ಲ, ನೀವು ನಾದಾನಿಯಾ ಚಿತ್ರವನ್ನು ಎರಡು ಬಾರಿ ನೋಡಬೇಕು’ ಎಂದರು. ಆ ವ್ಯಕ್ತಿ ನನ್ನ ಕತ್ತನ್ನು ಸೀಳಿ ಎಂದು ಕೂಗುತ್ತಿದ್ದಾನೆ’ ಎಂದಿದ್ದಾರೆ ಅವರು.

ಈ ಚಿತ್ರವನ್ನು ಶೌನಾ ಗೌತಮ್ ಅವರು ನಿರ್ದೇಶನ ಮಾಡಿದ್ದಾರೆ. ಇದು ಲವ್ ಸ್ಟೋರಿಯನ್ನು ಹೊಂದಿದೆ. ಈ ಚಿತ್ರದ ಬಗ್ಗೆ ಮಾತನಾಡಿದ್ದ ನಿರ್ಮಾಪಕ ಕರಣ್ ಜೋಹರ್ ಅವರು, ಟ್ರೋಲ್‌ಗಳಿಂದ ಏನೂ ಬದಲಾಗುವುದಿಲ್ಲ ಎಂದಿದ್ದಾರೆ.

## ‘ಮಾತನಾಡೋದೇ ಜನರ ಕೆಲಸ’

ಬಾಲಿವುಡ್ ನಿರ್ಮಾಪಕ ಕರಣ್ ಜೋಹರ್ ತಮ್ಮ ಇತ್ತೀಚಿನ ’ನದಾನಿಯನ್’ ಸಿನಿಮಾ ಸುತ್ತಲಿನ ಟೀಕೆಗಳನ್ನು ತಳ್ಳಿಹಾಕಿದ್ದಾರೆ. ಈ ಸಿನಿಮಾ ಮೂಲಕ ಸೈಫ್ ಅಲಿ ಖಾನ್ ಅವರ ಪುತ್ರ ಇಬ್ರಾಹಿಂ ಅಲಿ ಖಾನ್ ಚಿತ್ರರಂಗ ಪ್ರವೇಶಿಸಿದ್ದಾರೆ. ಇತ್ತೀಚೆಗೆ ತಮ್ಮ ನಿರ್ಮಾಣದ ಪಂಜಾಬಿ ’ಅಕಾಲ್’ ಚಿತ್ರದ ಟ್ರೇಲರ್ ಬಿಡುಗಡೆ ಸಮಾರಂಭದಲ್ಲಿ, ಕರಣ್ ಜೋಹರ್, ಯುವ ಕಲಾವಿದರ ಬಗೆಗಿನ ನೆಗೆಟಿವ್ ರಿವ್ಯೂವ್ಸ್ ಮತ್ತು ಟ್ರೋಲಿಂಗ್ ಬಗ್ಗೆ ಪ್ರತಿಕ್ರಿಯಿಸಿದರು.

’ನದಾನಿಯನ್’ ವಿರುದ್ಧದ ಟೀಕೆಗಳ ಬಗ್ಗೆ ಪ್ರಶ್ನಿಸಿದಾಗ, ಕರಣ್ ಜೋಹರ್ ಹಳೇ ಬಾಲಿವುಡ್ ಹಾಡಿನ ಪ್ರಸಿದ್ಧ ಸಾಲನ್ನು ಉಲ್ಲೇಖಿಸಿದರು. "ಕುಚ್ ತೋ ಲೋಗ್ ಕಹೆಂಗೆ, ಲೋಗೋ ಕಾ ಕಾಮ್ ಹೈ ಕೆಹನಾ. ಛೋಡೋ ಬೇಕಾರ್ ಕಿ ಬಾತೇ, ಬೀತ್ ನ ಜಾಯೇ ರಾತೆ (ಜನ ಏನಾದರು ಹೇಳುತ್ತಾರೆ, ಹೇಳೋದೇ ಜನರ ಕೆಲಸ, ರಾತ್ರಿ ಕಳೆದುಹೋಗುವ ಮೊದಲು ಅನಗತ್ಯ ಹರಟೆ ಬಿಟ್ಟುಬಿಡಿ)" ಎಂದು ತಿಳಿಸಿದರು.

ವಿಮರ್ಶಕರಿಂದ ಬಂದ ಕಟು ವಿಮರ್ಶೆಗಳನ್ನು ಅವರು ಒಪ್ಪಿಕೊಂಡರು. ಆದರೆ ಅವರ ಅಭಿಪ್ರಾಯಗಳನ್ನು ಗೌರವಿಸುತ್ತೇನೆಂದು ಸಹ ತಿಳಿಸಿದ್ದಾರೆ. "ವಿಮರ್ಶಕರೊಂದಿಗಿನ ನನ್ನ ಸಂಬಂಧ ಅವರ ವಿಮರ್ಶೆಗಳಿಂದಾಗಿ ಎಂದಿಗೂ ಬದಲಾಗುವುದಿಲ್ಲ. ಅದು ನಿಮ್ಮ ಕೆಲಸ. ಆದರೆ ಕೆಲವರು ಸಿನಿಮಾವನ್ನು ಸೋಲಿಸೋ ಸಲುವಾಗಿ ಉದ್ದೇಶಪೂರ್ವಕವಾಗಿ ಇದನ್ನು ಮಾಡುತ್ತಿದ್ದಾರೆ" ಎಂದು ಹೇಳಿದರು.

ಅದಾಗ್ಯೂ, ವಿಮರ್ಶಕರು ಮತ್ತು ಟ್ರೋಲ್‌ಗಳ ನಡುವಿನ ವ್ಯತ್ಯಾಸವನ್ನು ಕರಣ್ ಎತ್ತಿ ಹಿಡಿದರು. ಆನ್‌ಲೈನ್ ಟ್ರೋಲ್ಸ್ ಸಾಮಾನ್ಯವಾಗಿ ನಕಾರಾತ್ಮಕ ಕಾಮೆಂಟ್‌ಗಳ ಮೂಲಕ ತಮ್ಮ ವೈಯಕ್ತಿಕ ಹತಾಶೆಯನ್ನು ವ್ಯಕ್ತಪಡಿಸುತ್ತವೆ ಎಂದು ಟೀಕಿಸಿದರು. "ಕೆಲವೊಮ್ಮೆ, ಟ್ರೋಲ್‌ಗಳು ಈ ರೀತಿಯ ಕೆಲಸಗಳನ್ನು ಮಾಡುತ್ತವೆ, ಆದ್ರೆ ಅವರು ಹೆಸರಿಲ್ಲದ ಜನರು, ತಮ್ಮ ಸಮಸ್ಯೆಗಳನ್ನು ನಮ್ಮ ಮೇಲೆ ತೋಡಿಕೊಳ್ಳುವ ಬಡ ಆತ್ಮಗಳು. ನನಗೆ ಅವರ ಬಗ್ಗೆ ಕರುಣೆ ಇದೆ, ಬೇರೇನೂ ಅಭಿಪ್ರಾಯವಿಲ್ಲ" ಎಂದು ತಿಳಿಸಿದರು.

"ನಾನು ನಿಜವಾಗಿಯೂ ಎಲ್ಲಾ ವಿಮರ್ಶಕರನ್ನು ಗೌರವಿಸುತ್ತೇನೆ. ಆದರೆ ಕೆಲ ವಿಷಯಗಳನ್ನು ಓದಿದಾಗ, ಅವರು ಯಾರೊಬ್ಬರ ಮಗಳು ಮತ್ತು ಮಗ ಆಗಿರುತ್ತಾನೆ. ಅವರ ಪೋಷಕರು ಸಹ ಆ ವಿಮರ್ಶೆಗಳನ್ನು ಓದುತ್ತಾರೆ. ಓರ್ವ ವಿಮರ್ಶಕ ’ನಾನು ಈ ಚಿತ್ರವನ್ನು ಒದೆಯಲು ಬಯಸುತ್ತೇನೆ’ ಎಂದು ಬರೆದಿದ್ದರು. ಇಂತಹ ಜನರೊಂದಿಗೆ ನನಗೆ ಸಮಸ್ಯೆ ಇದೆ" ಎಂದು ತಿಳಿಸಿದರು.

# ತನ್ನದೇ ಹೆಸರನ್ನು ತಪ್ಪಾಗಿ ಕರೆದುಕೊಂಡ ರಣಬೀರ್

ರಣಬೀರ್ ಕಪೂರ್ ಹಾಗೂ ಆಮಿರ್ ಖಾನ್ ಇತ್ತೀಚೆಗೆ ಜಾಹೀರಾತೊಂದರಲ್ಲಿ ಒಟ್ಟಾಗಿ ಕಾಣಿಸಿಕೊಂಡಿದ್ದರು. ಈ ಜಾಹೀರಾತಿನಲ್ಲಿ ಆಮಿರ್ ಖಾನ್ ಅವರು ರಣಬೀರ್ ಕಪೂರ್‌ನ ರಣಬೀರ್ ಸಿಂಗ್ ಎಂದು ಕರೆಯುತ್ತಾರೆ. ಇದಕ್ಕೆ ರಣಬೀರ್ ಸಿಟ್ಟಾಗುತ್ತಾರೆ. ಈ ರೀತಿಯಲ್ಲಿ ಜಾಹೀರಾತು ಮೂಡಿ ಬಂದಿತ್ತು. ಈಗ ರಣಬೀರ್ ಕಪೂರ್ ಅವರೇ ತಮ್ಮ ಹೆಸರನ್ನು ತಪ್ಪಾಗಿ ಕರೆದುಕೊಂಡಿದ್ದಾರೆ!

ಈ ಸಂದರ್ಭದ ವಿಡಿಯೋ ಸೋಶಿಯಲ್ ಮೀಡಿಯಾದಲ್ಲಿ ವೈರಲ್ ಆಗಿದೆ. ರಣಬೀರ್ ಕಪೂರ್ ಬಳಿ ಬರುವ ಆಮಿರ್ ಖಾನ್ ಅವರು ರ್‍ಯಾಪಿಡ್ ಫೈಯರ್ ನಡೆಸು ತ್ತಾರೆ. ಇದರಲ್ಲಿ ‘ಭಾರತದ ಫೇಮಸ್ ವ್ರೆಸ್ಲರ್ ಹೆಸರನ್ನು’ ಹೇಳಿ ಎಂಬ ಆಮಿರ್ ಪ್ರಶ್ನೆಗೆ ‘ದಾರಾ ಸಿಂಗ್’ ಎನ್ನುತ್ತಾರೆ, ಫ್ಲೈಯಿಂಗ್ ಸಿಖ್‌ಗೆ



‘ಮಿಲ್ಖಾ ಸಿಂಗ್ ಎನ್ನುತ್ತಾರೆ. ಕೊನೆಯಲ್ಲಿ ಸಿಂಗ್ ಉತ್ತರ ಬರುವ ಅನೇಕ ಪ್ರಶ್ನೆಗಳನ್ನು ಆಮಿರ್ ಖಾನ್ ಕೇಳಿದ್ದಾರೆ.


ಸಿಂಗ್.. ಸಿಂಗ್ ಎಂದು ಉತ್ತರ ಹೇಳುತ್ತಾ.. ‘ನಿಮ್ಮ ಹೆಸರು’ ಎಂದು ಕೇಳಿ ದಾಗ ರಣಬೀರ್ ಕಪೂರ್ ಎನ್ನುವ ಬದಲು ರಣಬೀರ್ ಸಿಂಗ್ ಎನ್ನುತ್ತಾರೆ.

ಆಗ ಆಮಿರ್ ಖಾನ್ ಅವರು ಸಾಕಷ್ಟು ನಕ್ಕಿದ್ದಾರೆ. ಇದು ಫನ್‌ಗಾಗಿ ಮಾಡಿದ ವಿಡಿಯೋ ಎಂದು ಅನೇಕರು ಅಭಿಪ್ರಾಯಪಟ್ಟಿದ್ದಾರೆ.

ಇತ್ತೀಚೆಗೆ ಡ್ರೀಮ್ 11 ಜಾಹೀರಾತಿನಲ್ಲಿ ರೋಹಿತ್ ಶರ್ಮಾ, ರಿಷಭ್ ಪಂತ್, ಹಾರ್ದಿಕ್ ಪಾಂಡ್ಯ, ಜಸ್‌ಪ್ರೀತ್ ಬೂಮ್ರಾ, ರಣಬೀರ್ ಕಪೂರ್, ಆಮಿರ್ ಖಾನ್ ಸೇರಿದಂತೆ ಅನೇಕರು ಇದ್ದರು. ಈಗ ವೈರಲ್ ಆಗಿರೋದು ಜಾಹೀರಾತಿನ ಮುಂದುವರಿದ ಭಾಗದ ರೀತಿ ಇದು ಮೂಡಿ ಬಂದಿದೆ.

ಸಿನಿಮಾ ವಿಚಾರಕ್ಕೆ ಬರೋದಾದರೆ ಆಮಿರ್ ಖಾನ್ ಅವರು ‘ಸಿತಾರೇ ಜಮೀನ್ ಪರ್’ ಸಿನಿಮಾದಲ್ಲಿ ಬ್ಯುಸಿ ಇದ್ದಾರೆ. ರಣಬೀರ್ ಕಪೂರ್ ಅವರು ‘ರಾಮಾಯಣ’ ಸಿನಿಮಾದಲ್ಲಿ ತೊಡಗಿಕೊಂಡಿದ್ದು, ‘ಲವ್‌ಆ್ಯಂಡ್ ವಾರ್’ ಚಿತ್ರದಲ್ಲೂ ಅವರು ನಟಿಸಬೇಕಿದೆ. ಈ ಸಿನಿಮಾಗೆ ಸಂಜಯ್ ಲೀಲಾ ಬನ್ಸಾಲಿ ನಿರ್ದೇಶನ ಇದೆ.

# 82ನೇ ವಯಸ್ಸಲ್ಲಿ ಕೋಟಿ ದುಡಿಯುವ ಅಮಿತಾಭ್



ನಟ ಅಮಿತಾಭ್ ಬಚ್ಚನ್ ಅವರು 120 ಕೋಟಿ ರೂಪಾಯಿ ತೆರಿಗೆ ಪಾವತಿಸಿದ ವಿಚಾರ ಸಾಕಷ್ಟು ಸುದ್ದಿ ಆಗುತ್ತಿದೆ. ಅಮಿತಾಭ್ ಬಚ್ಚನ್ ಅವರ ವರ್ಷದ ಆದಾಯ ಎಷ್ಟಿರಬಹುದು ಎನ್ನುವ ಚರ್ಚೆಗಳು ನಡೆಯುತ್ತಿವೆ. ಈ ಎಲ್ಲಾ ಪ್ರಶ್ನೆಗಳಿಗೂ ಉತ್ತರ ಸಿಕ್ಕಿದೆ. ಇದರ ಜೊತೆ ಅವರು ಒಂದು ದಿನದ ಆದಾಯ ಸುಮಾರು ಒಂದು ಕೋಟಿ ರೂಪಾಯಿನಷ್ಟಿದೆ. ಅವರು ಇಷ್ಟೆಲ್ಲ ಗಳಿಕೆ ಮಾಡಲು ಕಾರಣ ಆಗಿದ್ದು ಆ ಒಂದು ಪ್ರಾಜೆಕ್ಟ್ ಎನ್ನಲಾಗುತ್ತಿದೆ.

ಅಮಿತಾಭ್ ಬಚ್ಚನ್ ಅವರು ಭಾರತೀಯ ಚಿತ್ರರಂಗದ ದುಬಾರಿ ನಟರಲ್ಲಿ ಒಬ್ಬರು. ಅವರಿಗೆ 82 ವಸಂತಗಳು ಕಳೆದಿದ್ದು, 83ನೇ ವರ್ಷ ನಡೆಯುತ್ತಿದೆ. ಅವರು 2024–25ನೇ ಆರ್ಥಿಕ ಸಾಲಿನಲ್ಲಿ ಬರೋಬ್ಬರಿ 120 ಕೋಟಿ ರೂಪಾಯಿ ತೆರಿಗೆ ಪಾವತಿ ಮಾಡಿದ್ದಾರೆ. ಈ ಮೂಲಕ ಭಾರತದಲ್ಲಿ ಅತಿ ಹೆಚ್ಚು ತೆರಿಗೆ ಪಾವತಿ ಮಾಡಿದ ಹೀರೋ ಎನಿಸಿಕೊಂಡಿದ್ದಾರೆ.

ಅಮಿತಾಭ್ ಬಚ್ಚನ್ ಅವರು ಈ ಆರ್ಥಿಕ ಸಾಲಿನಲ್ಲಿ ಬರೋಬ್ಬರಿ 350 ಕೋಟಿ ರೂಪಾಯಿ ಗಳಿಕೆ ಮಾಡಿದ್ದಾರೆ. ಅಂದರೆ ಒಂದು ದಿನಕ್ಕೆ ಅವರ ಆದಾಯ ಬರೋಬ್ಬರಿ 95 ಲಕ್ಷ ರೂಪಾಯಿ. ಇಷ್ಟು ದೊಡ್ಡ ಮೊತ್ತದಲ್ಲಿ ಅವರು ಗಳಿಕೆ ಮಾಡಿರುವುದರಿಂದಲೇ ಅವರು 120 ಕೋಟಿ ರೂಪಾಯಿ ತೆರಿಗೆ ಪಾವತಿ ಮಾಡಿದ್ದಾರೆ.

‘ಕೌನ್ ಬನೇಗಾ ಕರೋಡ್ಪತಿ 16’ ಕಾರ್ಯಕ್ರಮವನ್ನು ನಡೆಸಿಕೊಟ್ಟಿದ್ದಾರೆ. ಇದಕ್ಕೆ ಅವರು ಪ್ರತಿ ಎಪಿಸೋಡ್‌ಗೆ ತೆಗೆದುಕೊಂಡಿದ್ದು ಬರೋಬ್ಬರಿ 5 ಕೋಟಿ ರೂಪಾಯಿ. ಈ ಮೂಲಕ ಅವರು ಭಾರತದ ದುಬಾರಿ ಹೋಸ್ಟ್ ಎನಿಸಿಕೊಂಡಿದ್ದಾರೆ. ಇದರಿಂದಾಗಿಯೇ ಅವರ ಗಳಿಕೆ ಹೆಚ್ಚಿದೆ. ಇದರ ಜೊತೆಗೆ ಅವರು ಸಿನಿಮಾ ಗಳಿಕೆ, ಬ್ರ್ಯಾಂಡ್‌ಗಳ ಪ್ರಚಾರಗಳಿಂದ ಹಣ ಮಾಡುತ್ತಾರೆ.

# ಸೀಬೆಕಾಯಿ ಮಾರುವ ಮಹಿಳೆಯ ಪ್ರಾಮಾಣಿಕತೆಗೆ ಮಾರು ಹೋದ ಪ್ರಿಯಾಂಕಾ

ಪ್ರಿಯಾಂಕಾ ಚೋಪ್ರಾ ಈಗ ಹಾಲಿವುಡ್ ನಟಿ. ಬಾಲಿವುಡ್‌ನಲ್ಲಿ ಸಖತ್ ಆಗಿ ಮಿಂಚಿ ಟಾಪ್ ನಟಿ ಎನಿಸಿಕೊಂಡ ಬಳಿಕ ಹಾಲಿವುಡ್‌ಗೆ ಪದಾರ್ಪಣೆ ಮಾಡಿದರು ಈ ನಟಿ. ಹಾಲಿವುಡ್‌ನಲ್ಲಿ ಇದ್ದರೂ ಸಹ ಭಾರತವನ್ನು ಭಾರತೀಯ ಮೈಂಡ್ ಸೆಟ್ ಅನ್ನು ಪ್ರಿಯಾಂಕಾ ಚೋಪ್ರಾ ಬಿಟ್ಟುಕೊಟ್ಟಿಲ್ಲ.

ಇದೀಗ ಹಲವು ವರ್ಷಗಳ ಬಳಿಕ ಪ್ರಿಯಾಂಕಾ ಚೋಪ್ರಾ ಭಾರತೀಯ ಸಿನಿಮಾದಲ್ಲಿ ನಟಿಸುತ್ತಿದ್ದಾರೆ. ರಾಜಮೌಳಿ ನಿರ್ದೇಶಿಸಿ, ಮಹೇಶ್ ಬಾಬು ನಟಿಸುತ್ತಿರುವ ಸಿನಿಮಾದಲ್ಲಿ ಪ್ರಿಯಾಂಕಾ ಚೋಪ್ರಾ ನಟಿಸುತ್ತಿದ್ದು, ಇದರ ಚಿತ್ರೀಕರಣಕ್ಕಾಗಿ ಭಾರತಕ್ಕೆ ಬಂದು ಹೋಗಿ ಮಾಡುತ್ತಿದ್ದಾರೆ.

ಮೊದಲಿಗೆ ಹೈದರಾಬಾದ್‌ನಲ್ಲಿ ನಡೆದ ಚಿತ್ರೀಕರಣದಲ್ಲಿ ಭಾಗಿಯಾಗಿದ್ದ ನಟಿ ಪ್ರಿಯಾಂಕಾ ಚೋಪ್ರಾ ಬಳಿಕ ಒಡಿಸ್ಸಾನಲ್ಲಿ ಸಹ ಚಿತ್ರೀಕರಣದಲ್ಲಿ ಭಾಗಿ ಆಗಿದ್ದರು. ಇದೀಗ ವಿಶಾಖಪಟ್ಟಣಂ ಸಮೀಪ ನಡೆದ ಚಿತ್ರೀಕರಣದಲ್ಲಿಯೂ ಪಾಲ್ಗೊಂಡಿದ್ದರು. ಚಿತ್ರೀಕರಣ ಮುಗಿದ ಬಳಿಕ ಪ್ರಿಯಾಂಕಾ ಚೋಪ್ರಾ ವಿಮಾನ ನಿಲ್ದಾಣಕ್ಕೆ ತೆರಳುವ ಸಮಯದಲ್ಲಿ ನಡೆದ ಅಪರೂಪದ ಘಟನೆಯೊಂದನ್ನು ಸಾಮಾಜಿಕ ಜಾಲತಾಣದಲ್ಲಿ ಹಂಚಿಕೊಂಡಿದ್ದಾರೆ.

ಪ್ರಿಯಾಂಕಾ ಚೋಪ್ರಾ, ಇತ್ತೀಚೆಗಷ್ಟೆ ವಿಶಾಖಪಟ್ಟಣಂ ವಿಮಾನ ನಿಲ್ದಾಣಕ್ಕೆ ಕಾರಿನಲ್ಲಿ ತೆರಳುತ್ತಿದ್ದರಂತೆ. ಅಲ್ಲಿಂದ ಮುಂಬೈಗೆ ಹೋಗಿ, ಮುಂಬೈನಿಂದ ನ್ಯೂಯಾರ್ಕ್‌ಗೆ ಹೋಗುವುದು ಅವರ ಉದ್ದೇಶವಾಗಿತ್ತಂತೆ. ವಿಶಾಖಪಟ್ಟಣಂ ವಿಮಾನ ನಿಲ್ದಾಣಕ್ಕೆ ಕಾರಿನಲ್ಲಿ ತೆರಳುವಾದ ರಸ್ತೆಯ ಬದಿಯಲ್ಲಿ ಕೆಲ ಮಹಿಳೆಯರು ಸೀಬೆಹಣ್ಣು ಮಾರಾಟ ಮಾಡುತ್ತಿದ್ದರಂತೆ. ಅವರಲ್ಲಿ ಒಬ್ಬರ ಬಳಿ ಸೀಬೆಹಣ್ಣು ಖರೀದಿ ಮಾಡಿದರಂತೆ ನಟಿ ಪ್ರಿಯಾಂಕಾ ಚೋಪ್ರಾ.

ಸೀಬೆಹಣ್ಣಿಗೆ 150 ರೂಪಾಯಿಗಳಾದುವೆಂದು ಪ್ರಿಯಾಂಕಾ ಚೋಪ್ರಾಗೆ ಹೇಳಿದ್ದಾರೆ. ಆದರೆ ಪ್ರಿಯಾಂಕಾ ಚೋಪ್ರಾ, 200 ರೂಪಾಯಿ ನೋಟು ಆ ಮಹಿಳೆಯ ಕೈಗೆ ಕೊಟ್ಟು ಚಿಲ್ಲರೆಯನ್ನು ನೀವೇ ಇರಿಸಿಕೊಳ್ಳಿ ಎಂದಿದ್ದಾರೆ. ಆದರೆ ಉಚಿತವಾಗಿ ಬಂದ ಹಣವನ್ನು ತೆಗೆದುಕೊಳ್ಳಲು ಒಪ್ಪದ ಆ ಮಹಿಳೆ, ಪ್ರಿಯಾಂಕಾ ಚೋಪ್ರಾ ಕೈಗೆ ಇನ್ನೆರಡು ಸೀಬೆಹಣ್ಣು ನೀಡಿದರಂತೆ. ಈ ವಿಷಯವನ್ನು ನಟಿ ತಮ್ಮ ಸಾಮಾಜಿಕ ಜಾಲತಾಣದಲ್ಲಿ ಹಂಚಿಕೊಂಡಿದ್ದಾರೆ.

ಪ್ರಿಯಾಂಕಾ ಚೋಪ್ರಾ ಇದೀಗ ಮಹೇಶ್ ಬಾಬು, ರಾಜಮೌಳಿಯ ಜೊತೆಗೆ ಸಿನಿಮಾದಲ್ಲಿ ನಟಿಸುತ್ತಿದ್ದಾರೆ. ಹಲವು ವರ್ಷಗಳ ಬಳಿಕ ಭಾರತೀಯ ಸಿನಿಮಾದಲ್ಲಿ ನಟಿಸುತ್ತಿದ್ದಾರೆ ನಟಿ ಪ್ರಿಯಾಂಕಾ ಚೋಪ್ರಾ. ಇನ್ನು ಹಾಲಿವುಡ್‌ನಲ್ಲಿ ‘ಹೆಡ್ಸ್ ಆಫ್ ದಿ ಸ್ಟೇಟ್ಸ್’ ಮತ್ತು ‘ದಿ ಬ್ಲಫ್’ ಸಿನಿಮಾಗಳಲ್ಲಿ ಸಹ ನಟಿಸುತ್ತಿದ್ದಾರೆ.



# ‘ಅಯ್ಯೋ ಬಿಡಿ, ಅದು ಫ್ಲಾಪ್ ಸಿನಿಮಾ’

ನಟಿ ಹಾಗೂ ರಾಜಕಾರಣಿ ಜಯಾ ಬಚ್ಚನ್ ಆಗಾಗ ಸುದ್ದಿ ಆಗುತ್ತಲೇ ಇರುತ್ತಾರೆ. ಅವರು ಒಂದಲ್ಲಾ ಒಂದು ವಿಚಾರವನ್ನು ಮಾತನಾಡಿ ಸುದ್ದಿ ಆಗುತ್ತಾರೆ.

ಈಗ ಜಯಾ ಬಚ್ಚನ್ ಅವರು ಅಕ್ಷಯ್ ಕುಮಾರ್ ನಟನೆಯ ‘ಟಾಯ್ಲೆಟ್: ಏಕ್ ಪ್ರೇಮ್ ಕಥಾ’ ಚಿತ್ರದ ಬಗ್ಗೆ ಮಾತನಾಡಿದ್ದಾರೆ. ಈ ಚಿತ್ರವನ್ನು ಅವರು ಟೀಕೆ ಮಾಡಿದ್ದಾರೆ. ಇದನ್ನು ಫ್ಲಾಪ್ ಸಿನಿಮಾ ಎಂದು ಹೀಗಳೆದಿದ್ದಾರೆ. ಇದು ಸಾಮಾಜಿಕವಾಗಿ ಜಾಗೃತಿ ಮೂಡಿಸಲು ಮಾಡಿದ ಚಿತ್ರವಾಗಿತ್ತು. ಇದನ್ನು ಹೀಗಳಿದಿದ್ದಕ್ಕೆ ಅವರನ್ನು ಟೀಕಿಸಲಾಗಿದೆ.



ಇಂಡಿಯಾ ಟಿವಿ ಕಾನ್‌ಕ್ಲೇವ್‌ನಲ್ಲಿ ಜಯಾ ಮಾತನಾಡಿದ್ದಾರೆ. ಅವರು ಕೆಲವು ಸಿನಿಮಾಗಳನ್ನು ನೋಡುವುದಿಲ್ಲ ಎಂದಿದ್ದಾರೆ. ಅದರಲ್ಲೂ ಟೈಟಲ್ ನೋಡಿಕೊಂಡು ತಾವು ಸಿನಿಮಾ ವೀಕ್ಷಿಸುವುದಾಗಿ ಹೇಳಿದ್ದಾರೆ. ಈ ವೇಳೆ ಅವರು ‘ಟಾಯ್ಲೆಟ್ ಏಕ್ ಪ್ರೇಮ್ ಕಥಾ’ ಚಿತ್ರದ ಬಗ್ಗೆ ಮಾತನಾಡಿ ಟೀಕೆ ಮಾಡಿದ್ದಾರೆ. ‘ಆ ಸಿನಿಮಾದ ಟೈಟಲ್ ನೋಡಿ. ಈ ರೀತಿ ಟೈಟಲ್ ಇರೋ ಸಿನಿಮಾನ ನಾನು ಎಂದಿಗೂ ವೀಕ್ಷಿಸುವುದಿಲ್ಲ. ಇದು ನಿಜಕ್ಕೂ ಹೆಸರೇ’ ಎಂದು ಜಯಾ ಬಚ್ಚನ್ ಅವರು ಪ್ರಶ್ನೆ ಮಾಡಿದ್ದಾರೆ. ‘ಈ ರೀತಿ ಟೈಟಲ್ ಇರೋ ಸಿನಿಮಾನ ನೀವು ವೀಕ್ಷಿಸುತ್ತೀರಾ’ ಎಂದು ಪ್ರಶ್ನೆ ಮಾಡಲಾಯಿತು. ಇದಕ್ಕೆ ಹೌದು ಎಂಬ ಉತ್ತರವನ್ನು ಕೆಲವರು ನೀಡಿದರು.

ಅಲ್ಲಿಗೆ ಜಯಾ ಬಚ್ಚನ್ ಅವರು ಕೂರಲೇ ಇಲ್ಲ. ‘ಇಷ್ಟು ಜನರಲ್ಲಿ ಕೆಲವೇ ಕೆಲವರು ಈ ಚಿತ್ರವನ್ನು ನೋಡಿದ್ದಾರೆ. ಇದು ಫ್ಲಾಪ್ ಸಿನಿಮಾ’ ಎಂದು ಅವರು ಹೇಳಿದ್ದಾರೆ. ಅವರ ಹೇಳಿಕೆ ಸಾಕಷ್ಟು ಚರ್ಚೆಗಳನ್ನು ಹುಟ್ಟುಹಾಕಿದೆ.

2017ರಲ್ಲಿ ‘ಟಾಯ್ಲೆಟ್: ಏಕ್ ಪ್ರೇಮ್ ಕಥಾ’ ಸಿನಿಮಾರಿಲೀಸ್ ಆಯಿತು. ಕೇಶವ್ (ಅಕ್ಷಯ್ ಕುಮಾರ್) ಜಯಾ ಜೊತೆ (ಭೂಮಿ ಪಡ್ನೇಕರ್) ಪ್ರೀತಿ ಬೆಳೆದು ಮದುವೆ ಆಗುತ್ತಾರೆ. ಮನೆಯಲ್ಲಿ ಟಾಯ್ಲೆಟ್ ಇಲ್ಲ ಎಂದು ಜಯಾ ದೂರುತ್ತಾಳೆ. ಆಗ ಕೇಶವ್ ಟಾಯ್ಲೆಟ್ ನಿರ್ಮಾಣಕ್ಕೆ ಮುಂದಾಗುತ್ತಾರೆ. ಆದರೆ, ಅದು ಸುಲಭ ಆಗಿರುವುದಿಲ್ಲ. ಇದನ್ನು ಕಟ್ಟಲು ಅನೇಕರು ವಿರೋಧಿಸುತ್ತಾರೆ.

ಅಕ್ಷಯ್ ಕುಮಾರ್ ನಟನೆಯ ‘ಸ್ಕೈ ಫೋರ್ಸ್’ ಸಿನಿಮಾ ಇತ್ತೀಚೆಗೆ ರಿಲೀಸ್ ಆಗಿದೆ. ‘ವೀರ್ ಪಾರಿಯಾ’ ಅವರು ಇದರಲ್ಲಿ ನಟಿಸಿದ್ದಾರೆ. ದಿನೇಶ್ ವಿಜನ್, ಸಾರಾ ಅಲಿ ಖಾನ್ ಮೊದಲಾದವರು ನಟಿಸಿದ್ದಾರೆ.

Edited, Published and Owned by Laxmiprasanna R.H, #1652/6, 20th Cross, 8th Main, C Block, SahakarNagar, Bangalore-560092. Printed by P N Printers, Narasipalya, Arishinakunte(Post), Kasaba(hobali), Nelamangala, Bengaluru-562123
Email-mussanje2010@gmail.com, Phone: 9448074878